ರೂ. 2.00
ಸೆಪ್ಟೆಂಬರ್ 19, 1993

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 15
ಸಂಚಿಕೆ 37

ಅತ್ಯಂತ ಯಶಸ್ವಿ ಭಾರತ್ ಬಂದ್

ಕಾರ್ಮಿಕ ವರ್ಗದ ನೇತೃತ್ವದಲ್ಲಿ ಇತಿಹಾಸ ಸೃಷ್ಟಿಸಿದ ಬೃಹತ್ ಕಾರ್ಯಾಚರಣೆ

ಸೆಪ್ಟೆಂಬರ್ 9, 1993 ಭಾರತದ ಜನಾಂದೋಲನದ ಇತಿಹಾಸದಲ್ಲೇ ಒಂದು ಅತ್ಯಂತ ಯಶಸ್ವೀ ದಿನವಾಗಿ ದಾಖಲಾಗಿದೆ. ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ದೇಶಾದ್ಯಂತ 2 ಕೋಟಿಗೂ ಹೆಚ್ಚು ಕಾರ್ಮಿಕರು, ನೌಕರರು ಮುಷ್ಕರ ನಡೆಸಿದರು. ಇನ್ನು ಕೋಟ್ಯಾಂತರ ರೈತರು, ಕೃಷಿ ಕಾರ್ಮಿಕರು, ಯುವಕರು, ವಿದ್ಯಾರ್ಥಿಗಳು, ಮಹಿಳೆಯರು ಬಂದ್‌ನಲ್ಲಿ ಭಾಗವಹಿಸಿದರು. ದೇಶಾದ್ಯಂತ ಜೀವನ ಅಸ್ತವ್ಯಸ್ತಗೊಂಡಿತ್ತು ಎಂಬ ಸತ್ಯ ಕಳೆದ ವಾರದಿಂದಲೇ ಭರದ ಅಪಪ್ರಚಾರ ನಡೆಸಿದ ದೂರದರ್ಶನ ಸೆಪ್ಟೆಂಭರ್ 9 ರ ಕಾರ್ಯಕ್ರಮಗಳಿಂದ, ಅದು ಪ್ರಸಾರ ಮಾಡಿದ ಸುಳ್ಳುಗಳ ನಡುವಿನಿಂದಲೇ ಬಂಡವಾಳಶಾಹೀ ಪತ್ರಿಕೆಗಳ ಸಂಪಾದಕೀಯ ಉಪದೇಶಗಳ ಸುದ್ದಿಕಾಲಂಗಳ ನಡುವಿನಿಂದಲೇ ಪ್ರತ್ಯಕ್ಷಗೊಂಡಿತು. ಬಂಗಾಳ, ಬಿಹಾರ, ಅಸ್ಸಾಂ, ತ್ರಿಪುರಾ, ಕೇರಳ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ, ಬಂದ್ ಪೂರ್ಣವಾಗಿ ನಡೆಯಿತು. ಕರ್ನಾಟಕದಲ್ಲೂ ಬಂದ್ ಅತ್ಯಂತ ಯಶಸ್ವಿಯಾಗಿ ನಡೆದಿದೆ ಎಂದು ರಾಜ್ಯದ ಮೂಲೆ ಮೂಲೆಗಳಿಂದ ಬರುತ್ತಿರುವ ಸುದ್ದಿಗಳಿಂದ ತಿಳಿದುಬಂದಿದೆ. ಹಲವಾರು ರಾಜ್ಯಗಳಲ್ಲಿ ಶೇ. 80ರಷ್ಟು ಸರಕಾರೀ ನೌಕರರು ಮುಷ್ಕರ ನಡೆಸಿದರು. ಕೇಂದ್ರ ಸರಕಾರೀ ನೌಕರರು ಸರಕಾರದ ಎಚ್ಚರಿಕೆಯನ್ನು ಲೆಕ್ಕಿಸದೆ ಬಂದ್ ಕರೆಗೆ ಹಲವೆಡೆ ಓಗೊಟ್ಟರು. ಹಣಕಾಸು ವಲಯದ ನೌಕರರ ಮುಷ್ಕರದಿಂದ ಈ ವಲಯದಲ್ಲೂ ವ್ಯವಹಾರ ಸ್ಥಗಿತಗೊಂಡಿತು. ಸಾರ್ವಜನಿಕ ಉದ್ದಿಮೆಗಳ, ಅಂಚೆ- ತಂತಿ ಇಲಾಖೆಗಳ ನೌಕರರೂ ಮುಷ್ಕರದ ಕರೆಗೆ ಓಗೊಟ್ಟಿದ್ದಾರೆ.

ಈ ಬೃಹತ್ ಕಾರ್ಯಾಚರಣೆ ದೇಶವನ್ನು ಮಾರ ಹೊರಟಿರುವ ನರಸಿಂಹರಾವ್ ಸರಕಾರದ ನೀತಿಗಳ ವಿರುದ್ಧ ಹೋರಾಟನ್ನು ಇನ್ನಷ್ಟು ಶಕ್ತಿಗೂಡಿಸಿಕೊಂಡು ಮುಂದೊಯ್ಯಲು ದುಡಿಯುವ ಜನಗಳಲ್ಲಿ, ಅವರಿಗೆ ನೇತೃತ್ವ ನೀಡುತ್ತಿರುವ ಕಾರ್ಮಿಕ ವರ್ಗದಲ್ಲಿ ಹೊಸ ಹುರುಪು ತಂದಿದೆ.

1991 ಜೂನಿನಲ್ಲಿ ನವದೆಹಲಿಯಲ್ಲಿ ಅಧಿಕಾರದ ಗದ್ದುಗೆಯನ್ನೇರಿದ ಪಿ.ವಿ. ನರಸಿಂಹರಾವ್ ನೇತೃತ್ವದ ಕಾಂಗ್ರೆಸ್(ಐ) ಸರಕಾರವು ವಿದೇಶೀ ವ್ಯಾಪಾರದಲ್ಲಿ ಪಾವತಿ ಶೇಷದ ಸಮಸ್ಯೆಯನ್ನು ತೋರಿಸಿ ಅಂತರ್‍ರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತು ವಿಶ್ವಬ್ಯಾಂಕ್‌ಗಳಿಂದ, ಆ ಸಂಸ್ಥೆಗಳು ಹಾಕಿದ ಷರತ್ತುಗಳನ್ನು ಒಪ್ಪಿ, ಸಾಲವನ್ನು ಪಡೆದು ಆ ಷರತ್ತುಗಳನ್ನು ತನ್ನ ಹೊಸ ಆರ್ಥಿಕ ನೀತಿ ಮತ್ತು ಕೈಗಾರಿಕಾ ನೀತಿಗಳ ಮೂಲಕ ಕಾರ್ಯಗತ ಮಾಡ ಲಾರಂಭಿಸಿತು. ಪರಿಣಾಮವಾಗಿ, ಬೆಲೆಗಳು ಏರುತ್ತಾ ಬಂದಿವೆ, ನಿರುದ್ಯೋಗವು ಹೆಚ್ಚುತ್ತಿದೆ, ಕಾರ್ಖಾನೆಗಳು ಮುಚ್ಚುತ್ತಿವೆ, ಶಿಕ್ಷಣ ಶುಲ್ಕ ವಿಪರೀತವಾಗಿ ಏರಿದೆ, ಬಡತನ ವಿಷವರ್ತುಲದಂತೆ ಏರುತ್ತಿದೆ, ಸಾರ್ವಜನಿಕ ಕ್ಷೇತ್ರದ ಖಾಸಗೀಕರಣವಾಗುತ್ತಿದ್ದು ದೇಶದ ಆರ್ಥಿಕ ಸ್ವಾವಲಂಬನೆಗೆ ಕೊಡಲಿ ಪೆಟ್ಟು ಬೀಳುತ್ತಿದೆ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಬೆಲೆಗಳು ದುಬಾರಿಯಾಗಿ ದೇಶವು ವಿದೇಶೀ ಸಾಲದ ಬಲೆಗೆ ಬೀಳುತ್ತಿದೆ, ವ್ಯವಸಾಯವು ನಷ್ಟಕರವಾಗುತ್ತಾ ಬಂದಿದೆ. ನರಸಿಂಹರಾವ್ ಸರಕಾರದ ನೀತಿಗಳು ದೇಶದಲ್ಲಿ ಸರ್ವತೋಮುಖವಾದ ಬಿಕ್ಕಟ್ಟನ್ನು ನಿರ್ಮಿಸುತ್ತಿದೆ.

ಈ ಅಪಾಯವನ್ನು ಮನಗಂಡ ಕಾರ್ಮಿಕ ವರ್ಗವು 1991ರ ಬಜೆಟ್ಟನ್ನು ವಿರೋಧಿಸಿ ಪ್ರತಿಭಟನಾ ಚಳುವಳಿ ನಡೆಸಿತು, 1991ರ ನವೆಂಬರ್ 29ರಂದು, 1992ರ ಜೂನ್ 16 ರಂದು ಎರಡು ಅಖಿಲ ಭಾರತ ಮುಷ್ಕರಗಳನ್ನು ನಡೆಸಿತು. 1992ರ ನವೆಂಬರ್ 2 ರಂದು ಸಂಸತ್ತಿನ ಮುಂದೆ ಬೃಹತ್ ಪ್ರದರ್ಶನವನ್ನು ನಡೆಸಿತು. ಹೋರಾಟದ ಮುಂದಿನ ಹಂತವಾಗಿ ಭಾರತ್ ಬಂದ್ ನಡೆಸಲು ನಿರ್ಧರಿಸಿತು.

1991ರ ಸೆಪ್ಟೆಂಬರ್ 15ರಂದು ನವದೆಹಲಿಯಲ್ಲಿ ಹೊಸ ಆರ್ಥಿಕ ನೀತಿಯನ್ನು ವಿರೋಧಿಸುವ ಕೇಂದ್ರ ಕಾರ್ಮಿಕ ಸಂಘಗಳು ಒಂದು ಅಖಿಲ ಭಾರತ ಸಮಾವೇಶವನ್ನು ನಡೆಸಿ ಹೋರಾಟವನ್ನು ಮುನ್ನಡೆಸಲು ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯನ್ನು ರಚಿಸಿ ಮೇಲೆ ಹೇಳಿದ ಹೋರಾಟಗಳನ್ನು ಮಾಡಿದುವು.

ಕೃಷಿ ಪ್ರಧಾನ ದೇಶವಾಗಿರುವ ಭಾರತದಲ್ಲಿ ತನ್ನಿಂದ ಮಾತ್ರವೇ ಭಾರತ್ ಬಂದನ್ನು ನಡೆಸಲು ಆಗದು ಎಂದು ಅರಿತ ಕಾರ್ಮಿಕ ವರ್ಗವು 1993 ಏಪ್ರಿಲ್ 15 ರಂದು ಹೊಸ ಆರ್ಥಿಕ ನೀತಿಯನ್ನು ವಿರೋಧಿಸುವ ರೈತಸಂಘಗಳು, ಕೃಷಿ ಕೂಲಿಕಾರ ಸಂಘಗಳು, ಯುವಕರ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು, ಮಹಿಳಾ ಸಂಘಟನೆಗಳು, ವಕೀಲರ ಸಂಘಟನಗಳೇ ಮೊದಲಾದ ಸಾಮೂಹಿಕ ಸಂಘಟನೆಗಳನ್ನು ಆಮಂತ್ರಿಸಿ ಒಂದು ಸಮಾವೇಶವನ್ನು ನಡೆಸಿತು. ಅಲ್ಲಿಂದ ಮೊಳಗಿದ ರಣಕಹಳೆಗಳು ಆಗಸ್ಟ್ 19ರ ಜೈಲ್ ಭರೋ, ಸೆಪ್ಟೆಂಬರ್ 9ರ ಭಾರತ್ ಬಂದ್. ಹೋರಾಟಗಳ ಮಾರ್ಗದರ್ಶನಕ್ಕೆ "ಸಾಮೂಹಿಕ ಸಂಘಟನೆಗಳ ವೇದಿಕೆ"ಯು ಮೂಡಿ ಬಂದಿತು.

ಹತ್ತು ಲಕ್ಷಕ್ಕಿಂತಲೂ ಹೆಚ್ಚು ಜನರು ಆಗಸ್ಟ್ 19ರಂಧು ಜೈಲಿಗೆ ಹೋದರು.

ಸೆಪ್ಟೆಂಬರ್ 9ರ ಭಾರತ್ ಬಂದ್ ಯಶಸ್ವಿಯಾಗಿ ನಡೆದಿದೆ. ಉತ್ಪಾದನೆ ಸ್ಥಗಿತವಾಗಿದೆ. ರೈಲು, ಬಸ್‌ಗಳು ದೇಶದ ಬಹುತೇಕ ಕಡೆ ನಿಂತಿವೆ. 9ರಂದು ಮದರಾಸಿನಿಂದ ಬಂದ ಬೃಂದಾವನ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಕೇವಲ 20 ಪ್ರಯಾಣಿಕರಿದ್ದರು. ಬೆಂಗಳೂರಿನ ಬಸ್ ನಿಲ್ದಾಣದಲ್ಲಿ ಹೊರಡಲು ಕೆಲವು ಬಸ್‌ಗಳು ಇದ್ದರೂ ಆ ಬಸ್ಸುಗಳನ್ನು ಹತ್ತಲು ಪ್ರಯಾಣಿಕರಿರಲಿಲ್ಲ. ಈ ಮೂಲಕವೂ ಜನರ ಪ್ರತಿಭಟನೆ ವ್ಯಕ್ತವಾಯಿತು. 9ರಂದು ನಡೆದ ಬಂದ್‌ನಿಂದ ರಾಜ್ಯದಲ್ಲಿ ಕೆ.ಎಸ್.ಆರ್.ಟಿ.ಸಿ.ಗೆ ಒಂದು ಕೋಟಿ ರೂಪಾಯಿ ನಷ್ಟವಾಯಿತೆಂದರೆ ಭಾರತ್ ಬಂದ್‌ನಲ್ಲಿ ಭಾರತದ ಜನ ಕೋಟಿಯ ಪ್ರತಿಭಟನೆಯ ಎಂತಹ ಪ್ರಹಾರವನ್ನು ಕೊಟ್ಟಿದೆ ಎಂಬುದು ನರಸಿಂಹರಾವ್-ಮನಮೋಹನಸಿಂಗ್‌ರ ಕೂಟಕ್ಕೆ ಗೊತ್ತಾಗಿರಬೇಕು, ಅವರಿಗೆ ಸಾಲ ಕೊಟ್ಟಿರುವ ಅಂತರ್‍ರಾಷ್ಟ್ರೀಯ ಮಾರವಾಡಿಗಳಾದ ಐಎಂಎಫ್, ವಿಶ್ವಬ್ಯಾಂಕ್‌ಗಳಿಗೂ ಮುಟ್ಟಿರಬೇಕು.

ಬಂದ್ ಯಶಸ್ವಿನ ಬಗ್ಗೆ ದಿನಪತ್ರಿಕೆಗಳ ಅಂದಾಜು ಏನೇ ಇದ್ದರೂ ಸಹ ಭಾರತದ ಚರಿತ್ರೆಯಲ್ಲಿ ಮೊದಲ ಬಾರಿಗೆ ಸಾಮೂಹಿಕ ಸಂಘಟನೆಗಳು ಕರೆ ಕೊಟ್ಟು ಅಖಿಲ ಭಾರತ ಮುಷ್ಕರ ಮತ್ತು ಭಾರತ್ ಬಂದ್ ನಡೆದಿವೆ. ಈ ಹೋರಾಟಕ್ಕೆ ರಾಷ್ಟ್ರೀಯ ರಂಗ ಮತ್ತು ಎಡರಂಗಗಳು ಬೆಂಬಲ ಕೊಟ್ಟವು.

ಬ್ರಿಟಿಷ್ ವಸಾಹತುಶಾಹಿಗಳಿಂದ ಸ್ವಾತಂತ್ರ್ಯವನ್ನು ಪಡೆಯಲು ನಡೆದ ರಾಷ್ಟ್ರೀಯ ವಿಮೋಚನಾ ಚಳುವಳಿಗೆ ಬಂಡವಾಳಗಾರರು ನಾಯಕತ್ವವನ್ನು ಕೊಟ್ಟಿದ್ದರು. ನಮ್ಮ ದೇಶವನ್ನು ಆರ್ಥಿಕ ದಾಸ್ಯಕ್ಕೆ ದೂಡುವ, ಸಾಮ್ರಾಜ್ಯಶಾಹಿಗಳ ಷಡ್ಯಂತ್ರಗಳ ಮುಂದೆ ಶರಣಾಗುತ್ತಿರುವ ನರಸಿಂಹರಾವ್- ಮನಮೋಹನಸಿಂಗ್ ಕೂಟವು ಶರಣಾಗುತ್ತಿರುವ ಸಂದರ್ಭದಲ್ಲಿ ನಡೆಯುತ್ತಿರುವ ಹೋರಾಟಕ್ಕೆ ಕಾರ್ಮಿಕ ವರ್ಗವು ನಾಯಕತ್ವ ಕೊಡುತ್ತಿರುವುದು ಗಮನಾರ್ಹವಾಗಿದೆ.

ಈ ಬಂದ್‌ನಲ್ಲಿ ರಕ್ಷಣಾ ಸ್ಥಾವರಗಳೂ ಸಹ ಬಂದ್ ಆದುವು.

ಅಖಿಲ ಭಾರತ ಮುಷ್ಕರ ಮತ್ತು ಬಂದ್‌ಗಳನ್ನು ವಿರೋಧಿಸುವಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಒಂದಾದುವು. ಐಎನ್‌ಟಿಯುಸಿ ಮತ್ತು ಬಿಎಂಎಸ್‌ಗಳ ಕರೆಗಳನ್ನು ಕಾರ್ಮಿಕರು ತಿರಸ್ಕರಿಸಿದರು.

ಈ ದೇಶವ್ಯಾಪಿ ಹೋರಾಟದ ನಂತರವೂ ಸಹ ನರಸಿಂಹರಾವ್ ಸರಕಾರವು ತನ್ನ ಜನವಿರೋಧಿ ನೀತಿಗಳನ್ನು ಬದಲಿಸದಿದ್ದರೆ ಭಾರತದ ಜನಸ್ತೋಮವು ಇನ್ನೂ ಅನೇಕ ಪ್ರತಿಭಟನಾ ಹೋರಾಟಗಳನ್ನು ಹೂಡುವುದು. ಈ ಎಲ್ಲಾ ಹೋರಾಟಗಳಿಗೆ ಭಾರತದ ಕಾರ್ಮಿಕ ವರ್ಗವು ನಾಯಕತ್ವವನ್ನು ಕೊಡುವುದು.

ಭಾರತದ ಭವಿಷ್ಯವನ್ನು ನಿರ್ಮಿಸುವವರು ಭಾರತದ ದುಡಿಮೆಗಾರರು.

[ಕರ್ನಾಟಕದ ಬಗ್ಗೆ ವರದಿ ಪುಟ 7 ನೋಡಿ]

ಪಶ್ಚಿಮಬಂಗಾಳದ ಎಡರಂಗದ ಮಹತ್ವಪೂರ್ಣ ಜಯ

ಸೆಪ್ಟೆಂಬರ್ 6 ರಂದು ಪಶ್ಚಿಮಬಂಗಾಳ ವಿಧಾನಸಭೆಗೆ ನಡೆದ ಮೂರು ಉಪಚುನಾವಣೆಗಳಲ್ಲಿ ಮೂರನ್ನೂ ಎಡರಂಗ ಗೆದ್ದುಕೊಂಡು ದೆಹಲಿಯಲ್ಲಿ ಅವಿಶ್ವಾಸ ಕರಾ...ದ ನಂತರ ತಮ್ಮ 'ಬಂಗಾಳ ಲೈನ್'ಗೆ ...ಯಶಸ್ಸು ದೊರೆತಿದೆ ಎಂದು ಬೀಗುತ್ತಿದ್ದ ...ಮಮತಾ ಬ್ಯಾನರ್ಜಿ ಬ್ರಾಂಡಿನ ಕಾಂಗ್ರೆಸ್ಸಿಗೂ, ಮತ್ತೊಮ್ಮೆ ತನ್ನ ಕಾಂಗ್ರೆ ಪರ ...ಪ್ರಚಾರವನ್ನು ತೋರಿದ ಶೇಷನ್‌ಗೂ ಮುಖಭಂಗಮಾಡಿದೆ. ಸಾಮಾನ್ಯ...ವಾಗಿ ಕಾಂಗ್ರೆಸ್ ಕೋಟೆಯೆಂದೇ ಭಾವಿ...ದ ತುರ್ತುಪರಿಸ್ಥಿತಿ ನಂತರ 1977ರ ಜನತಾ ಅಲೆ ಬಿಟ್ಟರೆ ಬೇರೆಲ್ಲಾ ಸಂದರ್ಭಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನೇ ಆರಿಸಿದ ಕಲ್ಕತ್ತಾ ನಗರದ ಚೌರಿಂಗೀ ಕ್ಷೇತ್ರದಲ್ಲೂ ಎಡರಂಗ ಬೆಂಬಲಿತ ಅಭ್ಯರ್ಥಿಯ ಗೆಲುವು 16 ವರ್ಷಗಳ ದೀರ್ಘಕಾಲ ಸತತ ಆಳ್ವಿಕೆಯ ನಂತರ ಎಡರಂಗ ಜನಗಳ ವಿಶ್ವಾಸ ಕಳೆದುಕೊಳ್ಳುತ್ತಿದೆ ಎಂಬ ಬಂಡವಾಳಶಾಹೀ ಪತ್ರಿಕೆಗಳ ಪ್ರಚಾರದ ಹಿಂದಿರುವ ಪಕ್ಷಪಾತ ಬುದ್ಧಿಯನ್ನು ಮತ್ತೊಮ್ಮೆ ತೆರೆದಿಟ್ಟಿದೆ. ಸಿಪಿಐ(ಎಂ) ನೇತೃತ್ವದ ಎಡರಂಗದ ಈ ವಿಜಯ ನಿಜಕ್ಕೂ ಗಮನಾರ್ಹವಾದುದು.

'ಕಾಂಗ್ರೆಸ್ (ಐ)ಗೆ, ಇತರ ಬಿಜೆಪಿಯೇತರ ವಿರೋಧಪಕ್ಷಗಳಿಗೂ ಒಂದು ಪಾಠ ಎಂದು ಆ ಪತ್ರಿಕೆಗಳೇ ಹೇಳುವಂತಾಗಿದೆ.

ಚೌರಿಂಗೀ ಕ್ಷೇತ್ರದಲ್ಲಿ ಎಡರಂಗ ಬೆಂಬಲಿತ ಅಭ್ಯರ್ಥಿ ಪ್ರಖ್ಯಾತ ರಂಗ ಹಾಗೂ ಚಲನಚಿತ್ರ ನಟರಷ್ಟೇ ಅಲ್ಲ ಚಲನಚಿತ್ರ ಉದ್ಯಮದ ದುಡಿಯುವ ತಾಂತ್ರಿಕ ಕೆಲಸರಿಗಾಗಿ, ಕಾರ್ಮಿಕರು ಹಾಗೂ ಇತರರಿಗೂ ಶ್ರಮಿಸುತ್ತಿರುವ ಟ್ರೇಡ್ ಯೂನಿಯನ್ ಮುಖಂಡರೂ ಆಗಿರುವ ಅನಿಲ್ ಚಟರ್ಜಿ, ಕಾಂಗ್ರೆಸ್(ಐ)ನ ಸಿದ್ದಾರ್ಥ ಶಂಕರರಾಯ್ ಮಂತ್ರಿಮಂಡಳದಲ್ಲಿ ಮಂತ್ರಿಯಾಗಿದ್ದ ಬೋಲಾನಾಥ್ ಸೇನ್‌ರನ್ನು 679 ಮತಗಳಿಂದ ಸೋಲಿಸಿದರು. ಪಂಚಾಯಿತು ಚುನಾವಣೆಗಳಲ್ಲಿ ತನ್ನ ಮಿತ್ರನಾಗಿದ್ದ ಬಿಜೆಪಿ ಪಕ್ಷದ ಅಭ್ಯರ್ಥಿಯ ಹೆಚ್ಚಿನ ಮತಗಳು ಕಾಂಗ್ರೆಸ್ (ಐ) ಸೋಲಿಗೆ ಕಾರಣವೆಂದು ಹೇಳಿರುವ ಪತ್ರಿಕೆಗಳೇ ಎಡರಂಗದ ಮತಗಳಿಕೆರುವ ಹಿಂದಿನ ಚುನಾವಣೆಯಲ್ಲಿ ಶೇ. 31. 4 ಇದ್ದದ್ದು ಈ ಬಾರಿ ಶೇ. 41.20 ಕ್ಕೇರಿದೆ ಎಂಬುದನ್ನು ಗಮನಿಸಿವೆ. ಹಿಂದಿನ ಚುನಾವಣೆಯಲ್ಲಿ 16833 ಮತಗಳಿಂದ ಗೆದ್ದ ಸಿದ್ದಾರ್ಥ ಶಂಕರರಾಯ್‌ರವರು ಅಮೇರಿಕಾಕ್ಕೆ ಭಾರತದ ರಾಯಭಾರಿಯಾಗಿ ನೇಮಕವಾದುದರಿಂದ ಈ ಚುನಾವಣೆ ನಡೆಯಿತು.

ಇನ್ನೆರಡು ಕ್ಷೇತ್ರಗಳಾದ ಡಾರ್ಜಿಲಿಂಗ್ ಹಾಗೂ ಕುರ್ಸಿಯಾನ್‌ನಲ್ಲಿ ಎಡರಂಗ ಅಭ್ಯರ್ಥಿಗಳ ಭಾರೀ ವಿಜಯಗಳಿಸಿದ್ದಾರೆ. ಡಾರ್ಜಿಲಿಂಗ್‌ನಲ್ಲಿ ಸಿಪಿಐ(ಎಂ) ದಾವಾ ಲಾಮಾ 12827 ಮತಪಡೆದರೆ, ನಿಕಟ ಪ್ರತಿಸ್ಪರ್ಧಿ ಗೋರ್ಖಾ ಡೆಮಾಕ್ರಟಿಕ್ ಫ್ರಂಟ್‌ನ ಡಾ. ಸಿ.ಕೆ. ಸುಬ್ಬಾ 6763 ಮತ ಪಡೆದರು. ಕಾಂಗ್ರೆಸ್ ಅಭ್ಯರ್ಥಿ ಕೇವಲ 24 24 ಮತಗಳಿಸಿದರು. ಕುರ್ಸಿಯಾಂಗ್‌ನಲ್ಲಿ ಸಿಪಿಐ(ಎಂ) ಅಭ್ಯರ್ಥಿ ತುಲಸೀ ಭಟ್ಟಚಾರ್ಯ ತಮ್ಮ ಸಮೀಪದ ಕಾಂಗ್ರೆ ಪ್ರತಿಸ್ಪರ್ಧಿಯಾಗಿರುವ 23485 ಹೆಚ್ಚು ಮತಗಳಿಂದ ಗೆದ್ದರು.

ಧರ್ಮ ಮತ್ತು ರಾಜಕೀಯ ಕುರಿತಾದ ಮಸೂದೆಗಳು

ವಿಳಂಬವಿಲ್ಲದೆ ಅಂಗೀಕಾರಗೊಳ್ಳಬೇಕು

ಪಿ.ಡಿ. ಸಂಪಾದಕೀಯ

ಸಂಸತ್ತಿನ ಮಳೆಗಾಲದ ಅಧಿವೇಶನದ ಆರಂಭದಲ್ಲಿ ಸರಕಾರ ಮಂಡಿಸಿದ ಎರಡು ಮಸೂದೆಗಳು, ಎಂಬತ್ತನೇ ಸಂವಿಧಾನ (ತಿದ್ದುಪಡಿ) ಮಸೊದೆ ಹಾಗೂ ಜನತಾ ಪ್ರಾತಿನಿಧ್ಯ (ತಿದ್ದುಪಡಿ) ಮಸೊದೆಗಳನ್ನು ಸೆಲೆಕ್ಟ್ ಸಮಿತಿ ಪ್ರಮುಖ ತಿದ್ದುಪಡಿಗಳನ್ನು ಸೂಚಿಸಿದ ನಂತರವೂ ಮುಂದೂಡಲಾಗಿದೆ. ಈ ಮಸೂದೆಗಳು ಶಾಸನಗಳಾದರೆ ಚುನಾವಣೆಗಳಲ್ಲಿ ತಮ್ಮ ನಗ್ನ ಕೋಮುವಾದೀ ಪ್ರಚಾರವನ್ನು ನಡೆಸುವುದು ಕಷ್ಟವಾಗುತ್ತದೆ ಎಂಬ ಕಾರಣಕ್ಕೆ ಬಿಜೆಪಿಯಂತೂ ಈ ಮಸೂದೆಗಳ ವಿರುದ್ಧ ದೃಢ ಹೋರಾಟ ನೀಡಲು ನಿರ್ಧರಿಸಿತ್ತು. ದುರದೃಷ್ಟವಶಾತ್, ನರಸಿಂಹರಾವ್ ಸರಕಾರ ಈ ಮಸೂದೆಗಳನ್ನು ತಂದಿರುವ ವಿಧಾನವೇ ಸಂಸತ್ತಿನ ಪ್ರಸ್ತುತ ಅಧಿವೇಶನದಲ್ಲಿ ಅಂಗೀಕಾರಗೊಳ್ಳದಂತಾಗಲು ಅವಕಾಶ ನೀಡಿತು.

ಅತ್ಯಂತ ತರಾತುರಿಯಿಂದ ಅವಿಶ್ವಾಸದ ಠರಾವಿನ ಮುನ್ನಾದಿನ ದುರುದ್ದೇಶದಿಂದ ಈ ಪ್ರಮುಖ ಮಸೂದೆಗಳನ್ನು ಕಾಂಗ್ರೆಸ್ (ಐ) ಲೋಕಸಭೆಯಲ್ಲಿ ತಂದಿತ್ತು. ಈ ಬಗ್ಗೆ ಎಲ್ಲಾ ಜಾತ್ಯಾತೀತ ಪಕ್ಷಗಳೊಡನೆ ಸಮಾಲೋಚನೆ ನಡೆಸುವ ಭರವಸೆಯನ್ನು ಈಡೇರಿಸುವಲ್ಲಿ ರಾವ್ ಸರಕಾರ ವಿಫಲಗೊಂಡಿತು. ಮಸೂದೆಗಳಲ್ಲಿದ್ದ ಪ್ರಮುಖ ಕೊರತೆಗಳು ಹಾಗೂ ಅವುಗಳ ದುರುಪಯೋಗದ ಸಾಧ್ಯತೆಗಳಿಂದಾಗಿ ಅವನ್ನು ಸೆಲೆಕ್ಟ್ ಕಮಿಟಿಗೆ ಒಪ್ಪಿಸಲಾಯಿತು. ಸೆಲೆಕ್ಟ್ ಕಮಿಟಿ ಮಹತ್ವದ ಬದಲಾವಣೆಗಳನ್ನು ಸೂಚಿಸಿ ಈ ಮಸೂದೆಗಳ ದಿಕ್ಕನ್ನು ಗಮನಾರ್ಹವಾಗಿ ಸುಧಾರಿಸಿ, ಹಲವು ತಪ್ಪು ಅಂಶಗಳನ್ನು ನಿವಾರಿಸಿತು. ಉದಾಹರಣೆಗೆ, ಧರ್ಮಕ್ಕೆ ಸಂಬಂಧಪಟ್ಟಂತೆ ಜಾತ್ಯಾತೀತ ಪ್ರಭುತ್ವ ಪಾತ್ರದ ಬಗ್ಗೆ "......ಪ್ರಭುತ್ವ ಯಾವುದೇ ಧರ್ಮವನ್ನು ಪ್ರತಿಪಾದಿಸುವುದಿಲ್ಲ, ಆಚರಿಸುವುದಿಲ್ಲ ಅಥವಾ ಪ್ರಸಾರ ಮಾಡುವುದಿಲ್ಲ" ಎಂಬ ನಿರೂಪಣೆಯನ್ನು ಸೇರಿಸಲಾಯಿತು. ಚುನಾವಣಾ ಉದ್ದೇಶಗಳಿಗೆ ಧರ್ಮವನ್ನು ದುರುಪಯೋಗಪಡಿಸುವ ಅಂಶವನ್ನು ಬಿಟ್ಟು ಬೇರೆ ಯಾವುದೇ ಕಾರಣಕ್ಕೆ ಪಕ್ಷಗಳನ್ನು ಅಮಾನ್ಯಗೊಳಿಸುವ ಅಥವಾ ನಿರ್ಬಂಧಿಸುವ ಅಂಶಗಳನ್ನೆಲ್ಲಾ ತೆಗೆದು ಹಾಕಲಾಯಿತು. ಸರಕಾರ ಮಂಡಿಸಿದ ಮಸೂದೆಗಳಲ್ಲಿ ಧರ್ಮ ಮಾತ್ರವಲ್ಲ ಜಾತಿ, ಭಾಷೆ, ಕೆಲಸದ ಜಾಗ, ಇತ್ಯಾದಿ ವಿಷಯಗಳ ಆಧಾರದ ಮೇಲೂ ಪಕ್ಷಗಳ ಮಾನ್ಯತೆಯನ್ನು ರದ್ದುಮಾಡುವ ಅಂಶಗಳಿದ್ದವು. ಜನತಾ ಪ್ರಾತಿನಿಧ್ಯ ಶಾಸನದಲ್ಲೂ ಪಕ್ಷಗಳನ್ನು ಯಾವ ಆಧಾರದ ಮೇಲೆ ಅಮಾನ್ಯಗೊಳಿಸುವುದನ್ನು ಹೈಕೋರ್ಟ್ ಪರಿಗಣಿಸಬಹುದು ಎಂಬ ಅಂಶ ಸುಧಾರಿಸಲಾಯಿತು.

ಪ್ರಮುಖ ವಿವಾದ

ಮತದಾನ ದಿನಾಂಕದ ಮೊದಲು ಅಭ್ಯರ್ಥಿಗಳನ್ನು ಅನರ್ಹಗೊಳಿಸುವ ಪ್ರಮುಖ ಸಮಸ್ಯೆ ಕುರಿತಂತೆ ಸೆಲೆಕ್ಟ್ ಸಮಿತಿ ಸೂಚಿಸಿದ ತಿದ್ದುಪಡಿಗಳು ಮತಗಣನಾ ಅಧಿಕಾರಿಗಳಿಗೇ ಅಭ್ಯರ್ಥಿಗಳನ್ನು ಅನರ್ಹಗೊಳಿಸುವ ಅಧಿಕಾರ ನೀಡುವ ಅಪಾಯದ ಸಾಧ್ಯತೆಯನ್ನು ನಿವಾರಿಸಿವೆ.

ಸಂವಿಧಾನ (ತಿದ್ದುಪಡಿ) ಮಸೂದೆಯಲ್ಲಿದ್ದ ಈಗಿರುವ ಅಂಶ ಧರ್ಮವನ್ನು ಚುನಾವಣಾ ಉದ್ದೇಶಗಳಿವೆ. ಉಪಯೋಗಿಸುವ ಅಪರಾಧ ಮಾಡುವ ಅಭ್ಯರ್ಥಿಗಳನ್ನು ಅನರ್ಹಗೊಳಿಸುವ ಬಗ್ಗೆ ಸೂಕ್ತ ಕಾನೂನುಗಳನ್ನು ಮಾಡಲು ಸಂಸತ್ತಿಗೆ ಅಧಿಕಾರ ನೀಡುತ್ತದೆ. ಮತದಾನದ ಮೊದಲೇ ಅಭ್ಯರ್ಥಿಗಳನ್ನು ಅನರ್ಹಗೊಳಿಸುವ ವಿಧಿ-ವಿಧಾನ ಹಾಗೂ 'ಕಾರ್ಯತಃ ಬರುವ ತೊಂದರೆಗಳನ್ನು ಕುರಿತಂತೆಯೇ ಈಗ ಮುಖ್ಯ ವಿವಾದ ಹಾಗೂ ಭಿನ್ನಾಭಿಪ್ರಾಯ ಕಂಡುಬಂದಿದೆ. ಈ ರೀತಿ ಮತದಾನದ ಮೊದಲೇ ಅನರ್ಹಗೊಳಿಸುವ ಇಂತಹ ವಿಧಾನವನ್ನು ಅಧಿಕಾರದಲ್ಲಿರುವ ಪಕ್ಷ ವಿರೋಧಿ ಅಭ್ಯರ್ಥಿಗಳನ್ನು ಸ್ಪರ್ಧೆಯಿಂದ ಹೊರಗೆ ತಳ್ಳಲು ಸ್ವೇಚ್ಛಾಚಾರದಿಂದ, ಅಪ್ರಜಾಸತ್ತಾತ್ಮಕವಾಗಿ ಬಳಸಬಹುದು ಎಂಬ ಬಗ್ಗೆ ಇರುವ ಭಯ ಸಮಂಜಸವಾದುದೇ ಆಗಿದೆ. ಎಡಪಕ್ಷಗಳ ಪ್ರತಿನಿಧಿಗಳು ಒಂದು ನ್ಯಾಯಾಂಗ ಸಂಸ್ಥೆಗೆ ಈ ಅಧಿಕಾರ ನೀಡಬೇಕು ಎಂದು ಸೂಚಿಸಿದರೂ ಸರಕಾರ ತನ್ನ ನಿಲುವನ್ನು ತಿಳಿಯಪಡಿಸುವಲ್ಲಿ ವಿಫಲಗೊಂಡಿತು. ರಾಷ್ಟ್ರೀಯ ರಂಗದ ಪಕ್ಷಗಳು ತಮ್ಮೆಲ್ಲಾ ಆಕ್ಷೇಪಗಳಿಗೆ ಉತ್ತರ ಸಿಗುವವರೆಗೂ ಈ ಮಸೂದೆಗಳನ್ನು ಬೆಂಬಲಿಸದಿರಲು ನಿರ್ಧರಿಸಿದವು.

ಇಂತಹ ಸನ್ನಿವೇಶದಲ್ಲಿ ಇತ್ತೀಚೆಗೆ ಬೆಂಗಳೂರಿನಲ್ಲಿ ಸಭೆ ಸೇರಿದ್ದ ಪಕ್ಷದ ಕೇಂದ್ರ ಸಮಿತಿ ಇನ್ನೂ ಉಳಿದಿರುವ ಭಿನ್ನಾಭಿಪ್ರಾಯಗಳನ್ನು ಮುಖ್ಯವಾಗಿ ಮತದಾನದ ಮೊದಲೇ ಅನರ್ಹಗೊಳಿಸುವ ವಿವಾದಾತ್ಮಕ ಪ್ರಶ್ನೆಯನ್ನು ಬಗೆಹರಿಸಿಕೊಳ್ಳಲು ಜಾತ್ಯಾತೀತ ಪಕ್ಷಗಳ ನಡುವೆ ಇನ್ನಷ್ಟು ಚರ್ಚೆ ನಡೆಯಬೇಕು ಎಂಬ ತೀರ್ಮಾನಕ್ಕೆ ಬಂದಿದೆ. ವಿಳಂಬಮಾಡದೆ ಇಂತಹ ಚರ್ಚೆಗಳನ್ನು ನಡೆಸಿ ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸುವ ಹಾಗೂ ಧರ್ಮವನ್ನು ಚುನಾವಣಾ ಉದ್ದೇಶಗಳಿಗೆ ದುರುಪಯೋಗಪಡಿಸಿಕೊಳ್ಳುವುದನ್ನು ತಡೆಯುವ ಶಾಸನಗಳನ್ನು ಅಂಗೀಕರಿಸುವಂತಾಗಬೇಕು. ಹೀಗೆ ಸಾಧ್ಯವಾದಷ್ಟು ವ್ಯಾಪಕ ಒಮ್ಮತವುಳ್ಳ ಶಾಸನಗಳ ಅಂಗೀಕಾರವನ್ನು ಸೆಪ್ಟೆಂಬರ್ ತಿಂಗಳಲ್ಲಿ ಸಂಸತ್ತಿನ ಒಂದು ವಿಶೇಷ ಅಧಿವೇಶನದಲ್ಲಿ ಕೈಗೆತ್ತಿಕೊಳ್ಳಬಹುದು ಎಂದು ಸಿಪಿಐ(ಎಂ) ಅಭಿಪ್ರಾಯಪಡುತ್ತದೆ.

●

ಗಾಯದ ಮೇಲೆ ಬರೆ

ಮಹಿಳೆಯರಿಗೆ ನರಸಿಂಹರಾಯರ ಕೊಡುಗೆ ಬಗ್ಗೆ

-- ಮಹಿಳಾ ಸಂಘಟನೆ ಕರೆ --

ಕೆಂಪುಕೋಟೆಯಿಂದ ನರಸಿಂಹರಾಯರು ಆಗಸ್ಟ್ 15 ರಂದು ಮಹಿಳೆಯರಿಗೆ ತೋರಿದ 75 ರೂಗಳ 'ಉದಾರತೆ' "ಬಡತನದ ಗಾಯದ ಮೇಲೆ ಬರೆ ಎಳೆದಂತಾಗಿದೆ" ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ ಎ.ಐ.ಡಿ.ಡಬ್ಲ್ಯು.ಎ. ಟೀಕಿಸಿದೆ.

ವರ್ಷಕ್ಕೆ 300 ರೂ. ಉಳಿಸಿದರೆ ಸರಕಾರ ಅದಕ್ಕೆ 75 ರೂ ಸೇರಿಸುತ್ತದೆ ಎಂದು ಪ್ರಧಾನ ಮಂತ್ರಿಗಳು ತನ್ನ ಸ್ವಾತಂತ್ರ್ಯ ದಿನ ಭಾಷಣದಲ್ಲಿ ಹೇಳಿರುವುದರ ಬಗ್ಗೆ ಪ್ರಸ್ತಾಪಿಸುತ್ತಾ "ಇದೊಂದು ಹಾಸ್ಯಾಸ್ಪದ ಹೇಳಿಕೆ, ಪ್ರಧಾನ ಮಂತ್ರಿಗಳಿಗೆ ವಾಸ್ತವ ಸ್ಥಿತಿಯ ಬಗ್ಗೆ ಇರುವ ಅಜ್ಞಾನವನ್ನು ಪ್ರತಿಬಿಂಬಿಸುವ ಹೇಳಿಕೆ" ಎಂದು ಎ.ಐ.ಡಿ.ಡಬ್ಲ್ಯು.ಎ. ಹೇಳಿದೆ. ಮಹಿಳೆಯರು ಉಳಿತಾಯ ಮಾಡುತ್ತಿಲ್ಲವಾದರೆ ಅದಕ್ಕೆ ಅವರ ದುಂದುಗಾರಿಕೆ ಕಾರಣವಲ್ಲ ಅವರ ಬಡತನವೇ ಕಾರಣ ಎಂಬುದೂ ರಾವ್ ಅವರಿಗೆ ತಿಳಿದಿಲ್ಲವೇ? ಸಂಘಟಿತ ವಲಯದಲ್ಲಿ ಮಹಿಳೆಯರ ಉದ್ಯೋಗಾವಕಾಶವನ್ನು ಕಡಿತಮಾಡಿ ಮಹಿಳೆಯರನ್ನು ಅಲ್ಲಿಂದ ಹೊರದಬ್ಬಿ ಮಹಿಳೆಯರ ಹಕ್ಕುಗಳ ಮೇಲೆ ಹಲ್ಲೆ ಮಾಡಿರುವ ಸರಕಾರ, 90ಶೇ. ಮಹಿಳೆಯರು ದುಡಿಯುವ ಅಸಂಘಟಿತ ವಲಯದಲ್ಲಿ ಕೂಲಿಯ, ಕೆಲಸದ ಅವಧಿಯ ಗ್ಯಾರಂಟಿ ನೀಡಲಾಗದೆ, ರಕ್ಷಣಾ ಶಾಸನಗಳನ್ನು ಜಾರಿಗೊಳಿಸಲಾರದ ಸರಕಾರದ ಈ 'ಕೊಡುಗೆ' ಹಾಸ್ಯಾಸ್ಪದವಲ್ಲದೆ ಮತ್ತೇನು?

"ಮಹಿಳೆಯರ ದುಸ್ಥಿತಿಗೆ ಸರಕಾರದ ನೀತಿಗಳೇ ಕಾರಣ. ಅವರನ್ನು ಭೂಮಿ ಮತ್ತು ಆಸ್ತಿ ಹಕ್ಕುಗಳಿಂದ ಸರಕಾರ ವಂಚಿತಗೊಳಿಸಿದೆ. 35 ಶೇ. ಗ್ರಾಮೀಣ ಬಡ ಕುಟುಂಬಗಳು ತಮ್ಮ ಉಳಿವಿಗೆ ಮಹಿಳೆಯರನ್ನೇ ಅವಲಂಬಿಸಿವೆ. ಲಕಡ್‌ವಾಲಾ ಸಮಿತಿಯ ವರದಿಯ ಪ್ರಕಾರ ಕನಿಷ್ಠ ಜೀವನ ಮಟ್ಟವೂ ಇಲ್ಲದವರ ಸಂಖ್ಯೆ 30 ಕೋಟಿ ಅಂಶವನ್ನು ಸರಕಾರ ಬಚ್ಚಿಟ್ಟಿದೆ ಎಂದು ಎ.ಐ.ಡಿ.ಡಬ್ಲ್ಯು.ಎ. ಹೇಳಿಕೆ ತಿಳಿಸಿದೆ.

ಆರ್ಥಿಕ ಸ್ವಾತಂತ್ರ್ಯ ಹೆಸರಲ್ಲಿ ಮಹಿಳೆಯರ 75 ರೂ ಕೊಡುವ ಮಾತು ಸರಕಾರದ ಕ್ರಿಮಿನಲ್ ನಿರ್ಲಕ್ಷ್ಯತನವನ್ನು ಸೂಚಿಸುತ್ತದೆ. ಕೆಲಸದ ಹಕ್ಕು, ಕನಿಷ್ಠ ಕೂಲಿ, ಮಹಿಳೆಯರಿಗೆ ಆಸ್ತಿ ಹಕ್ಕು, ಇವು ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದ ಮೂಲ ಆಧಾರಗಳು ಇವನ್ನು ನಾವು ಒತ್ತಾಯಿಸುತ್ತೇವೆ ಎಂದು ಎ.ಐ.ಡಿ.ಡಬ್ಲ್ಯು.ಎ. ಹೇಳಿದೆ.

ಪುಸ್ತಕ ಪರಿಚಯ

ಲೇ: ನೇಮಿಚಂದ್ರ
ಪ್ರ: ನವಕರ್ನಾಟಕ ಪ್ರಕಾಶನ
ಬೆಲೆ: ರೂ. 15.00
ಪುಟ 4+58

ತಳಮಳಿಸುವ ರೇಖೆಗಳ ಜೀವನ ಚಿತ್ರ "ನೋವಿಗದ್ದಿದ ಕುಂಚ"

-ಪಿ.ಎಂ.

ವಿನ್ಸೆಂಟ್ ವ್ಯಾನ್‌ಗಾ (1853-90) ಫ್ರಾನ್ಸ್‌ಗೆ ವಲಸೆಹೋದ ಡಚ್ ಕಲಾವಿದ. ಈತನ ಕೆಲವು ಕಲಾಕೃತಿಗಳು ಈಗ ಪ್ರಪಂಚದ ಅತಿ ಶ್ರೇಷ್ಠ ಕಲಾ ಕೃತಿಗಳಲ್ಲಿ ಸ್ಥಾನ ಪಡೆದಿವೆ. ಅದರಲ್ಲೂ 'ಸೂರ್ಯಕಾಂತಿ ಹೂಗಳು', 'ಗೋಧಿಯ ಹೊಲ' ಮತ್ತು ಅವನ ಆರಂಭದ ಕೃತಿಗಳಲ್ಲಿ ಒಂದಾದ 'ಬಟಾಟೆ ತಿನ್ನುವವರು' ಸರ್ವಕಾಲಿಕ ಶ್ರೇಷ್ಠ ಕಲಾಕೃತಿಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ವ್ಯಾನ್‌ಗಾ ಬದುಕಿದ್ದಾಗ ಒಂದು ಹೊತ್ತಿನ ಊಟದ ಖರ್ಚಿಗಾಗಿ ತನ್ನ ಕಲಾ ಕೃತಿಗಳನ್ನು ಮಾರಲು ತಯಾರಿದ್ದರೂ, ಆಗ ಒಬ್ಬನೇ ಒಬ್ಬ ಕಲಾಪ್ರೇಮಿಯೂ ಅವುಗಳನ್ನು ಖರೀದಿಸಲು ಮುಂದೆ ಬರಲಿಲ್ಲ. ಅದೇ ಕಲಾ ಕೃತಿಗಳು ಇತ್ತೀಚೆಗೆ ದಶಲಕ್ಷ ಡಾಲರುಗಳಿಗೆ ಮಾರಾಟವಾಗುತ್ತಿವೆ!

ಮಧ್ಯಪ್ರಾಯ ಸರಿದ ಬಳಿಕ ಚಿತ್ರಕಲೆಯಲ್ಲಿ ಆಸಕ್ತಿ ಬೆಳೆಸಿಕೊಂಡ ವ್ಯಾನ್‌ಗಾ, ನಂತರ ತನ್ನ ಉಳಿದ ಜೀವಿತಾವಧಿಯನ್ನು ಚಿತ್ರಕಲೆಗಾಗಿ ಸವೆಸಿದ ಹತ್ತುವರ್ಷಗಳ ಅವಧಿಯಲ್ಲಿ ಈತ ರಚಿಸಿದ ವರ್ಣಚಿತ್ರಗಳು 700 ಕ್ಕೂ ಹೆಚ್ಚು ಮತ್ತು ರೇಖಾಚಿತ್ರಗಳು 900ಕ್ಕೂ ಮೀರಿವೆ

ತನ್ನೊಡಲಲ್ಲಿ ಭಾವೋದ್ವೇಗವನ್ನು ತುಂಬಿಕೊಂಡಿದ್ದ ಈತ ಸುತ್ತಲಿನ ಬಡವರ, ಕಾರ್ಮಿಕರ ಬಾಳು, ನೋವು, ಕೊರಗುಗಳಿಗೆ ಬಹಳ ತೀವ್ರವಾಗಿ ಸ್ಪಂದಿಸಿದ.

ವ್ಯಾನ್‌ಗಾನ ಬದುಕನ್ನು ಅವನ ಚಿತ್ರಕಲೆ ಬೇರೆಬೇರೆಯಾಗಿ ನೋಡಲು ಸಾಧ್ಯ ಅವನ ಕೃತಿಗಳು ಅವನ ಬದುಕಿನ ಹಸಿತುಂಡುಗಳಂತೆ ಭಾಸವಾಗುತ್ತವೆ. ಅವನು ರಚಿಸಿದ ಸೂರ್ಯಕಾಂತಿ ಹೂಗಳಾಗಲಿ, ಗೋದಿ ಹೊಲದ ಚಿತ್ರವೇ ಆಗಲಿ, ಅಲ್ಲಿನ ಒಂದೊಂದು ರೇಖೆಯೂ ಎಷ್ಟೊಂದು ಭಾವ ತೀವ್ರತೆಯಿಂದ ಕೂಡಿದೆಯೆಂದರೆ ಅವುಗಳನ್ನು ಬರೀ ಹೂಗಳೆಂದಾಗಲೀ, ಹೊಲ, ಆಕಾಶಗಳೆಂದಾಗಲೀ ಒಪ್ಪಲು ಮನಸ್ಸಾಗುವುದಿಲ್ಲ. ಎದುರಿಗೆ ಕಂಡದ್ದನ್ನು ನೆಪಕ್ಕೆ ಹಿಡಿದುಕೊಂಡು, ತನ್ನ ಮನಸ್ಸಿನ ಸಿಟ್ಟು, ರೋಷ, ಉದ್ವೇಗಗಳನ್ನು ಅವುಗಳಲ್ಲಿ ವ್ಯಾನ್‌ಗಾ ಕಾರಿಕೊಂಡಿದ್ದಾನೆಯೋ ಎಂದು ಅನಿಸುತ್ತದೆ.

ತನ್ನೊಳಗೆ ಬಹಳ ತೀವ್ರವಾದ ಮಾನಸಿಕ ತುಮುಲಗಳನ್ನು ತುಂಬಿಕೊಂಡಿದ್ದ ವ್ಯಾನ್‌ಗಾನ ಜೀವನ ಬರೀ ದುರಂತಗಳ ಸರಮಾಲೆ. ಈತನ ಜೀವನದ ಬಗ್ಗೆ ಇಂಗ್ಲೀಷ್‌ನಲ್ಲಿ ಬೇಕಾದಷ್ಟು ಪುಸ್ತಕಗಳಿವೆ. ಕನ್ನಡದಲ್ಲಿ ಈವರೆಗೆ ಅಂತಹ ಪ್ರಯತ್ನ ನಡೆದಿರಲಿಲ್ಲವೆಂದೇ ಹೇಳಬೇಕು. ಆ ಕೊರತೆಯನ್ನು ನೇಮಿಚಂದ್ರ ಅವರ 'ನೋವಿಗದ್ದಿದ ಕುಂಚ' ಸಮರ್ಥವಾಗಿ ಹೋಗಲಾಡಿಸಿದೆ.

ಬಹುಶಃ 'ನೋವಿಗದ್ದಿದ ಕುಂಚ' ಕೃತಿ ತನ್ನ ಪ್ರಕಾರದಲ್ಲೇ ಅತ್ಯುತ್ತಮ ಪ್ರಯತ್ನಗಳ ಸಾಲಿಗೆ ಸೇರಬಹುದಾದ ಪುಸ್ತಕ. ಇಲ್ಲಿ ಲೇಖಕಿ ವ್ಯಾನ್‌ಗಾನಲ್ಲಿ ಪರಕಾಯ ಪ್ರವೇಶಮಾಡಿ, ಅಲ್ಲಿ ಕಂಡದ್ದನ್ನು ವಿವರಿಸುತ್ತಾ ಹೋದಂತೆ ಭಾಸವಾಗುತ್ತದೆ.

ವ್ಯಾನ್‌ಗಾನ ಸೂಕ್ಷ್ಮವಾದ ಮಾನಸಿಕ ಅಲ್ಲೋಲ ಕಲ್ಲೋಲಗಳಿಗೆ ಲೇಖಕಿ ಮಿಡಿದ ರೀತಿ ಚಕಿತಗೊಳಿಸುವಂತೆ ಕನ್ನಡಕ್ಕೊಂದು ಉತ್ತಮ ಜೀವನ ಚಿತ್ರ ದಕ್ಕಿದೆ.

●

ಸಾಮಾಜಿಕ ಬದಲಾವಣೆಯ ಸಮರದ ಸೇನಾನಿ

ನಟ ಉತ್ಪಲ್ ದತ್

ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ

ಪ್ರಖ್ಯಾತ ನಟ ಉತ್ಪಲ್‌ದತ್‌ರವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಚಲನಚಿತ್ರ ನಟನಾಗಿ ಬಂಗಾಳಿಯೇತರ ದರ್ಶಕರಿಗೆ ಚಿರಪರಿಚಿತರಾದ ಉತ್ಪಲ್‌ದತ್ ಒಬ್ಬ ಶ್ರೇಷ್ಠ ಮಾರ್ಕ್ಸ್‌ವಾದಿ ನಾಟಕಕಾರ ಹಾಗೂ ನಿರ್ದೇಶಕ ಕೂಡಾ ಎಂಬುದು ಬಹಳ ಮಂದಿಗೆ ತಿಳಿದಿರಲಿಕ್ಕಿಲ್ಲ.

ನಾಟಕರಂಗದ ವಿಶ್ವಕೋಶ

ವಿದ್ಯಾರ್ಥಿದೆಸೆಯಿಂದಲೇ ನಾಟಕರಂಗದೊಡನೆ ಸಂಪರ್ಕಹೊಂದಿದ್ದ ಉತ್ಪಲ್‌ದತ್ ಪ್ರಖ್ಯಾತಿಯ ಶಿಖರವೇರಿ ತಾವು ಬದುಕಿರುವಾಗಲೇ ಒಬ್ಬ ಐತಿಹ್ಯಪುರುಷನಾಗಿಬಿಟ್ಟವರು. ನಾಟಕಕಾರರಾಗಿ, ಹಲವು ಹತ್ತು ರೀತಿಯ ಪಾತ್ರಗಳಲ್ಲಿ ಸಹಜವೆನ್ನುವಂತೆ ನಟಿಸಬಲ್ಲ ಶ್ರೇಷ್ಠ ನಟರಾಗಿ, ಒಂದು ಕಲಾಮಾಧ್ಯಮವಾಗಿ ನಾಟಕದ ವಿಕಾಸ, ಇತಿಹಾಸದ ಬಗ್ಗೆ ವಿಶ್ವಕೋಶದಂತಿದ್ದ ವ್ಯಕ್ತಿ ಅವರು. ಅಷ್ಟೇ ಅಲ್ಲ ನಿರ್ದೇಶಕರಾಗಿ, ಕಲಾ ಸಿದ್ಧಾಂತಿಗಳಾಗಿದ್ದ ಭಾರತೀಯ ಪಾಶ್ಚಿಮಾತ್ಯ ಎರಡೂ ಸಂಗೀತಗಳ ಅಪಾರ ಜ್ಞಾನವಿದ್ದ, ಕಲಾಶಿಕ್ಷಕರೂ ಆಗಿದ್ದ ಉತ್ಪಲ್ ದತ್ ಬಂಗಾಳಿ ರಂಗ ವ್ಯವಸ್ಥೆಯನ್ನು ವ್ಯಾಪಾರೀ ನಾಟಕರಂಗದ ಕಪಿಮುಷ್ಟಿಯಿಂದ ಬಿಡಿಸಿ ಕ್ರಾಂತಿಕಾರಕಗೊಳಿಸಿದವರು. ನಾಟಕರಂಗದ ಬಗ್ಗೆ ಆಸಕ್ತಿಯಿರುವ ವಿಭಿನ್ನ ಅಭಿಪ್ರಾಯಗಳ ಜನಗಳ ಮೇಲೆ ಅಪಾರ ಪ್ರಭಾವ ಬೀರಿದವರು ಉತ್ಪಲ್ ದತ್. ಚಲನಚಿತ್ರದಲ್ಲೂ ಅಷ್ಟೇ ಸಹಜವಾಗಿರುತ್ತಿದ್ದ, ಸತ್ಯಜಿತ್ ರಾಯ್‌ರವರ ಹಲವು ಮಹಾನ್ ಚಿತ್ರಗಳಲ್ಲಿ ಕಾಣಿಸಿಕೊಂಡವರು. ರಾಯ್‌ರವರ ಕೊನೆಯ ಚಿತ್ರದಲ್ಲಿ ಒಂದು ಕ್ಲಿಷ್ಟ ಪಾತ್ರವನ್ನೂ ಅಭಿನಯಿಸಿ ಅಂತರಾಷ್ಟ್ರೀಯ ಖ್ಯಾತಿ ಗಳಿಸಿದರು. ಸ್ವತಃ ಹಲವು ಚಿತ್ರಗಳನ್ನು ನಿರ್ದೇಶಿಸಿರುವ, ಪುಸ್ತಕಗಳನ್ನು ಬರೆದಿರುವ ಉತ್ಪಲ್‌ದತ್ ಶೇಕ್ಸ್‌ಪಿಯರ್ ನಾಟಕಗಳ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲವರಾಗಿದ್ದರು.

ಸಾಮಾಜಿಕ ಬದ್ಧತೆಯಿದ್ದ ಕಲಾವಿದ

ನಾಟಕವನ್ನು ಜನಗಳ ನಡುವೆ ಒಯ್ಯುವಲ್ಲಿ ಅವರ ಕೊಡುಗೆ ಚಿರಕಾಲ ನೆನಪಿನಲ್ಲುಳಿಯುವಂತದ್ದು. ತಮ್ಮ ಪೋಸ್ಟರ್-ನಾಟಕ, ಬೀದಿನಾಟಕಗಳ ಮೂಲಕ ಈ ದಿಸೆಯಲ್ಲಿ ಅವರ ಸಾಧನೆ ಅವಿಸ್ಮರಣೀಯ ಸುಮಾರು ಇಪ್ಪತ್ತಕ್ಕೂ ಹೆಚ್ಚು ಜಾತ್ರಾ (ಬಯಲುರಂಗ) ನಾಟಕಗಳನ್ನು ಅವರು ಬರೆದರು, ನಿರ್ದೇಶಿಸಿದರು.

ಸಾಮಾಜಿಕ ಬದಲಾವಣೆಯ ಸಮರಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದ ಅವರು ತಮ್ಮ ನಾಟಕ ಪ್ರದರ್ಶನಗಳ ಮೇಲೆ ಹಲವು ಬಾರಿ ಗೂಂಡಾ ಧಾಳಿಗಳನ್ನು ಧೈರ್ಯದಿಂದ ಎದುರಿಸಿದರು. ಜನಗಳ, ದುಡಿಯುವ ವರ್ಗಗಳ ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸಿದ, ಕಲಾವಿದರ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ಉತ್ಪಲ್‌ದತ್ ಎಡಶಕ್ತಿಗಳನ್ನು, ವಿಶೇಷವಾಗಿ ಸಿಪಿಐ(ಎಂ) ನ್ನು ಬೆಂಬಲಿಸಲು ಎಂದು ಹಿಂಜರಿದವರಲ್ಲ. ಅವರ ಹಾಸ್ಯ-ವ್ಯಂಗ್ಯಮಯ ಚುನಾವಣಾ ಭಾಷಣಗಳಿಗೆ ತನ್ನದೇ ವೈಶಿಷ್ಟ್ಯವಿತ್ತು. ಚುನಾವಣಾ ಪ್ರಚಾರ ಸಮಯದಲ್ಲಿ ಅವರ ಚಿಕ್ಕ ನಾಟಕಗಳು ಸಾವಿರಾರು ಜನರನ್ನು ಆಕರ್ಷಿಸುತ್ತಿದ್ದವು.

ಸಾಮಾಜಿಕ ಬದ್ಧತೆಯಿದ್ದ, ಮಾರ್ಕ್ಸ್‌ವಾದವನ್ನು ಆಳವಾಗಿ ಅಭ್ಯಸಿಸಿ ಅದಕ್ಕೆ ಬದ್ಧರಾಗಿದ್ದ ಈ ಕಲಾವಿದ ಜನಗಳೊಂದಿಗೆ ಇರಲು ದಂತಗೋಪುರವನ್ನು ತ್ಯಜಿಸಿಬಂದವರು ಎಂದು ತನ್ನ ಶ್ರದ್ಧಾಂಜಲಿ ಅರ್ಪಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಇಂತಹ ಬಹುಮುಖಿ ಪ್ರತಿಭೆಯ ವ್ಯಕ್ತಿಯ ಒಂದು ವಸ್ತು ನಿಷ್ಠ ವಿಮರ್ಶೆಗೆ ಬಹಳ ಕಾಲ ಬೇಕಾಗಬಹುದು ಎಂದಿದೆ. ಸಾಂಸ್ಕೃತಿಕ ರಂಗದಲ್ಲಿ ಮೇರು ವ್ಯಕ್ತಿಯಾಗಿ ವಿಜೃಂಭಿಸಿದ ಉತ್ಪಲ್‌ದತ್‌ರವರ ನಿರ್ಗಮನ ಉಂಟುಮಾಡಿರುವ ತೆರವನ್ನು ತುಂಬಿಸುವುದು ಕಷ್ಟ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಕರ್ನಾಟಕದಲ್ಲಿ ಸಾಮರಸ್ಯದ ಸೆಲೆ ಬತ್ತಿಲ್ಲ

-- ಬಾಲಕೃಷ್ಣ ಶೆಟ್ಟಿ

ಕರ್ನಾಟಕ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ವಯ್ಯಾರವಾಗಿ ಹರಿಯುತ್ತಿರುವ ಕಾವೇರಿ, ತನಗಾಗಿ ಜಗಳವಾಡುತ್ತಿದ್ದಾರಲ್ಲ ಎಂದು ಮುನಿದು ಭೂಮಿಯಲ್ಲೇ ಬತ್ತಿ ಹೋದರೂ ಹೋಗಬಹುದೇನೋ ಆದರೆ ಕೋಮು ಸಾಮರಸ್ಯದ ಸೆಲೆ ಕರ್ನಾಟಕ ರಾಜ್ಯದಲ್ಲಿ ಬತ್ತಿಲ್ಲ, ಬತ್ತುವುದೂ ಇಲ್ಲ. ಬದಲಾಗಿ ಚಿಮ್ಮಿ ಹರಿಯುತ್ತದೆ. ಅದಕ್ಕೊಂದು ಸರಿಯಾದ ರೂಪಕೊಟ್ಟಲ್ಲಿ, ಇನ್ನೊಂದು ದೊಡ್ಡ ನದಿಯಾಗೇ ಹರಿದು ಕರ್ನಾಟಕದ ನಾಲ್ಕೂವರೆ ಕೋಟಿ ಜನರಿಗೆ ಶಾಂತಿ, ನೆಮ್ಮದಿ ಸಹಬಾಳ್ವೆಯ ವಾತ್ಸಲ್ಯವನ್ನು ತಂದುಕೊಟ್ಟೀತು.

ಇಂತಹ ಭರವಸೆಗೆ ಕಾರಣ, ಡಿ.ವೈ.ಎಫ್.ಐ ಕೇಂದ್ರ ಸಮಿತಿ ಜಾತ್ಯಾತೀತತೆಯ ಸಿದ್ಧಾಂತವನ್ನು ಯುವಜನರ ನಡುವೆ ಪ್ರಚಾರ ಪಡಿಸಲು ಅಖಿಲ ಭಾರತ ಸಾಹಿತ್ಯ ಸ್ಪರ್ಧೆ ಏರ್ಪಡಿಸಿತ್ತು. ಇದರ ಅಂಗವಾಗಿ ಕರ್ನಾಟಕ ರಾಜ್ಯ ಸಮಿತಿ ಪತ್ರಿಕಾ ಹೇಳಿಕೆ ನೀಡಿದ್ದು ಕೆಲವೊಂದು ಪತ್ರಿಕೆಗಳಲ್ಲಿ ಮಾತ್ರ ವರದಿಯಾಗಿತ್ತು. (ಐಕ್ಯರಂಗ ಆಗಸ್ಟ್ 8) ಆಶ್ಚರ್ಯದ ಸಂಗತಿ ಎಂದರೆ ರಾಜ್ಯ ಸಮಿತಿ ಪ್ರವೇಶ ಪತ್ರಗಳ ಪ್ರತಿಗಳನ್ನು ತಯಾರಿಸಿಡುವ ಮೊದಲೇ ಹತ್ತಾರು ಯುವಜನರು ಬಂದು ವಿಚಾರಿಸಿ ವಿಳಾಸ ನೀಡಿ ಹೋಗಿದ್ದರು. ಡಿ.ವೈ.ಎಫ್.ಐ ಕಚೇರಿಯ ಬಾಗಿಲು ಕೆಲವೊಮ್ಮೆ ತೆರೆಯದೆ ಇದ್ದದನ್ನು ಕಂಡು ವಿಳಾಸವನ್ನು ಬರೆದಿಟ್ಟು ಪ್ರವೇಶ ಪತ್ರವನ್ನು ಕೋರಿ ಹೋದರು. ಅಂಚೆಯಲ್ಲಿ ಬಂದ ಪತ್ರಗಳ ಸಂಖ್ಯೆಗೆ ಮಿತಿಯೇ ಇಲ್ಲ. ರಾಜ್ಯದ ಮೂಲೆ ಮೂಲೆಗಳಿಂದ ಕೋರಿಕೆಗಳ ಪತ್ರ ಬಂದುದು ಮಾತ್ರವಲ್ಲದೆ ನಾವು ಕೈಗೊಂಡ ಕಾರ್ಯಕ್ರಮವನ್ನು ಪ್ರಶಂಸಿರುತ್ತಾರೆ. ಹಲವರು ಸದಸ್ಯರಾಗಲು ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ.

ರಾಜ್ಯದ ಎಲ್ಲಾ 19 ಜಿಲ್ಲೆಗಳಿಂದ ಡಾಕ್ಟರು, ಇಂಜಿನಿಯರ್‌ಗಳು ಶಿಕ್ಷಕರು, ಮಹಿಳೆಯರು, ಬ್ಯಾಂಕ್, ಎಲ್.ಐ.ಸಿ.ಗಳ ಉದ್ಯೋಗಸ್ಥರೂ ಸೇರಿದಂತೆ ಹೈಸ್ಕೂಲು-ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಕೆಲವೊಂದು ಪ್ರವೇಶಾರ್ಥಿಗಳು ಎಷ್ಟೊಂದು ಉತ್ಸಾಹಿತರೆಂದರೆ ಈಗಾಗಲೇ ಪ್ರಬಂಧ ಕವನಗಳನ್ನು ಬರೆದು ಕಳುಹಿಸಿರುತ್ತಾರೆ.

ಇದರಿಂದ ಒಂದು ವಿಷಯವಂತೂ ಸ್ಪಷ್ಟ. ಅನಾದಿಕಾಲದಿಂದಲೂ ಶಾಂತಿಪ್ರಿಯರೆಂದೇ ಖ್ಯಾತರಾಗಿರುವ ಕರ್ನಾಟಕದ ಜನತೆಯ ಒಂದು ಭಾಗವಾಗಿರುವ ರಾಜ್ಯದ ಯುವಜನರು ಎಂದೆಂದಿಗೂ ಕೋಮು ಸಾಮರಸ್ಯವನ್ನು ಉಳಿಸಿ, ಬೆಳೆಸಲು ಉತ್ಸುಕರು. ಅವರನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ಸಂಘಟಕರು ಮಾರ್ಗದರ್ಶಕರು ಬೇಕಷ್ಟೆ.

ಕರ್ನಾಟಕದ ಜನಮನದಲ್ಲಿ ಕೋಮು ಸಾಮರಸ್ಯ ಶಾಶ್ವತವಾಗಿರಲು ಐತಿಹಾಸಿಕ ಕಾರಣಗಳೂ ಇವೆ. ಸೌಹಾರ್ದತೆಯ ಉನ್ನತ ಪರಂಪರೆಗಳು ಈ ನಾಡಿನಲ್ಲಿದೆ. ದೇವರು ಧರ್ಮದ ಹೆಸರಿನಲ್ಲಿ ಅನ್ಯಾಯಗಳು ಮುಗಿಲಿಗೇರಿದಾಗ ಬಸವಣ್ಣ, ಅಕ್ಕಮಹಾದೇವಿಯಂತಹವರು ಜನ ಸಾಮಾನ್ಯರಲ್ಲಿ ದೇವರ ಬಿಂಬವನ್ನು ಕಂಡರು. ಆದ್ದರಿಂದಲೇ ವಿಗ್ರಹ ಆರಾಧಿಸುವ ಬದಲಾಗಿ ತಾವೇ ದೇಹದಲ್ಲಿ ತಗಲಿಸಿಕೊಳ್ಳಬಹುದಾದಂತಹ ಶಿವಲಿಂಗಕ್ಕೆ ಪೂಜೆ ಸಲ್ಲಿಸಿ ತೃಪ್ತಿಯನ್ನು ಕಂಡರು. ಅಂದಿನ ಕಾಲಕ್ಕೆ ಅದು ಪ್ರಗತಿಪರ ಚಿಂತನೆಯಾಗಿತ್ತು.

ಜಾತಿ ವಿಜಾತಿ ಎನಬೇಡ- ಎಂದು ಹಾಡಿದ ಸರ್ವಜ್ಞ ಕರ್ನಾಟಕದಲ್ಲಿ ಜನ್ಮತಾಳಿದ. 'ಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯೇನೆಂದು ಬಲ್ಲಿರಾ' ಎಂದು ಪ್ರಶ್ನಿಸಿದ ಕನಕದಾಸರು ಹಿಂದುಳಿದ ಜನಾಂಗದಲ್ಲಿ ಜನಿಸಿದರೂ ಪೇಜಾವರ ಮಠದ ಸ್ವಾಮಿಗಳವರ ಅಂದಿನ ವಂಶಸ್ಥರಿಗೆ ಸವಾಲೆಸೆದುದು ಇದು ಬರೀ ಪಾಠ ಪುಸ್ತಕಗಳಲ್ಲಿ ಮಾತ್ರ ಉಳಿದಿಲ್ಲ. ಕರ್ನಾಟಕದ ಜನತೆಯ ಮನಮನದಲ್ಲೂ ಮಿಡಿದಿದೆ, ಮಿಡಿಯುತ್ತಿದೆ.

'ಮನುಜ ಕುಲಂ ತಾನೊಂದೆ ವಲಂ' ಎಂದು ಬಣ್ಣಿಸಿದ ಪಂಪ ಮಹಾಕವಿ ಉತ್ತರ ಕನ್ನಡ ಜಿಲ್ಲೆಯ ಬನವಾಸಿ ನಾಡಿನವರು. ಹಿಂದೂ ರಾಜರಾಗಿದ್ದ ಮೈಸೂರಿನ ರಾಜರುಗಳು ಬ್ರಿಟಿಷ್ ಸಾಮ್ರಾಜ್ಯಶಾಹಿಯೊಂದಿಗೆ ರಾಜಿ ಮಾಡಿಕೊಂಡು ಶೋಷಕರಿಗೆ ನೆರವಾಗುತ್ತಿದ್ದ ಕಾಲದಲ್ಲಿ ಮುಸ್ಲಿಂನಾಗಿ ಜನ್ಮತಾಳಿದ ಮಹಾನ್ ವೀರ ಟಿಪ್ಪು ಸಾಮ್ರಾಜ್ಯಶಾಹಿಗಳ ವಿರುದ್ಧ ಸಿಂಹ ಗರ್ಜನೆ ಮಾಡಿದ. ಶೋಷಕರಾದ ಬ್ರಿಟಿಷರ ವಿರುದ್ಧ ಹೋರಾಡುವಾಗ ಟಿಪ್ಪುವಿಗೆ ಭುಜಕ್ಕೆ ಭುಜಕೊಟ್ಟು ನಿಂತವರು ಜನಸಾಮಾನ್ಯ ಹಿಂದುಗಳು. ಹಿಂದು-ಮುಸ್ಲಿಂ ಐಕ್ಯತೆಯನ್ನು ಸಾಧಿಸಿದ ಟಿಪ್ಪುವನ್ನು ಇಂದಿಗೂ ಕರ್ನಾಟಕದ ಜನತೆ ಹೆಮ್ಮೆಯಿಂದ ನೆನೆಯುತ್ತಾರೆ.

ಮೇಲೆ ಹೇಳಿದುದು ಇತಿಹಾಸದ ಘಟನೆಗಳಾದರೆ ಇಂದಿಗೂ ಕೂಡಾ 'ವಿಶ್ವ ಮಾನವ ' ಕಂಪನ್ನು ಬೀರುತ್ತಾ ಕನ್ನಡ ಕುವರರಿಗೆ ಮಾರ್ಗದರ್ಶಕರಾಗಿರುವ ಕರ್ನಾಟಕ ರತ್ನ ರಾಷ್ಟ್ರಕವಿ, ಕುವೆಂಪು ಇನ್ನೂ ನಮ್ಮೊಂದಿಗಿದ್ದಾರೆ. 'ಭಾರತ ಮಾತೆಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಎಂದು ಘೋಷಿಸಿದ ಕುವೆಂಪುರವರಲ್ಲಿ ನಾವು ಕಂಡುದೇನು- ಜಾತಿ, ಧರ್ಮ, ಭಾಷೆ, ಗಡಿಯ ಎಲ್ಲೆಯನ್ನು ಮೀರಿ ಭಾರತೀಯರು ಮಾತ್ರವಲ್ಲ ಇಡೀ ಜಗತ್ತಿನ ಜನರಲ್ಲಿ ಒಂದೇ ಎಂದು ಸಾರಿದರು ಕವಿ ಮಹರ್ಷಿಗಳು.

ಜನಪದ ಸಾಹಿತ್ಯದಲ್ಲಿ ಹೊಸತನ್ನು ಹುಡುಕಿದ ಇತ್ತೀಚೆಗಷ್ಟೆ ನಮ್ಮನ್ನಗಲಿದ ಬಾಳಪ್ಪ ಹುಕ್ಕೇರಿಯವರು ತಮ್ಮ ಸುಶ್ರಾವ್ಯ ಕಂಠದಿಂದ 'ಹಿಂದು ಮುಸಲಿಮನಾಗು ಬೌದ್ಧ ಕ್ರೈಸ್ತನೇ ಆಗು.......... ಏನಾದರೂ ಸರಿಯೇ ಮೊದಲು ಮಾನವನಾಗು' ಎಂದು ಧರ್ಮ ನಿರಪೇಕ್ಷತೆಯ ಕರೆಯನ್ನು ಎಲ್ಲೆಡೆ ನೀಡಿದರು.

ಶಿಶುನಾಳ ಶರೀಫ, ಸಿಂಪಿ ಲಿಂಗಣ್ಣ ಗೊರೂರು, ಅಡಿಗ, ಇನ್ನೂ ಹಲವಾರು ಸಾಹಿತ್ಯ ಮಹಂತರುಗಳು ಸಾಮರಸ್ಯ ಕೊಡುಗೆಯನ್ನು ನೀಡಿರುತ್ತಾರೆ. ಅವರ ಪರಂಪರೆಯಲ್ಲಿಯೇ ಮುಂದುವರಿಯುತ್ತಿರುವ ಇಂದಿನ ಬರಹಗಾರರು, ಸಾಹಿತಿಗಳು ಈ ನಿಟ್ಟಿನಲ್ಲಿ ಉದಾತ್ತ ಕಾಣಿಕೆಯನ್ನು ನೀಡುತ್ತಿದ್ದಾರೆ.

ಕೋಮು ಸೌಹಾರ್ದತೆ ಕುರಿತಂತೆ ಡಿ.ವೈ.ಎಫ್.ಐ ಏರ್ಪಡಿಸಿರುವ ಅಖಿಲ ಭಾರತ ಸಾಹಿತ್ಯ ಸ್ಪರ್ಧೆಗೆ ಕರ್ನಾಟಕದಲ್ಲಿ ದೊರೆತ ಭಾರೀ ಸ್ಪಂದನ ದೊರೆತಿದೆ. ಕೋಮು ಸಾಮರಸ್ಯದ ಸೆಲೆ ಎಂದೂ ಈ ರಾಜ್ಯದಲ್ಲಿ ಬತ್ತುವುದಿಲ್ಲ ಎಂಬ ಭರವಸೆಯನ್ನು ಮತ್ತೆ ನೀಡಿದೆ.

ಇಂತಹ ಉನ್ನತ ಪರಂಪರೆಯ ಹಾದಿಯ... ಎಂಬಂತೆ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರು... ಮಂಡ್ಯ ಜಿಲ್ಲೆಯ ಬೆಳಕವಾಡಿ ಗ್ರಾಮದ 10 ನೇ ತರ... ತಿಯ ಪುಟ್ಟ ಬಾಲಕ ಬಿ.ಎಸ್. ಗಿರೀಶ್ ಅವರ ತೊದ... ಬರಹದ ಕೆಲವು ವಾಕ್ಯಗಳು ದಂಗುಗೊಳಿಸುವಂತಾದ... "ಭಾರತ ದೇಶವು ಹಿಂದಿನ ಕಾಲದಲ್ಲಿ ಅಸ್ಪೃಶ್ಯತೆ ಎಂ... ಜಾತಿಯತೆಯಲ್ಲಿ ತತ್ತರಿಸುತ್ತಿತ್ತು......... ಇಂದು ಕೇವ... ಮಂದಿರ, ಮಸೀದಿಗಳ ವಿಷಯಕ್ಕೆ ಅಣ್ಣ ತಮ್ಮರಂತಿ... ಭಾರತೀಯರು ಕಚ್ಚಾಡುತ್ತಿದ್ದಾರೆ. ಎಲ್ಲಾ ಕೋಮಿನವ... ಒಟ್ಟಾರೆ ಸಹ ಬಾಳುವೆ ನಡೆಸಿದಲ್ಲಿ ಮಾತ್ರ ನಮ್ಮ ದೇಶ... ಪ್ರಗತಿ ಪಥದಲ್ಲಿ ಸಾಗಲು ಸಾಧ್ಯ" ಆಟವಾಡುವ ವ... ಸ್ಸಿನ ಬಾಲಕನಲ್ಲಿ ಎಂತಹ ಉದಾತ್ತ ಧ್ಯೇಯ!

ಹೌದು! ಕರ್ನಾಟಕ ರಾಜ್ಯದಲ್ಲಿ ಸಾಂಸ್ಕೃತಿಕ ರಂ... ದಲ್ಲಿ ಕ್ರಾಂತಿಕಾರಕ ವಿಚಾರಗಳು ಹೊರಬಂದಿವೆ. ಆದ... ಅದನ್ನು ಪುರೋಗಾಮಿ ರಾಜಕೀಯವಾಗಿ ಬದಲಾ... ಸಲು ಅಸಾಧ್ಯವಾದದ್ದು ಛಿದ್ರಕಾರಿ ಶಕ್ತಿಗಳ ಬಿಜೆಪಿಗ... ಅಟ್ಟಹಾಸಕ್ಕೆ ಕಾರಣ. ಭೂತಕಾಲದ ಆಗುಹೋ... ಗಳ ಮೇಲೆ ಭವಿಷ್ಯತ್ತಿನ ನಿರ್ಮಾಣವಾಗುತ್ತದೆಂದು ನಂ... ರುವ ಪ್ರಗತಿ ಪರ ಶಕ್ತಿಗಳನ್ನು ಒಂದು ಗೂಡಿಸಿ ಕರ್ನಾ... ಟಕದ ರಾಜಕೀಯವನ್ನು ಭ್ರಷ್ಟಾಚಾರಿ ಕಾಂಗ್ರೆಸ್ ಮ... ಕೋಮುವಾದಿ ಬಿಜೆಪಿಗಳ ಕಪಿಮುಷ್ಠಿಯಿಂದ ಬಿಡಿಸ... ಕಾಗಿದೆ.

ಈ ನಿಟ್ಟಿನಲ್ಲಿ ನಡೆಯುವ ರಾಜ್ಯ ವ್ಯಾಪೀ ಹೋರಾ... ಟದಲ್ಲಿ ಡಿ.ವೈ.ಎಫ್.ಐ ತನ್ನನ್ನು ತಾನೇ ತೊಡಗಿಸಿಕೊ... ತ್ತದೆ ಮತ್ತು ರಾಜ್ಯದ ಯುವಜನರನ್ನು ಈ ಮಹಾ... ಕಾರ್ಯದಲ್ಲಿ ಅಣಿ ನೆರೆಸಲು ಪಣ ತೊಡುತ್ತದೆ.

ರಾಜ್ಯ ವಿವಿದೆಡೆ ಕ್ವಿಟ್ ಇಂಡಿಯಾ ಸ್ವರ್ಣ ಮಹೋತ್ಸವ ಆಚರಣೆ

ಕತ್ತೆ ಮೇಲೆ ಕ್ಲಿಂಟನ್ ಪ್ರತಿಕೃತಿ ಮೆರವಣಿಗೆ

'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳವಳಿ 50ನೇ ವಾರ್ಷಿಕೋತ್ಸವದ ಅಂಗವಾಗಿ ಹಾಗೂ ಕೋಮುವಾದವನ್ನು ವಿರೋಧಿಸಿ ಕರ್ನಾಟಕದ ವಿವಿದೆಡೆ ಹತ್ತು ಹಲವಾರು ರೀತಿಯ ಕಾರ್ಯಕ್ರಮಗಳು ನಡೆದ ಬಗ್ಗೆ ವರದಿಯಾಗಿದೆ. ಎಸ್. ಎಫ್.ಐ ಮತ್ತು ಡಿ.ವೈ.ಎಫ್.ಐ. ಸಂಘಟನೆಗಳ ನೇತೃತ್ವದಲ್ಲಿ ವಿದ್ಯಾರ್ಥಿ- ಯುವಜನರು ವಸಾಹತುಶಾಹಿ ವಿರೋಧಿ ಆಂದೋಲನದ ಸ್ಫೂರ್ತಿಯಲ್ಲಿ ಉತ್ಸಾಹದಿಂದ ಪಾಲ್ಗೊಂಡರು. 'ಐಕ್ಯರಂಗ'ಕ್ಕೆ ತಲುಪಿರುವ ಕೆಲವು ವರದಿಗಳು ಇಲ್ಲಿವೆ.

ಗಂಗಾವತಿ : ರಾಯಚೂರು ಜಿಲ್ಲೆಯ ಗಂಗಾವತಿಯ ಜನರು ಆಗಸ್ಟ್ 9 ರಂದು ವಿಶಿಷ್ಟ ಸನ್ನಿವೇಶವೊಂದನ್ನು ವೀಕ್ಷಿಸಿದರು. ಅಲ್ಲಿಯ ವಿದ್ಯಾರ್ಥಿ ಯುವಜನರು ಕತ್ತೆಯನ್ನು ಮುಂದಿಟ್ಟುಕೊಂಡು ಮೆರವಣಿಗೆ ಹೊರಟಿದ್ದರು. ಕತ್ತೆಯ ಮೇಲೆ ಇದ್ದಿದ್ದು ಯಾರು ಗೊತ್ತೇ? ಅಮೇರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್! ಅಂದರೆ ಸಾಮ್ರಾಜ್ಯಶಾಹಿಯ ಪ್ರತೀಕವಾಗಿರುವ ಅಮೇರಿಕದ ಅಧ್ಯಕ್ಷರಿಗೆ ಇಂಥ ದುರ್ಗತಿ ಬರುವುದೇ? ಹೌದು. ಇದು ಸಾಮ್ರಾಜ್ಯಶಾಹಿ ವಿರೋಧಿ ಮನೋಭಾವದ ವಿದ್ಯಾರ್ಥಿ-ಯುವಜನ ಸಮುದಾಯ ನೀಡಿದ ಶಿಕ್ಷೆಯಾಗಿದೆ. ಕತ್ತೆ ಮೇಲೆ ಕ್ಲಿಂಟನ್ ಪ್ರತಿಕೃತಿಯ ವಿರೋಧಿ ಆಂದೋಳನದ ಸ್ಫೂರ್ತಿಗೆ ಸಾಮ್ರಾಜ್ಯಶಾಹಿ ವಿರೋಧಿ ಆಂದೋಳನದ ಸ್ಫೂರ್ತಿಗೆ ಅನುಗುಣವಾಗಿತ್ತು.

ಎಸ್.ಎಫ್.ಐ.- ಡಿ.ವೈ.ಎಫ್.ಐ. ಕಚೇರಿಯಿಂದ ಹೊರಟ ಮೆರವಣಿಗೆಯಲ್ಲಿ ಸುಮಾರು 200 ಮಂದಿ ವಿದ್ಯಾರ್ಥಿ ಯುವಜನರು ಹಾಗೂ ಮಹಿಳೆಯರು ಭಾಗವಹಿಸಿದ್ದರು.

ಗಾಂಧಿ ಚೌಕದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಡಿ.ವೈ.ಎಫ್.ಐ. ಉಪಾಧ್ಯಕ್ಷ ತಿಮ್ಮಪ್ಪ ವಡ್ಡ ಬಂಡಿ ಹಾಗೂ ಎಸ್.ಎಫ್.ಐ ಜಿಲ್ಲಾ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಮಾತನಾಡಿದರು.

ಪೋಲೀಸರಿಗೆ ಸವಾಲಾದ ಪಾದಯಾತ್ರೆ

ಕೇಂದ್ರ ಸರಕಾರದ ಆರ್ಥಿಕ ನೀತಿ ಮತ್ತು ದೇಶದ ಏಕತೆ ಸಮಗ್ರತೆಗೆ ಭಂಗ ತರುವ ಕೋಮುವಾದಿಗಳಿಗೆ ಉತ್ತರವಾಗಿ ಮಂಗಳೂರಿನಲ್ಲಿ ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ. ಜಂಟಿಯಾಗಿ ಪಾದಯಾತ್ರೆ ನಡೆಸಲು ನಿರ್ಧರಿಸಿದಾಗ ಜಿಲ್ಲಾ ಪೋಲೀಸ್ ಅಧಿಕಾರಿಗಳು ಪೂರ್ವಾಪರ್ಯಕ ಮತ್ತು ಪಾದಯಾತ್ರೆಯನ್ನು ನಿರ್ಬಂಧಪೂರ್ವಕವಾಗಿ ಬೆದರಿಕೆ ಹಾಕಿದರು.

ನಮ್ಮ ಪ್ರಧಾನಿ ಪಿ.ವಿ. ನರಸಿಂಹರಾಯರು ಒಂದು ಕೋಟಿ ಹಣವನ್ನು ಲಂಚ ಪಡೆದು ಭ್ರಷ್ಟಾಚಾರಿಗಳಾಗಿದ್ದಾರೆ. ಬಿಜೆಪಿಯನ್ನು ಕೋಮುವಾದಿ ಪಕ್ಷವೆಂದು ಭಾಷಣದಲ್ಲಿ ಪ್ರಸ್ತಾಪಿಸುವುದಿಲ್ಲವೆಂದು ನೀವು ಲಿಖಿತ ರೂಪದಲ್ಲಿ ನೀಡಬೇಕು. ಇದು ಪೋಲೀಸರ ಅಧಿಕಾರವಾಣಿ. ತಪ್ಪಿದಲ್ಲಿ ಪಾದಯಾತ್ರೆ ನಡೆಸಕೂಡದು ಎಂದು ತಾಕೀತು ಮಾಡಿದರು.

ಆದರೆ ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ ಪೋಲೀಸರ ಅಧಿಕಾರವಾಣಿಯನ್ನು ಮುರಿದು ಮಂಗಳೂರು ನಗರದಲ್ಲಿ ಸುಮಾರು 10. ಕಿ.ಮೀ ದೂರ ಪಾದಯಾತ್ರೆ ನಡೆಸಿದವು.

ಧ್ವನಿವರ್ಧಕ ಇಲ್ಲದಿದ್ದರೂ ಮುಗಿಲು ಮುಟ್ಟುವ ಘೋಷಣೆಗಳು ಕರಪತ್ರಗಳು ಬಾವುಟ ಪ್ಲೇ ಕಾರ್ಡ್‌ಗಳು ಶಿಸ್ತು ಬದ್ಧವಾದ ನಡಿಗೆಯೇ ಪೋಲೀಸ್ ಅಧಿಕಾರಿಗಳಿಗೆ ಕೇಂದ್ರ ಸರ್ಕಾರದ ಮತ್ತು ಕೋಮುವಾದಿಗಳಿಗೆ ನೀಡಿದ ದಿಟ್ಟ ಉತ್ತರವಾಗಿತ್ತು.

ಸಂಜೆಯ ಬಹಿರಂಗ ಸಭೆಯಲ್ಲಿ ಡಿ.ವೈ.ಎಫ್.ಐನ ಕೃಷ್ಣಪ್ಪ ಕೊಂಚಾಡಿಯವರು ಪೋಲೀಸರ ಸರ್ವಾಧಿಕಾರಿ ಧೋರಣೆಯನ್ನು ಖಂಡಿಸಿ, ಪೋಲೀಸ್ ಅಧಿಕಾರಿಗಳು ಕಾಂಗ್ರೆಸ್ ಮತ್ತು ಬಿಜೆಪಿಯ ಕಿಂಕರರುಗಳು ಎಂದು ವ್ಯಂಗ್ಯವಾಡಿದರು.

ಮಂಗಳೂರಲ್ಲಿ ಪಾದಯಾತ್ರೆ

ಮಂಗಳೂರು : "ಸಾಮ್ರಾಜ್ಯಶಾಹಿ ಶಕ್ತಿಗಳೇ ದೇಶ ಬಿಟ್ಟು ತೊಲಗಿ", "ಐ. ಎಂ.ಎಫ್. ವಿಶ್ವಬ್ಯಾಂಕ್ ಏಜಂಟರುಗಳೇ ದೇಶ ಬಿಟ್ಟು ತೊಲಗಿ" ಕ್ವಿಟ್ ಇಂಡಿಯಾ ಚಳುವಳಿಯ ಸ್ಫೂರ್ತಿಯಲ್ಲಿ ಮತ್ತೆ ಹೋರಾಡುತ್ತೇವೆ ಎಂಬ ಘೋಷಣೆಗಳೊಂದಿಗೆ ಕ್ವಿಟ್ ಇಂಡಿಯಾ ಚಳುವಳಿಯ ಸ್ವರ್ಣ ಮಹೋತ್ಸವದ ಆಶಯದೊಂದಿಗೆ ಕೇಂದ್ರ ಸರಕಾರದ ವಿದೇಶೀ ಬಹುರಾಷ್ಟ್ರೀಯ ಕಂಪನಿಗಳ ಪರವಾದ ಆರ್ಥಿಕ ನೀತಿ ಮತ್ತು ದೇಶದ "ಏಕತೆಗೆ ಭಂಗ ತರುವಂತಹ ಕೋಮುವಾದವನ್ನು ವಿರೋಧಿಸಿ" ಆಗಸ್ಟ್ 9 ರಂದು ಮಂಗಳೂರು ನಗರದಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ. ಎಫ್.ಐ) ಕಾರ್ಯಕರ್ತರು "ಪಾದಯಾತ್ರೆ"ನಡೆಸಿದರು.

ಬೆಳಿಗ್ಗೆ ಮಂಗಳೂರಿನ ತುತ್ತ ತುದಿ ಹಳೆ ಬಂದರಿನ ಮೀನುಗಾರಿಕಾ ಪ್ರದೇಶದಲ್ಲಿ ಫ್ಯಾಕ್ಸ್ ಕಾರ್ಮಿಕ ಸಂಘಟನೆಯ ಪ್ರಾಂತ್ಯ ಕಾರ್ಯದರ್ಶಿ ಸಂಜೀವ ಬಳ್ಕೂರ್‌ರವರು ಪಾದ ಯಾತ್ರೆಯನ್ನು ಉದ್ಘಾಟಿಸಿದರು.

ಉದ್ಘಾಟನಾ ಸಮಾರಂಭದಲ್ಲಿ ಎಸ್. ಎಫ್.ಐ.ನ ಜಿಲ್ಲಾ ಸಮಿತಿ ಕಾರ್ಯದರ್ಶಿ ಎಸ್. ರಾಜ್‌ಕುಮಾರ್‌ರವರು ಮಾತನಾಡಿದರು.

ಕರಪತ್ರ ಘೋಷಣೆ, ಬ್ಯಾನರ್, ಪ್ಲೇ ಕಾರ್ಡ್‌ಗಳೊಡನೆ ಪ್ರಾರಂಭವಾದ ಪಾದಯಾತ್ರೆಯು ನಗರದ ವಿವಿಧ ಕಡೆಗಳಲ್ಲಿ ಹಾದು ಸುಮಾರು ಹತ್ತು ಕಿ.ಮೀ. ಕ್ರಮಿಸಿ ಸಾಯಂಕಾಲ ಮಂಗಳೂರು ಪುರಭವನದಲ್ಲಿ ಸಮಾರೋಪಗೊಂಡಿತ್ತು.

ಸಿಂಧನೂರಲ್ಲಿ ಸೈಕಲ್ ಜಾಥಾ

ಸಿಂಧನೂರು : ಇಲ್ಲಿನ ಡಿ.ವೈ.ಎಫ್.ಐ ಮತ್ತು ಎಸ್.ಎಫ್.ಐ. ಸಂಘಟನೆಗಳು ಆಗಸ್ಟ್ 10, 1993 ರಂದು ಸಿಂಧನೂರು ನಗರದ ಮಹಬೂಬ ಕಾಲೋನಿಯಲ್ಲಿ ಸೈಕಲ್ ಜಾಥಾ ನಡೆಸಿದ್ದವು. ಡಿ.ವೈ.ಎಫ್.ಐನ ತಾಲೂಕ ಸಮಿತಿಯ ಉಪಾಧ್ಯಕ್ಷರಾದ ರಮೇಶ ಗಬ್ಬೂರಗುತ್ತಿ ಸ್ವಾಗತಿಸಿದರು. ನಂತರ ಎಸ್.ಎಫ್.ಐನ ತಾಲೂಕ ಸಮಿತಿಯ ಕಾರ್ಯದರ್ಶಿಗಳಾದ ಬಸವರಾಜ ಜಾಥವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿ ಡಿ.ವೈ.ಎಫ್.ಐನ ತಾಲೂಕ ಸಮಿತಿಯ ಕಾರ್ಯದರ್ಶಿ ಸುಜನ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸೈಕಲ್ ಜಾಥಾ ನಗರದಲ್ಲಿ ಎಲ್ಲ ಬೀದಿಗಳಲ್ಲಿ ಸಂಚರಿಸಿತು. ಸೈಕಲ್ ಜಾಥಾ ಮುಕ್ತಾಯ ಸಮಾರಂಭವನ್ನು ಪುರಸಭೆಯಲ್ಲಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಡಿ.ವೈ.ಎಫ್.ಐ ಮುಖಂಡರಾದ ನಾರಾಯಣ ಕಲ್ಲೇದ್ ಮತ್ತು ಎಸ್.ಎಫ್.ಐ ತಾಲೂಕು ಸಮಿತಿಯ ಅಧ್ಯಕ್ಷರಾದ ಚಿದಾನಂದ ಇವರು ಮಾತನಾಡಿದರು.

ಮಹಿಳೆಯರ ಮೆರವಣಿಗೆ

ಬಿಜಾಪುರ : ಜನವಾದಿ ಮಹಿಳಾ ಸಂಘಟನೆ (ಜೆ.ಎಂ.ಎಸ್.) ಬಿಜಾಪುರ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಆಗಸ್ಟ್ 12 ರಂದು ಇಲ್ಲಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು.

ನಂತರ ಜಿಲ್ಲಾಧಿಕಾರಿ ಕಚೇರಿ ಬಳಿ ನಡೆದ ಸಭೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಎನ್.ಕೆ. ಉಪಾಧ್ಯಾಯ ಮತ್ತು ರೈತ ಮುಖಂಡ ಭೀಮಸಿ ಕಲಾದಗಿ ಮಾತನಾಡಿದರು.

ಜೆ.ಎಂ.ಎಸ್. ಜಿಲ್ಲಾ ಸಂಚಾಲಕಿ ಅನುಸೂಯ ಕಾಸೆ ಜಿಲ್ಲಾಧಿಕಾರಿಗೆ ಒಂದು ಮನವಿಯನ್ನು ಅರ್ಪಿಸಿದರು.

ಚೆಕ್ಕವ್ವಾ ಜಾಬಗೊಂಡ, ಸಂಗಮ್ಮ ಹಿರೇಮಠ, ಸೋನುಬಾಯಿ ಬ್ಯಾಳಿ, ಅನುಸೂಯ ಕಾಸೆ ಮೊದಲಾದವರು ಮೆರವಣಿಗೆಯ ನೇತೃತ್ವವನ್ನು ವಹಿಸಿದ್ದರು

ಕುಂದಾಪುರದಲ್ಲಿ ಪಕ್ಷದ ಸಭೆ

ಕುಂದಾಪುರ: ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯ ವಿರುದ್ಧ ಹಾಗೂ ಜನತೆಯ ಐಕ್ಯತೆಯನ್ನು ಒಡೆಯುತ್ತಿರುವ ಕೋಮುವಾದದ ವಿರುದ್ಧ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಕುಂದಾಪುರದ ತಾಲೂಕು ಸಮಿತಿಯ ನೇತೃತ್ವದಲ್ಲಿ ಆಗಸ್ಟ್ 13 ರಂದು ಬೃಹತ್ ಮೆರವಣಿಗೆ ಹಾಗೂ ಸಾರ್ವಜನಿಕ ಸಭೆ ನಡೆಯಿತು.

ಕುಂದಾಪುರ ಗಾಂಧಿ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆ ಅಧ್ಯಕ್ಷತೆಯನ್ನು ಅಬ್ರಹಾಂ ಕರ್ಕಡ ವಹಿಸಿದ್ದರು. ಮುಖ್ಯ ಭಾಷಣಕಾರರಾಗಿ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ. ಆರ್. ಶ್ರೀಯಾನ್‌ನವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಅವರು ಸರಕಾರದ ವಿರುದ್ಧ ತೀವ್ರ ಹೋರಾಟಕ್ಕೆ ಮುಂದಾಗಬೇಕೆಂದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಅಬ್ರಹಾಂ ಕರ್ಕಡರವರು ಮಾತನಾಡುತ್ತಾ ಸ್ಥಾಪಿತ ಹಿತಾಸಕ್ತಿಗಳು ಜನತೆಯ ಮಧ್ಯದಲ್ಲಿ ಕೋಮುವಾದಿ ಭಾವನೆಗಳನ್ನು ಹೆಚ್ಚಿಸಿ ಅವರ ಐಕ್ಯತೆಯನ್ನು ಮುರಿಯುತ್ತಿರುವುದನ್ನು ಖಂಡಿಸಿ ಕೋಮುವಾದದ ವಿರುದ್ಧ ನಿರಂತರವಾಗಿ ಜನಸಾಮಾನ್ಯರು ಹೋರಾಡಬೇಕೆಂದರು. ಸಿ. ನಾರಾಯಣ ಸ್ವಾಗತಿಸಿ ವಿ. ನರಸಿಂಹ ಧನ್ಯವಾದ ಸಲ್ಲಿಸಿದರು.

ಜೈಲ್ ಭರೋ

ಬೇಲೂರಿನಲ್ಲಿ ಪ್ಲಾಂಟೇಷನ್ ಕಾ... ಕರು ಮತ್ತು ಲಕ್ಷ್ಮಿಸಾಮಿಲ್ 70 ಕಾರ್ಮಿ... ತಹಸಿಲ್ದಾರ್‌ರವರ ಕಚೇರಿಯನ್ನು ಮು... ಹಾಕಿ ಬಂಧನಕ್ಕೊಳಗಾದರು. ... ಸೋಮಶೇಖರ್ ನವರ ಮೊದಲಾದ... ನೇತೃತ್ವ ಕೊಟ್ಟರು.

ಯಸಳೂರಿನಲ್ಲಿ ಕವುಕೊಹಿ ... ಕಳಲಿ ಎಸ್ಟೇಟ್‌ನ ಸುಮಾರು 90 ಕಾ... ಕರು ಅಂಚೆ ಕಚೇರಿಯನ್ನು ಪಿಕೆಟಿ... ಮಾಡಿ ಬಂಧನಕ್ಕೊಳಗಾದರು. ಕಾಂ. ... ಕೃಷ್ಣಮೂರ್ತಿ, ಕಾಂ. ರಾಜೇಂದ್ರ ... ಕಾಂ. ಮುತ್ತಣ್ಣ ನಾಯಕತ್ವವಹಿಸಿದ್ದರು.

ಕೊಡಗು : ಮಡಿಕೇರಿ... ಸಿಐಟಿಯು ಕಾರ್ಮಿಕರು, ಬ್ಯಾಂಕ್, ಡಿ... ಎಫ್.ಐ., ಮೊದಲಾದ ಸಂಘಟನೆಗಳ ... ಸ್ಯರುಗಳು ಸುಮಾರು 250 ಮಂದಿ ... ಐ.ಆರ್. ಡಾ. ಅಸ್ವಣ್ಣ, ಕಾಂ ಕಾಳಯ್ಯ ... ಪೀಟರ್ ಲೋಬೋ, ಕಾಂ. ಕೃಷ್ಣಕುಮ... ರರವರ ನಾಯಕತ್ವದಲ್ಲಿ ಜಿಲ್ಲಾಧಿಕಾರಿಯ... ಕಚೇರಿಯನ್ನು ಮುತ್ತಿಗೆ ಹಾಕಿ ಬಂಧನ... ಳಗಾದರು.

ಜೇವರ್ಗಿಯಲ್ಲಿ ಸಚಿವರಿಗೆ ಘೇರಾ...

ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ... ಆಗಸ್ಟ್ 9 ರಂದು ರಸ್ತೆ ತಡೆ ಚಳುವಳಿಯ... ನಡೆಸಲಾಯಿತು. ಸಿಪಿಐ(ಎಂ), ಜ... ದಳ ಕರ್ನಾಟಕ ಪ್ರಾಂತ ರೈತ ಸಂಘ, ... ಕಾರ್ಮಿಕರ ಸಂಘ, ಸೀಮೆಎಣ್ಣೆ ವ... ಸಂಘ ಮೊದಲಾದವುಗಳ ಸಾವಿರಾರು ... ಸ್ಯರು ಪಾಲ್ಗೊಂಡಿದ್ದರು.

ಚಳುವಳಿ ಸಂದರ್ಭದಲ್ಲಿ ಪಟ್ಟ... ಆಗಮಿಸಿದ್ದ ರಾಜ್ಯದ ವಸತಿ ಖಾತೆ ... ಗೋಪಿನಾಥ ಸಾಂಡ್ರಾ ಅವರಿಗೂ ... ಹೊತ್ತು ಮುತ್ತಿಗೆ ಹಾಕಲಾಯಿತು.

ಬಹಿರಂಗ ಸಭೆಯಲ್ಲಿ ದಳದ ... ಲಿಂಗಪ್ಪ ಪಾಟೀಲ್, ಅಪ್ಪ ಸಾಹುಗೌ... ಪಾಟೀಲ ರದ್ದವಾಡಿ ಮೊದಲಾದವರು ಮಾ... ನಾಡಿದರು.

ಅಯೋಧ್ಯೆಯಲ್ಲಿ "ಮುಕ್ತನಾದ" ಕಾರ್ಯಕ್ರಮದ ಬಗ್ಗೆ ಬಿಜೆಪಿ ಲೋಕಸಭೆಯಲ್ಲಿ ರಾಜ್ಯಸಭೆಯಲ್ಲಿ ಎತ್ತಿರುವ ವಿವಾದ ಈಗ ದೇಶದಲ್ಲಾ ಜನರಿಗೂ ಗೊತ್ತಾಗಿದೆ. ಬೌದ್ಧ ಜಾತಕ ಕಥೆಗಳ ಪ್ರಕಾರ ರಾಮ-ಸೀತೆ ಅಣ್ಣ ತಂಗಿಯರೆಂದು ಹೇಳುತ್ತಾರೆ ಎಂದು "ಸಹಮತ್" ಪ್ರದರ್ಶಿಸಿದ ಹಲವಾರು ಫಲಕಗಳಲ್ಲಿ ಒಂದರ ಮೂಲೆಯಲ್ಲಿ ಬಂದ ವಿಷಯದ ಕುರಿತು ಬಿಜೆಪಿ ಕುಯಿಲೆಬ್ಬಿಸಿದೆ. ಕೇಂದ್ರ ಸರ್ಕಾರ ಹಾಗೂ ಫೈಜಾಬಾದ್ ಆಡಳಿತಗಳು ಆ ಫಲಕವನ್ನು ವಶಪಡಿಸಿಕೊಂಡಿವೆ ಹಾಗೂ ಕೇಸು ದಾಖಲು ಮಾಡಿವೆ. ಈ ಶಕ್ತಿಗಳ ದುಷ್ಟ ರಾಜಕೀಯವನ್ನು ಬಯಲಿಗೆಳೆಯುತ್ತಲೇ ಇಂತಹ ಪ್ರಸಂಗಗಳಲ್ಲಿ ಜಾತ್ಯತೀತ ಶಕ್ತಿಗಳು ವಹಿಸಬೇಕಾದ ಎಚ್ಚರದ ಬಗ್ಗೆ ಬರೆಯುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್

ರಾಮ-ಸೀತೆಯ ಫಲಕದ ವಿವಾದ

ಜಾತ್ಯಾತೀತ ಶಕ್ತಿಗಳು ಜಾಗರೂಕರಾಗಿರಬೇಕು

ಐಕ್ಯತೆಯ ಸಂದೇಶದಿಂದ ಹೌಹಾರಿದ ಕೋಮುವಾದಿಗಳು

--ಸುರ್ಜಿತ್

ಇತ್ತೀಚೆಗೆ 'ಸಹಮತ್' ಸಂಘಟಿಸಿದ 'ಮುಕ್ತನಾದ' ಕಾರ್ಯಕ್ರಮದ ಬಗ್ಗೆ ಬಿಜೆಪಿ ದೊಡ್ಡ ಅಪಪ್ರಚಾರ ನಡೆಸುತ್ತಿದೆ. ತಾವು ಎಂಟು ತಿಂಗಳ ಹಿಂದೆ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿ ದೇಶಾದ್ಯಂತ ನೂರಾರು ಜೀವಗಳನ್ನು ಬಲಿತೆಗೆದುಕೊಂಡ ಕೋಮು ದಳ್ಳುರಿಯನ್ನು ಹಬ್ಬಿದ ಮಣ್ಣಿನಿಂದ ಐಕ್ಯತೆಯ, ಜಾತ್ಯಾತೀತತೆಯ ಸಂದೇಶ ಸಾರುವುದನ್ನು ಸಂಘ ಪರಿವಾರದ ಜನ ಹೇಗೆ ತಾನೇ ಸಹಿಸಿಯಾರು? ದುರದೃಷ್ಟವಶಾತ್ ಜಾತ್ಯಾತೀತ 'ಸಹಮತ್' ಕಲಾವಿದರ, ಸಾಂಸ್ಕೃತಿಕ ಕಾರ್ಯಕರ್ತರ ಒಂದು ಪ್ರಗತಿಪರ ಸಂಘಟನೆ. ಜನವರಿ 1, 1989 ರಂದು ಕಾರ್ಮಿಕ ವರ್ಗದ ಪ್ರದೇಶದಲ್ಲಿ 'ಹಲ್ಲಾ ಬೋಲ್' ಬೀದಿ ನಾಟಕ ಮಾಡುವಾಗ ಕಾಂಗ್ರೆಸ್ (ಐ) ಸರಕಾರದ ಬೆಂಬಲ ಪಡೆದ ಶೋಷಕರ ಹಲ್ಲೆಗೆ ಬಲಿಯಾಗಿ ಹುತಾತ್ಮರಾದ ಸಫ್ದರ್ ಹಶ್ಮಿಯವರ ಸ್ಮರಣಾರ್ಥ ಈ ಹತ್ಯೆಗೆ ಬಲವಾದ ಪ್ರತಿಭಟನೆ ವ್ಯಕ್ತಪಡಿಸಿದ ಕಲಾವಿದರು ಸ್ಥಾಪಿಸಿಕೊಂಡ ಟ್ರಸ್ಟ್ ಇದು. ಸಾಮಾಜಿಕ ವ್ಯವಸ್ಥೆಯನ್ನು ಬದಲಿಸಲು, ಶೋಷಣೆಯ ವಿರುದ್ಧ ಜಾಗೃತಿಯುಂಟು ಮಾಡಲು ತನ್ನನ್ನು ಅರ್ಪಿಸಿಕೊಂಡಿದ್ದ ಸಫ್ದರ್‌ರವರು ಅಪೂರ್ಣವಾಗಿ ಬಿಟ್ಟು ಹೋದ ಕೆಲಸವನ್ನು ಪೂರ್ಣಗೊಳಿಸುವುದು ಈ ಟ್ರಸ್ಟ್‌ನ ಮುಖ್ಯ ಗುರಿ. ಕೋಮುವಾದ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟ ಸಫ್ದರ್‌ರವರ ಜೀವನದ ಗುರಿಯ ಒಂದು ಅಂಶವಾಗಿತ್ತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. 'ಸಹಮತ್' ಅವರ ಈ ಧ್ಯೇಯ ಸಾಧನೆಗೆ ಸಾಂಸ್ಕೃತಿಕ ರಂಗದಲ್ಲಿ ಬಿಜೆಪಿ ಹಾಗೂ ಕೋಮುಶಕ್ತಿಗಳ ಸವಾಲನ್ನು ಸ್ವೀಕರಿಸಿತು. ಕರಾಳ ಕೋಮುಶಕ್ತಿಗಳು ನಾಶಮಾಡಹೊರಟಿರುವ ನಮ್ಮ ಶ್ರೀಮಂತ, ವೈವಿಧ್ಯಮಯ, ಸಮಿಶ್ರ ಸಾಂಸ್ಕೃತಿಕ ಪರಂಪರೆಯ ಸಂದೇಶವನ್ನು ಸಾರಲು ಸ್ವಾತಂತ್ರ್ಯದ ಮುನ್ನಾದಿನ ಅಯೋಧ್ಯೆಯಲ್ಲಿ 'ಮುಕ್ತನಾದ' ಎಂಬ ಉತ್ಸವವನ್ನು ಸಂಘಟಿಸಿತು.

ಗೊಂದಲವುಂಟುಮಾಡಲು ಅವಕಾಶ

ಈ ಸಂದರ್ಭದಲ್ಲಿ ಅಯೋಧ್ಯೆಯಲ್ಲಿ ಏರ್ಪಡಿಸಿದ್ದ ಪ್ರದರ್ಶನದಲ್ಲಿ ಅಯೋಧ್ಯೆಯ ಸಾಂಸ್ಕೃತಿಕ ಪರಂಪರೆಯನ್ನು ಅದರ ವೈವಿಧ್ಯತೆ, ಬಹುತ್ವವನ್ನು ಮನವರಿಕೆ ಮಾಡಿಸುವ ಫಲಕಗಳನ್ನು ಪ್ರದರ್ಶಿಸಲಾಗಿತ್ತು. ವಿವಿಧ ಚಾರಿತ್ರಿಕ ಅವಧಿಗಳ ಚಾರಿತ್ರಿಕ ದಸ್ತಾವೇಜುಗಳ ಆಧಾರದ ಮೇಲೆ ಈ ಫಲಕಗಳನ್ನು ತಯಾರಿಸಲಾಗಿತ್ತು. ಇವೆಲ್ಲಾ ಬಹಳಷ್ಟು ಬೋಧಕವಾಗಿದ್ದವು. ಈ ಪ್ರದರ್ಶನ ಏರ್ಪಡಿಸಿದ್ದವರು ತಮ್ಮದೇ ಆವೃತ್ತಿ, ಅಭಿಪ್ರಾಯವನ್ನು ಎಲ್ಲೂ ಸೇರಿಸಿರಲಿಲ್ಲ. ಇಂತಹ ಒಂದು ಫಲಕ "ದಶರಥ ಜಾತಕ" ಎಂಬ ಬೌದ್ಧ ಜಾತಕ ಕತೆಯನ್ನು ಆಧರಿಸಿತ್ತು. ಬಹಳ ಸಮಯದಿಂದ ಇರುವ ಜಾತಕ ಕಥೆಯಿದು. ಯಾರೂ ಇದರ ಮೌಲಿಕತೆಯನ್ನು ಪ್ರಶ್ನಿಸಿರಲಿಲ್ಲ. ಈ ಜಾತಕ ಕಥೆಯಲ್ಲಿ ರಾಮ, ಸೀತೆಯರು ಅಣ್ಣ ತಂಗಿ ಎಂದು ನಿರೂಪಿಸಿದೆ. ಈಗಿರುವ ಪರಿಸ್ಥಿತಿಯಲ್ಲಿ ಬಿಜೆಪಿ ಇದನ್ನು ಈ ಪ್ರದರ್ಶನದ ವಿರುದ್ಧವೇ ಹಲ್ಲೆ ನಡೆಸಲು ಬಳಸಿದೆ.

ಒಂದುತ್ವ ಘೋಷಣೆಯ ಪ್ರತಿಪಾದನೆಯ ಮೂಲಕ ಜನರನ್ನು ಒಡೆಯಲು ಪ್ರಯತ್ನಿಸುತ್ತಿರುವ ಬಿಜೆಪಿ-ವಿ.ಹೆಚ್.ಪಿ. ಸಹಮತ್ ಅದಕ್ಕೆ ಸವಾಲು ಹಾಕಿದ್ದನ್ನು ಕಂಡು ಆರಂಭದಿಂದಲೇ ಆತಂಕಗೊಂಡಿದ್ದರು. ಈ ಫಲಕವನ್ನು ತಮ್ಮ ಪ್ರಚಾರಕ್ಕೆ ಬಳಸಿಕೊಂಡರು. ಸಂಸತ್ತಿನಲ್ಲಿ ಅದನ್ನು ಎತ್ತಿದಾಗ ಸಿಪಿಐ(ಎಂ) ಸದಸ್ಯರು ಅವರಿಗೆ ಸವಾಲೊಡ್ಡಿದರು. ದುರದೃಷ್ಟವಶಾತ್ ಈ ಪ್ರದರ್ಶನವನ್ನೇ ನೋಡದ ಅಥವಾ ಅಯೋಧ್ಯೆಗೂ ಹೋಗದ ಹಲವಾರು ಜನಗಳಲ್ಲಿ ಗೊಂದಲವುಂಟುಮಾಡುವುದು ಅವರಿಗೆ ಸಾಧ್ಯವಾಯಿತು.

ನಿಜ. ಈಗ ದೇಶದಲ್ಲಿರುವ ಕೋಮು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೆಲವು ಐತಿಹಾಸಿಕ ತಥ್ಯಗಳನ್ನು ಮುಂದಿಡುವಾಗಲೂ ಜಾಗರೂಕರಾಗಿರಬೇಕು. ಇಲ್ಲವಾದರೆ ಕೋಮುವಾದಿ ಶಕ್ತಿಗಳು ಅದನ್ನೇ ಬಳಸಿ ಜನಗಳನ್ನು ತಪ್ಪುದಾರಿಗೆಳೆಯಲು ಪ್ರಯತ್ನಿಸುತ್ತಾರೆ. ಪ್ರಶ್ನೆ ಈ ಬೌದ್ಧ ಜಾತಕದ ಕಥೆ ಮೌಲಿಕವೋ, ಅಲ್ಲವೋ ಎಂದಲ್ಲ. 'ಸಹಮತ್'ನಡೆಸಿದ ಈ ಸಾರ್ಥಕ ಪ್ರಯತ್ನದ ಪ್ರಮುಖ ಸಂದೇಶ ಈ ಫಲಕವೊಂದರಿಂದಾಗಿಯೇ ಜನಗಳಿಗೆ ತಲುಪದಂತಾಯಿತು ಎಂಬುದೇ ಪ್ರಶ್ನೆ. ಧಾರ್ಮಿಕ ಭಾವನೆಗಳು ರಾಷ್ಟ್ರೀಯ ಐಕ್ಯತೆಯನ್ನು ಕದಡಲು ಅವಕಾಶ ನೀಡಬಾರದು. ಆದ್ದರಿಂದಲೇ ನಮ್ಮ ಪಕ್ಷ ಆರಂಭದಿಂದಲೂ ಬಾಬ್ರಿಮಸೀದಿ-ರಾಮಜನ್ಮಭೂಮಿ ಪ್ರಶ್ನೆಯನ್ನು ಮಾತುಕತೆಯ ಮೂಲಕ, ಸಾಧ್ಯವಾಗದಿದ್ದರೆ ನ್ಯಾಯಾಲಯದ ತೀರ್ಮಾನದ ಮೂಲಕ ಪರಿಹರಿಸಿಕೊಳ್ಳಬೇಕು ಎಂದು ನಿರಂತರವಾಗಿ ಹೇಳುತ್ತಾ ಬಂದಿತ್ತು. ಬಹುಸಂಖ್ಯಾತ ಕೋಮು ತನ್ನ ಬಲಪ್ರಯೋಗದಿಂದ ಪ್ರಶ್ನೆಯನ್ನು ಬಗೆಹರಿಸಲು ಪ್ರಯತ್ನಿಸಿದರೆ ಅದು ಛಿದ್ರಕಾರಿಯಾಗುತ್ತದೆ. ಅಲ್ಪಸಂಖ್ಯಾತ ಕೋಮನ್ನು ದೂರಸರಿಸಿದಂತಾಗುತ್ತದೆ. ಅಯೋಧ್ಯಾ ಪ್ರಶ್ನೆಯಲ್ಲಾಗಿರುವುದು ಇದೇ.

ಬೇರೆ ಸಂಗತಿಗಳೂ ಇವೆ

ಈಗಿನ ರಾಜಕೀಯ ಸನ್ನಿವೇಶದಲ್ಲಿ ಬೇರೆ ಸಂಗ
ತಿಗಳೂ ಇವೆ. ಇವನ್ನು ಮರೆಯಬಾರದು. ಅಯೋ
ಧ್ಯೆಯ ಪ್ರಶ್ನೆಯ ಮೇಲೆ ಕಾಂಗ್ರೆಸ್ ರಾಜಿ ನಿಲುವು ತಳೆ
ದಿರುವಾಗ ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂ
ಡರ ಸಹಯೋಗ ಪಡೆದಿರುವುದನ್ನು ಯಾರೂ ಮೆಚ್ಚ
ಲಾರರು. ಸ್ಥಳೀಯ ಕಾಂಗ್ರೆಸ್ಸಿಗರಂತೂ ಅದನ್ನು ಬಹಿರಂ
ಗವಾಗಿಯೇ ವಿರೋಧಿಸಿದರು. ಇಂತಹ ವಾತಾವರಣ
ಸೃಷ್ಟಿಯಾಗಿರುವಾಗ ಜನಜನಿತ ನಂಬಿಕೆಗಳಿಗೆ ವಿರುದ್ಧ
ವಾಗಿ ಸಹಮತ್ ರಾಮ-, ಸೀತೆಯನ್ನು ಅಣ್ಣ ತಂಗಿ
ಯಾಗಿ ಚಿತ್ರಿಸಲು ಪ್ರಯತ್ನಿಸುತ್ತಿದೆ ಎಂದು ಅಪಪ್ರಚಾರ
ನಡೆಸಿ ಜನರನ್ನು ಉದ್ರೇಕಿಸಲು ಅವಕಾಶವಾಗಿದೆ. ಏಕೆಂ
ದರೆ ಕೆಲವೇ ಮಂದಿಯಷ್ಟೇ ಸಹಮತ್‌ನ ಈ ಪ್ರಯತ್ನದ
ಚಾರಿತ್ರಿಕ ಹಿನ್ನೆಲೆಯನ್ನು ಅರಿತು ಬೌದ್ಧ ಜಾತಕಗಳು
ಕೂಡಾ ನಮ್ಮ ಭಾರತೀಯ ಸಂಸ್ಕೃತಿಯ ಅಂಗ ಎಂದು
ಅರಿಯಬಲ್ಲರು.

ಅಲ್ಲದೆ ಬಿಜೆಪಿ ಹಲವು ವರ್ಷಗಳಿಂದ ಎಂತಹ
ವಾತಾವರಣ ಸೃಷ್ಟಿಸಲು ಪ್ರಯತ್ನಿಸುತ್ತಿದೆ, ಎಡ ಮತ್ತು
ಪ್ರಜಾಪ್ರಭುತ್ವ ಶಕ್ತಿಗಳು ಇವನ್ನು ಎದುರಿಸುವಲ್ಲಿ ಎಷ್ಟು
ವಿಫಲವಾಗಿವೆ ಎಂಬುದು ನಾಲ್ಕು ಹಿಂದಿ ಭಾಷಿಕ ರಾಜ್ಯ
ಗಳಲ್ಲಿ ಕಳೆದ ಚುನಾವಣೆಗಳಲ್ಲಿ ಅವರು ಪಡೆದ ವಿಜ
ಯದಿಂದಲೇ ಸ್ಪಷ್ಟವಾಗಿದೆ. ಎಡ ಮತ್ತು ಜಾತ್ಯಾತೀ
ಶಕ್ತಿಗಳ ಮುದಿರುವ ತಕ್ಷಣದ ಪ್ರಶ್ನೆಯೆಂದರೆ ನಮ್ಮ
ಸಾಂಸ್ಕೃತಿಕ ಪರಂಪರೆಗೆ ಹಾಗೂ ಬ್ರಿಟಿಷ್ ಆಳ್ವಿಕೆಯ
ವಿರುದ್ಧ ಎಲ್ಲರ ಹೋರಾಟದ ಪರಂಪರೆಗೆ ವಿರುದ್ಧ
ವಾದ, ರಾಷ್ಟ್ರೀಯ ಐಕ್ಯತೆಯನ್ನು ಛಿದ್ರಗೊಳಿಸುವ ಬಿಜೆ
ಪಿಯ ಹಿಂದುತ್ವ ಪ್ರತಿಪಾದನೆಯನ್ನು ಬಯಲಿಗೆಳೆದ
ಜಾತ್ಯಾತೀತ ಒಂದುತ್ವ ಪ್ರತಿಪಾದನೆಯನ್ನು ಬಯಲಿಗೆ
ಳೆದು ಜಾತ್ಯಾತೀತನೀತಿಗಳನ್ನು ಎತ್ತಿ ಹಿಡಿಯುವುದು

ನರಸಿಂಹರಾಯರೇ, ಅಮೇರಿಕಾದ ಆಳರಸರೇ, ಭಾರತ ದೇಶ ಮಾರಾಟಕ್ಕಿಲ್ಲ, ಎಚ್ಚರ!

ಎರಡು ಸೂಪರ್‌ಪವರ್‌ಗಳ ಸ್ವಾರ್ಥದ ಸ್ಪರ್ಧೆಯಿಂದಾಗಿಯೇ ವಿಶ್ವದಲ್ಲಿ ಅಲ್ಲಲ್ಲಿ ಗಂಭೀರ ಪರಿಸ್ಥಿತಿ ಏರ್ಪಟ್ಟಿದೆ, ಸೋವಿಯತ್ ಒಕ್ಕೂಟದ ವಿಘಟನೆಯನಂತರ ಆ ಸ್ಪರ್ಧೆ ಹಾಗೂ 'ಶೀತಲ ಸಮರ'ದ ಪರಿಸ್ಥಿತಿ ಮಾಯವಾಗಿ ಹೊಸ ವಾತಾವರಣ ಹುಟ್ಟಿದೆ ಎಂಬ ನಿರೀಕ್ಷೆಯಿದ್ದವರೆಲ್ಲಾ ಗಲಿಬಿಲಿಗೊಳ್ಳುವಂತಹ ಸ್ಥಿತಿ ಈಗ ಏರ್ಪಟ್ಟಿದೆ. ಸಾಮ್ರಾಜ್ಯಶಾಹಿ ಈಗಲೂ ಮಾನವ ಕುಲದ ಪ್ರಮುಖ ಶತ್ರು ಎಂಬುದನ್ನು ಇದು ಮತ್ತೊಮ್ಮೆ ಸಾರಿದೆ. ಭಾರತದ ಸಂದರ್ಭದಲ್ಲಿ ಹದಿನೈದು ದಿನಗಳ ಅಂತರಗಳಲ್ಲಿಯೇ ನಡೆದ ನಾಲ್ಕು ಘಟನೆಗಳಿಂದಂತೂ ಇದು ಎಲ್ಲರಿಗೂ ಮನದಟ್ಟಾಗಿದೆ.

ಹದಿನೈದೇ ದಿನಗಳ ಅಂತರದಲ್ಲಿ ನಡೆದ ನಾಲ್ಕು ಘಟನೆಗಳ ಅಮೇರಿಕಾದ ಆಳರಸರ 'ಹೊಸ ವಿಶ್ವ ವ್ಯವಸ್ಥೆ'ಯ ಹೂರಣ ಏನು ಎಂದು ಕಣ್ಣಿದ್ದ ಕುರುಡರಿಗೆ ಬಿಟ್ಟು ದೇಶೆಲ್ಲರಿಗೂ ಅರ್ಥಮಾಡಿಸಿವೆ. ಈ ಸಾಮ್ರಾಜ್ಯಶಾಹಿ ಕಣ್ಣೋಟದಲ್ಲಿ ಸಾರ್ವಭೌಮ ದೇಶಗಳ ನಡುವೆ, ಅವು ದೊಡ್ಡದಾಗಿರಲಿ, ಸಣ್ಣದಾಗಿರಲಿ, ಸಮಾನತೆ ಇರದೇಕೆಂಬ ವಿಚಾರಕ್ಕಂತೂ ಖಂಡಿತಾ ಅವಕಾಶ ಇಲ್ಲ ಎಂದು ಸ್ಪಷ್ಟವಾಗಿದೆ.

ಈ ನಾಲ್ಕು ಘಟನೆಗಳೆಂದರೆ-

1) ಅಮೇರಿಕಾ ಕ್ರಯೋಜೆನಿಕ್ ರಾಕೆಟ್ ಇಂಜಿನ್ ತಂತ್ರಜ್ಞಾನವನ್ನು ಭಾರತಕ್ಕೆ ವರ್ಗಾಯಿಸದಂತೆ ದಿವಾಳಿಯೆದ್ದ ರಶ್ಯಾದ ಮೇಲೆ ಒತ್ತಡ ಹಾಕಿತು. ಈ ಇಂಜಿನು ಖಂಡಾಂತರ ಕ್ಷಿಪಣಿಗಳನ್ನು ತಯಾರಿಸಲು ಏನೇನೂ ಉಪಯೋಗವಿಲ್ಲ. ಎಂದು ಅಮೇರಿಕಾದ ಆಳರಸರಿಗೆ ಗೊತ್ತಿದೆ. ಅಲ್ಲದೆ ಅತಿದೂರಕ್ಕೆ ಹೋಗಬಲ್ಲ ಕ್ಷಿಪಣಿ ತಯಾರಿಸಲು ಅಗತ್ಯವಾದ ಮೂಲಅಂಶಗಳನ್ನು ಒದಗಿಸಬಲ್ಲ ಪಿ.ಎಸ್.ಎಲ್.ವಿ. ಕಾರ್ಯಕ್ರಮ ಆಗಲೇ ಭಾರತದ ಬಳಿಯಿದೆ ಎಂದೂ ಅವರಿಗೆ ತಿಳಿದಿದೆ. ಆದರೂ ಈ ಒತ್ತಡ, ನಿಷೇಧ ಏಕೆ? ಕಾರಣ ಸ್ಪಷ್ಟ "ಹೊಸ ಜಗತ್ತಿ' 'ನಲ್ಲಿ ಕ್ಷಿಪಣಿ ತಯಾರಿಸುವ ಸಾಮರ್ಥ್ಯವುಳ್ಳ ಇನ್ನಷ್ಟು ದೇಶಗಳು ಮೂಡಿ ಬರಲು ಅವಕಾಶವಿಲ್ಲ!

2) ಭಾರತಕ್ಕೆ ಕ್ಷಿಪಣಿಗೆ ಬೇಕಾದ ತಂತ್ರಜ್ಞಾನವನ್ನು ಮಾರಿತೆಂಬ ಆಪಾದನೆಯ ಮೇಲೆ ಅಮೇರಿಕಾದ ಒಂದು ಕಂಪೆನಿಯ ವಿರುದ್ಧ ಅಮೇರಿಕನ್ ಸರಕಾರ ಕ್ರಮ ಕೈಗೊಂಡಿದೆ. ತಾನು ಕಾನೂನು-ನಿಯಮಗಳ ಪ್ರಕಾರವೇ ಪ್ರತಿಯೊಂದು ವ್ಯವಹಾರ ನಡೆಸಿರುವುದಾಗಿ ಆ ಕಂಪೆನಿ ಹೇಳುತ್ತಿದೆ. ಅಷ್ಟೇ ಅಲ್ಲ 1987 ರಲ್ಲಿ ಈ ಕಂಪೆನಿ ಹಾಗೂ ಭಾರತದ ಉನ್ನತ ಕ್ಷಿಪಣಿ ಪ್ರಯೋಗಾಲಯವಾದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯ (ಡಿ.ಆರ್.ಡಿ.ಎಲ್)ದ ನಡುವೆ ಕಾಂಟ್ರಾಕ್ಟ್ ಆಗಿರುವ ಬಗ್ಗೆ ಅಮೇರಿಕನ್ ಸರಕಾರಕ್ಕೆ ಆಗಲೇ ಚೆನ್ನಾಗಿ ತಿಳಿದಿತ್ತು. ಆದ್ದರಿಂದ ಏಕೆ ಈಗ ಈ ಕ್ರಮ, ಇದು ದುರುದ್ದೇಶಪೂರಿತವಾದುದಲ್ಲವೇ ಎಂಬ ಸಂಶಯ ಸಹಜವಾಗಿಯೇ ಮೂಡುತ್ತದೆ.

3) ಪಾಕಿಸ್ತಾನ ಒಂದು ಭಯೋತ್ಪಾದಕ ರಾಷ್ಟ್ರ ಎಂದು ಘೋಷಿಸುವುದನ್ನು ತಪ್ಪಿಸಿಕೊಳ್ಳಲು ಅಮೇರಿಕಾ ಅವಕಾಶ ನೀಡಿದೆ. ನಿಜ, ಯಾವುದೇ ಒಂದು ದೇಶವನ್ನು 'ಭಯೋತ್ಪಾದಕ ರಾಷ್ಟ್ರ' ಎಂದು ಏಕಪಕ್ಷೀಯವಾಗಿ ಘೋಷಿಸಬೇಕೆಂಬ ವಿಚಾರಕ್ಕೆ ಬೆಂಬಲ ನೀಡಬೇಕಾಗಿಲ್ಲ. ಆದರೆ ಭಯೋತ್ಪಾದನೆಯನ್ನು ಬೆಂಬಲಿಸುವ ದಾಖಲೆ ಹೊಂದಿರುವ ಒಂದು ದೇಶವಿದ್ದರೆ ಅದು ಪಾಕಿಸ್ತಾನವೇ. ಇನ್ನೂ ತಮಾಷೆಯ ಸಂಗತಿಯೆಂದರೆ ಅಮೇರಿಕಾಕ್ಕೆ ವಾಸ್ತವ ಸಂಗತಿಯೇನೆಂಬುದು ಎಲ್ಲರಿಗಿಂತಲೂ ಚೆನ್ನಾಗಿ ತಿಳಿದಿದೆ. ಏಕೆಂದರೆ ಪಾಕೀಸ್ತಾನೀ 'ಭಯೋತ್ಪಾದಕ ಪ್ರಭುತ್ವ'ವನ್ನು ಸೃಷ್ಟಿಸಿದ್ದೇ ಅಮೇರಿಕಾದ ಆಳರಸರು- ಅಫ್‌ಘಾನ್ ಕ್ರಾಂತಿ ಹಾಗೂ ಸೋವಿಯೆಟ್ ಒಕ್ಕೂಟದ ವಿರುದ್ಧ ಸೆಣಸಲು.

4) ಇಡೀ ಕಾಶ್ಮೀರ ವಿವಾದಗ್ರಸ್ತ ಪ್ರದೇಶ ಎಂದು ಅಮೇರಿಕಾ ಸಾರಿದೆ. ಇದು ಸಿಮ್ಲಾ ಒಪ್ಪಂದದ ಮಿತಿಯೊಳಗೆ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಬೇಕು ಎಂಬ ಅದರ ಹಿಂದಿನ ನಿಲುವಿನಿಂದ ಬಹುದೂರ ಸಾಗಿರುವ ಘೋಷಣೆ. "ಕಾಶ್ಮೀರಿ ಜನತೆ"ಯನ್ನು ಈ ಸಮಸ್ಯೆಯೊಳಗೆ ಎಳೆತಂದು ಅಮೇರಿಕಾ ಸೋವಿಯೆತ್ ಒಕ್ಕೂಟಕ್ಕೆ ಮಾಡಿದ್ದನ್ನೇ ಭಾರತಕ್ಕೂ ಮಾಡುವ ಯೋಚನೆಯಿಟ್ಟುಕೊಂಡಿದೆ. 'ಸ್ವಯಂ ನಿರ್ಧಾರ' ಘೋಷಣೆಯ ಮೂಲಕ ಭಾರತ ಮೊಣಕಾಲೂರವಂತೆ ಮಾಡಬಹುದು ಎಂದು ಅದರ ಲೆಕ್ಕಾಚಾರ. ಅಮೇರಿಕಾದ ಆಳರಸರ ಗುರಿ ಕಾಶ್ಮೀರವಲ್ಲ, ಭಾರತ.

ಈ ನಾಲ್ಕು ಘಟನೆಗಳ ಹಿನ್ನೆಲೆಯಲ್ಲಿ ಅಮೇರಿಕಾದ ಬಗ್ಗೆ ನರಸಿಂಹರಾವ್ ಸರಕಾರದ ನಿಲುವನ್ನು ಪ್ರಶ್ನಿಸಬೇಕಾಗಿದೆ. ಅಮೇರಿಕಾದ ಬಾಲದಂತೆ ವರ್ತಿಸುವ ಅದರ ಧೋರಣೆಯಿಂದ ಈ ಸರಕಾರಕ್ಕೆ ಲಾಭವೇನೂ ಆಗಿಲ್ಲ, ಕೀರ್ತಿಯೇನೂ ಬಂದಿಲ್ಲ, ಬದಲಿಗೆ ಅಪಕೀರ್ತಿಯೇ, ಇನ್ನಷ್ಟು ಸಾಲಗಳೇ. ಈ ಸಾಲಗಳನ್ನು ತೀರಿಸುವುದಕ್ಕಾಗಿ ಸೋಮಾಲಿಯಾಕ್ಕೆ ಭಾರತದ ಪಡೆಗಳನ್ನು ಕಳಿಸಬೇಕಾಗಿ ಬಂದಿದೆ- ಪಾಶ್ಚಿಮಾತ್ಯರು ಅಲ್ಲಿ ಮಧ್ಯಪ್ರವೇಶಿಸಿ ಉಂಟುಮಾಡುವ ಗಲೀಜನ್ನು ತೊಳೆಯಲು. ಇಂತಹ ಇನ್ನಷ್ಟು ಒತ್ತಡಗಳು ಬರಲಿವೆ. ಭಾರತೀಯ ಸೇನೆ ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯದಲ್ಲಿ "ಶಾಂತಿ ಕಾಪಾಡು"ತ್ತಿದ್ದಂತೆ ಮತ್ತೆ ಅದೇ ಕೆಲಸ ಮಾಡಬೇಕೆಂದು ಹೇಳಲಾಗುತ್ತದೆ. ಈ ಬಗ್ಗೆ ಭಾರತೀಯ ಸೇನಾಪಡೆಗಾಗಲಿ, ಇತರ ಮುಖಂಡರುಗಳಿಗಾಗಲೀ ಏನೂ ಅಪಾಯ ಕಾಣಬರುತ್ತಿಲ್ಲ ಎಂಬುದನ್ನು ನೋಡಿದರೆ ಆಗಸ್ಟ್ 15,1947 ರ ನಂತರ ನಾವೆಷ್ಟು ದೂರ ಸರಿದಿದ್ದೇವೆ ಎಂದನಿಸುವುದಿಲ್ಲವೇ?

ಅಮೇರಿಕಾ ಏನು ಬಯಸುತ್ತದೆ ಎಂಬುದು ಗುಪ್ತವಾಗೇನೂ ಇಲ್ಲ. ಕುರುಡಾದ, ಕಿವುಡಾದ, ಮೂಕವಾದ ನರಸಿಂಹರಾವ್ ಸರಕಾರಕ್ಕಷ್ಟೇ ಇದು ಕಾಣುತ್ತಿಲ್ಲ. ಮೊದಲು ಭಾರತ ನ್ಯೂಕ್ಲಿಯರ್ ಮತ್ತು ಕ್ಷಿಪಣಿ ಕಾರ್ಯಕ್ರಮವನ್ನು ಸ್ತಂಭನಗೊಳಿಸುವುದು, ನಂತರ ಅದನ್ನು ಹಿಮ್ಮೆಟ್ಟಿಸುವುದೇ ತಮ್ಮ ಗುರಿಯೆಂಬುದನ್ನು ಅಮೇರಿಕಾದ ಸರಕಾರದ ಅಧಿಕಾರಿಗಳು ತಮ್ಮ ಪ್ರತಿಯೊಂದು ಪತ್ರಿಕಾ ಸಮ್ಮೇಳನದಲ್ಲೂ ಸಾರುತ್ತಾ ಬಂದಿದ್ದಾರೆ. ಪಾಕಿಸ್ತಾನೀ ವರದಿಗಳಿಂದ ಬಯಲಿಗೆ ಬಂದಂತೆ ಆ ದೇಶದ ಪರಮಾಣು ಅಸ್ತ್ರ ಕಾರ್ಯಕ್ರಮಕ್ಕೆ ಹೋಲಿಸಬಹುದಾದ ಕಾರ್ಯಕ್ರಮ ಭಾರತ ತಯಾರಿಸುತ್ತಿದೆಯೆಂಬುದಕ್ಕೆ ಯಾವುದೇ ಪುರಾವೆಯಿಲ್ಲ. ಭಾರತದ ಕ್ಷಿಪಣಿ ಕಾರ್ಯಕ್ರಮ ಇನ್ನೂ ಕೂಡಾ ಒಂದು ಸಂಶೋಧನಾ-ಅಭಿವೃದ್ಧಿ ಪ್ರಯತ್ನವಷ್ಟೆ, ಆದ್ದರಿಂದ ಅಮೇರಿಕಾ ಭಾರತದ ನಾಗರಿಕ ಅಣು ವಿದ್ಯುತ್ ಹಾಗೂ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ಮೊದಲು ತಡೆಹಾಕಿ, ನಂತರ ಅದನ್ನು ಕಳಚಿಹಾಕುವ ಬಗ್ಗೆಯೇ ಗಮನ ಕೇಂದ್ರೀಕರಿಸುತ್ತಿದೆ ಇದರ ಹಿಂದಿರುವ ತಂತ್ರ ಏನೆಂಬುದು ಸ್ಪಷ್ಟ- ಭಾರತ ತನ್ನ ರಕ್ಷಣೆಯ ಮೂಲ ಪರಿಕರಣಗಳನ್ನು ಕಳೆದುಕೊಂಡರೆ ನಂತರದ ಕೆಲಸ ಬಹು ಸುಲಭ!

ಅಮೇರಿಕಾ ಇದರಲ್ಲಿ ಯಶಸ್ವಿಯಾಯಿತೆಂದರೆ ಅದರರ್ಥ ಭಾರತ ತನ್ನನ್ನು ರಕ್ಷಿಸಿಕೊಳ್ಳಲು ಅಸಮರ್ಥವಾಗುತ್ತದೆ. ಸೋಮಾಲಿಯಾ ಮತ್ತು ಇತರೆಡೆ ಅಮೇರಿಕಾದೊಂದಿಗೆ ಶಾಮೀಲಾಗುವ ರಾವ್ ಸರಕಾರದ ಕ್ರಮಗಳ ಫಲಗಳೇನು ಎಂಬುದೀಗ ನಮ್ಮ ಮುಂದಿದೆ. ಮತ್ತೆ ವಸಾಹತುಶಾಹೀ ಆಳ್ವಿಕೆಗೆ ಅವಕಾಶ ತೆರೆದಿಡುವುದೆಂದೇ ಇದರ ಅರ್ಥವಲ್ಲವೇ?

ಸ್ವಯಂ ರಕ್ಷಣೆಯ ಭಾರತದ ಹಕ್ಕನ
ಮೊಟಕುಗೊಳಿಸುವ ಯಾವುದೇ ವ್ಯವ
ಅಥವಾ ಭಾರತದ ಅಂತಹ ಸಾಮರ್ಥ್ಯವನ
ಮೊಟಕುಗೊಳಿಸುವ ಯಾವುದೇ ಒಪ್ಪಂ
ನಮಗೆ ಸ್ವೀಕಾರಾರ್ಹವಲ್ಲ ಎಂದು ವಿರೋ
ಪಕ್ಷಗಳು, ಮುಖ್ಯವಾಗಿ ಎಡಪಕ್ಷಗಳು ಸ್ಪ
ಪಡಿಸಿವೆ. ಭಾರತದ ಕ್ಷಿಪಣಿ ಕಾರ್ಯಕ್ರ
ದಲ್ಲಿ ಏನು ನಡೆಯುತ್ತಿದೆ, ಇಸ್ರೋ (ಭಾ
ತೀಯ ಬಾಹ್ಯಾಕಾಶ ಸಂಸ್ಥೆ) ಕ್ರಯೋಜನಿ
ಕಾಂಟ್ರಾಕ್ಟ್‌ನಲ್ಲಿ ಪ್ರಮಾದವೆಸಗಿದ್ದು ಹೇ
ಎಂದು ಜನ ಸರಕಾರದಿಂದ ತಿಳಿಯಬಯ
ಸುತ್ತಾರೆ. ಸ್ವದೇಶಿ ತಂತ್ರಜ್ಞಾನ ಕಾರ್ಯಕ್ರ
ದಲ್ಲಿ ಯಶಸ್ಸು ದೊರೆತರೂ ಇಂತಹ ಮ
ತ್ವದ ಕ್ಷೇತ್ರದತ್ತ ಗಮನ ಹರಿಸಲಿಲ್ಲವೇ
ಕೊನೆಯಗಳಿಗೆಯಲ್ಲಿ (ಡಿಸೆಂಬರ್ 199
ಯು.ಆರ್.ರಾವ್. ರಶ್ಯನರ ಬಳಿ ಓ
ಕೊಂಡು ಹೋದರೇಕೆ?

ಕಾಶ್ಮೀರದ ಮೇಲೆ ಭಾರತದ ಸಾ
ಭೌಮತೆಯನ್ನು ಬಿಟ್ಟುಕೊಡಲು ಕೂ
ದೇಶದ ಜನ ಸಿದ್ಧವಿಲ್ಲ ಎಂದೂ ರಾವ್ ಸ
ಕಾರಕ್ಕೆ ಸ್ಪಷ್ಟಪಡಿಸಬೇಕಾಗಿದೆ. ಅಷ್ಟೇ ಅ
ಈ ಸರಕಾರದ ವರ್ತನೆಗಳಿಂದ ಭಾರತ ವಿ
ಯದಲ್ಲಿ ಎಲ್ಲದರಲ್ಲೂ ಚೌಕಾಶಿ ಮಾಡ
ಹುದು, ಏಕೆಂದರೆ ಇಡೀ ದೇಶವೇ ಮಾ
ಟಕ್ಕಿದೆ ಎಂಬ ಭಾವನೆ ಅಮೇರಿಕಾದ ಆ
ಸರಿಗೆ ಬಂದಿದ್ದರೆ ಅವರಿಗೂ ಈ ಎಚ್ಚ
ಯನ್ನು ಸಾರಿ ಹೇಳಬೇಕಾಗಿದೆ.

ಐ.ಎನ್.ಎಸ್.



ಅಯೋಧ್ಯೆಯಲ್ಲಿ ನಡೆದ "ಮುಕ್ತನಾದ" ಕಾರ್ಯಕ್ರಮದ ಒಂದು ದೃಶ್ಯ

ಮತ್ತೆ ಬಿಜೆಪಿಯ 'ಯಾತ್ರೆ'ಗಳ ತಂತ್ರ

…ಪ್ಟೆಂಬರ್‌ನಲ್ಲಿ ನಾಲ್ಕು 'ಯಾತ್ರೆ'ಗಳನ್ನು ನಡೆ…ದಿರುವ ಬಿಜೆಪಿ ನಿರ್ಣಯ ಧರ್ಮವನ್ನು …ಯ ಉದ್ದೇಶಗಳಿಗೆ ಸದಾ ದುರುಪಯೋಗ …ಳ್ಳುತ್ತಿರುವ ತನ್ನ ವರ್ತನೆಯನ್ನು ಸಮರ್ಥಿ…ವ ಒಂದು ಒರಟು ಪ್ರಯತ್ನ ಎಂದು …ಎಂ) ಪೊಲಿಟ್‌ಬ್ಯೂರೋ ಟೀಕಿಸಿದೆ. ಡಿಸೆಂ… 1992 ರಂದು ಅಯೋಧ್ಯೆಯಲ್ಲಿ ಮಸೀದಿ …ಾಡಿ ದೇಶದಲ್ಲೆಲ್ಲಾ ಉಂಟುಮಾಡಿದ ಅನಾ… ನಂತರ ಕೋಮು ಹತ್ಯಾಕಾಂಡಕ್ಕೆ ಬಿಜೆ…ಹೊಣೆ. ಧರ್ಮವನ್ನು ಬಳಸುವ ಅದರ …ದ… ತಡೆಯುವ ಯಾವುದೇ ಕಾನೂನು …ವಿಚಾರದಿಂದಲೇ ಅದು ಹೌಹಾರಿದೆ ಎಂದು …ಭಿಪ್ರಾಯಪಟ್ಟಿದೆ.

…ಯುವ ನಾಲ್ಕು ರಾಜ್ಯಗಳ ವಿಧಾನ …ಚುನಾವಣೆಗಳ ಮೇಲೆ ಕಣ್ಣಿಟ್ಟೇ ಬಿಜೆಪಿ …ಾರ ತಂತ್ರಕ್ಕೆ ಕೈಹಾಕಿದೆಯೆಂಬುದು ಸ್ವಯಂ… ಅಕ್ಟೋಬರ್ 24 ರೊಳಗೆ ಅಯೋಧ್ಯೆಯ …ಗ್ರಸ್ತ ಜಮೀನನ್ನು ಸರಕಾರ ತನಗೆ ಒಪ್ಪಿಸ… ವಿ.ಹೆಚ್.ಪಿ.ಯ ಬೆದರಿಕೆಯ ಹಿನ್ನೆಲೆಯಲ್ಲಿ …ುವ ಈ ನಾಲ್ಕು "ಯಾತ್ರೆ"ಗಳು ದೇವಸ್ಥಾನದ… ಮೇಲೆ ಕೋಮುದ್ವೇಷವನ್ನು ಹೆಚ್ಚಿಸುವ …ರ ಹಾಕಿರುವ ಕ್ರಮ ಎಂದು ಪಿ.ಬಿ. ಟೀಕಿಸಿದೆ. ರಾಜಕೀಯದಲ್ಲಿ ಧರ್ಮದ ದುರುಪಯೋಗ ತಡೆಯಲು ಒಂದು ಪರಿಣಾಮಕಾರಿ ಕಾನೂನು ಏಕೆ ಬೇಕು ಎಂಬುದಕ್ಕೆ 'ಯಾತ್ರೆ'ಗಳೇ ಒಂದು ಉದಾಹರಣೆ ಎಂದು ಪೊಲಿಟ್‌ಬ್ಯೂರೋ ಹೇಳಿದೆ. ಬಿಜೆಪಿಯ ಈ ದಾರಿತಪ್ಪಿಸುವ ಆಟವನ್ನು ಒಗ್ಗಟ್ಟಿನಿಂದ ಬಯಲಿಗೆಳೆಯಬೇಕು, ಧರ್ಮವನ್ನು ಚುನಾವಣಾ ಉದ್ದೇಶಗಳಿಗೆ ಬಳಸುವುದನ್ನು ಇಷ್ಟೊಂದು ನಗ್ನವಾಗಿ ಸಮರ್ಥಿಸಿಕೊಳ್ಳುವುದನ್ನು ಬಯಲಿಗೆಳೆಯಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಲ್ಲಾ ಜಾತ್ಯಾತೀತ ಶಕ್ತಿಗಳಿಗೆ ಕರೆ ನೀಡಿದೆ.

ವಿಚಾರ ವಿನಿಮಯದಲ್ಲಿ ವಿಳಂಬ ಬೇಡ

ಸಂಸತ್ತಿನ ಮುಂದಿರುವ ಎರಡು ಮಸೂದೆಗಳ ಬಗ್ಗೆ ತಕ್ಷಣ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಬೇಕೆಂದು ಪಿ.ಬಿ. ಭಾರತ ಸರಕಾರವನ್ನು ಆಗ್ರಹಪಡಿಸಿದೆ. ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವ ಈ ಎರಡು ಮಸೂದೆಗಳ ಬಗ್ಗೆ ಒಂದು ಸರ್ವಸಮ್ಮತ ಒಪ್ಪಿಗೆಗೆ ಬಂದು ಒಂದು ವಿಶೇಷ ಸಂಸತ್ ಅಧಿವೇಶನದಲ್ಲಿ ಇವನ್ನು ಅಂಗೀಕರಿಸುವಂತಾಗಲು ಇಂತಹ ಮಾತುಕತೆಗಳು ಅತ್ಯಗತ್ಯ ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಇತಿಹಾಸವನ್ನೇ ಸೆನ್ಸಾರ್ ಮಾಡ ಹೊರಟ ದಿಲ್ಲಿ ಆಡಳಿತ!

…ಮೇಲೆ ಹೇಳಿದ ಆಕ್ಷೇಪಣೀಯ ವಸ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲಾಗಿವೆ" ಎಂದು ದೆಹಲಿಯ …ಜ್ಯ…ರು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ 'ಸೆಕ್ಷನ್ 95 ಹಾಗೂ ಭಾರತೀಯ ದಂಡ ಸಂಹಿತೆ …ಸಿ.) ಯ ಸೆಕ್ಷನ್ 1531,ಎ 295 ಎ' ಪ್ರಕಾರ ಕೇಸುಗಳನ್ನು ಹಾಕಿ ಹೊರಡಿಸಿದ ಆಜ್ಞೆಯ ಒಂದು …ಪ್ರಾಚೀನ ಪಾಲೀ ಭಾಷೆಯ 'ದಶರಥ ಜಾತಕ' ಗ್ರಂಥವನ್ನು ಸರಕಾರ ಮುಟ್ಟುಗೋಲು ಹಾಕಿಕೊಂಡಿದೆ! …ಳ ಕ್ರಮದ ಮೂಲಕ ದಿಲ್ಲಿ ಆಡಳಿತ ಚರಿತ್ರೆಯನ್ನೇ ಸೆನ್ಸಾರ್‌ಮಾಡಿದೆ ಎಂದು ದಿಲ್ಲಿ ಉಪರಾಜ್ಯಪಾಲರ …ಜ್ಞೆಯನ್ನು ಬಲವಾಗಿ ಖಂಡಿಸುತ್ತಾ ಸಿಪಿಐ(ಎಂ) ಹಾಗೂ ಸಿಪಿಐನ ದಿಲ್ಲಿ ರಾಜ್ಯ ಸಮಿತಿ ಕಾರ್ಯದರ್ಶಿ …ಜೋಗೇಂದ್ರ ಶರ್ಮಾ ಹಾಗೂ ಎಂ.ಎಂ. ಗೋಪಿ ನೀಡಿರುವ ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. …ಂಘ ಕೂಟ ಪ್ರಕಟಿಸಿದ ಅತ್ಯಂತ ಉದ್ರೇಕಕಾರಿ ಕೋಮುವಾದಿ ಕರಪತ್ರಗಳನ್ನು ಪ್ರಕಾಶಕರ ಬಗ್ಗೆ …ಪುರಾವೆ ಒದಗಿವೆ. ಹಲವು ಬಾರಿ ಆಗ್ರಹ ಪಡಿಸಿದರೂ ಇದುವರೆಗೂ ಒಂದು ಒಂದು ಕೇಸು ಹಾಕದ …ವೇ ಈ ಕ್ರಮ ಕೈಗೊಂಡಿರುವುದು ಆಘಾತಕಾರಿ ಹಾಗೂ ನಾಚಿಕೆಗೇಡಿನ ಸಂಗತಿ ಎಂದು ಅವರು …ರೆ.

…ದು ಸಂಘಕೂಟದೆದುರು ಸರಕಾರ ಹಲ್ಲುಗಿಂಜಿಕೊಂಡು ತಲೆಬಾಗಿಸಿರುವ ಘಟನೆ ಎಂದಿರುವ… ತಕ್ಷಣ ಸಹಮತ್ ಮೇಲೆ ಹಾಕಿರುವ ಕೇಸುಗಳನ್ನು ತಕ್ಷಣ ವಾಪಸು ಪಡೆಯಬೇಕೆಂದು ಒತ್ತಾ…ರೆ.

…ಂಬುದೇ ಎಲ್ಲಾ ಎಡ ಮತ್ತು ಜಾತ್ಯಾತೀತ …ಮುಂದಿರುವ ಪ್ರಶ್ನೆ, ಇದನ್ನು ನಾವು ಗಮ…ಕೊಳ್ಳಬೇಕು. 'ಸಹಮತ್'ನಂತಹ ಸಾಂಸ್ಕ…ರಂಗದಲ್ಲಿ ಕೆಲಸಮಾಡುತ್ತಿರುವವರು ನಮ್ಮ …ಈಗಿನ ಪ್ರಜ್ಞಾ ಮಟ್ಟವನ್ನು ಗಮನದಲ್ಲಿಟ್ಟು…ಕು.

ಹಲ್ಲೆಗೆ ಪ್ರತಿಸವಾಲು ಹಾಕಲೇಬೇಕು

…ಪಿಯ ಈ ಅಪಪ್ರಚಾರದೆದುರು ಕಾಂಗ್ರೆಸ್ …ರಕಾರ ಕೈಯೆತ್ತಿ ಶರಣಾಗಿರುವುದು …ಜೆಪಿ ನಿಲುವಿಗೆ ಅನುಗುಣವಾಗಿಯೇ ಇದೆ. …ಧ್ವಂಸವಾಗುತ್ತಿರುವುದನ್ನು ನಾಚಿಕೆಯಿಲ್ಲದೆ …ನೋಡುತ್ತಿದ್ದ ಫೈಜಾಬಾದ್ ಜಿಲ್ಲೆಯ ಅದೇ ಆಡಳಿತ ಈಗ ಸಹಮತ್ ಜನಗಳ ಧಾರ್ಮಿಕ ಭಾವನೆಗಳಿಗೆ ಈ ಪ್ರದರ್ಶನದಿಂದ ಧಕ್ಕೆ ಯುಂಟಾಗಿದೆ ಯೆಂದುಸಹಮತ್ ಮೇಲೆ ಕೇಸ್ ಹಾಕಿದೆ. ದಿಲ್ಲಿ ಆಡಳಿತ ಕ್ರಿಮಿನಲ್ ಪ್ರೊಸೀಜರ್ ಕೋಡ್ ಬಳಸಿ ಈ ಫಲಕವನ್ನು ಮುಟ್ಟುಗೋಲು ಹಾಕಿಕೊಂಡಿದೆ. ಕೋಮುವಾದೀ ತತ್ವಗಳನ್ನು ಬಯಲಿಗೆಳೆಯುವವರೆಲ್ಲಾ ಕಾಂಗ್ರೆಸ್ ಸರಕಾರದ ವಕ್ರ ತರ್ಕದ ಪ್ರಕಾರ ಕೋಮುವಾದಕ್ಕೆ ಕುಮ್ಮಕ್ಕು ನೀಡುವವರು! ಇಂತಹ ಹಲ್ಲೆಗೆ ಪ್ರತಿಸವಾಲು ಹಾಕಲೇಬೇಕು. ಸಹಮತ್ ಮೇಲಿನ ಈ ಹಲ್ಲೆಯನ್ನು ಎಲ್ಲಾ ಜಾತ್ಯತೀತ ಪ್ರಜಾಪ್ರಭುತ್ವ ಶಕ್ತಿಗಳು ಖಂಡಿಸಬೇಕು. ಕೇಸುಗಳನ್ನು ಜಾತಕ ಕಥೆಯ ಫಲಕವನ್ನು ಕಿತ್ತುಕೊಂಡಿರುವ ಆಜ್ಞೆಯನ್ನು ರದ್ದುಪಡಿಸಬೇಕೆಂದು ಒತ್ತಾಯಿಸಬೇಕು.

ಇನ್ನು ಹಡಗು ಮುಳುಗಿಸಲು ಖಾಸಗಿಯವರು

ಸರ್ಕಾರ ಬಂದರುಗಳನ್ನೆಲ್ಲಾ ಖಾಸಗಿಯವರ ವಹಿವಾಟಿಗೆ ಬಿಟ್ಟುಕೊಡಲಿದೆ. ಪ್ರಮುಖ ಬಂದರುಗಳನ್ನೆಲ್ಲಾ ಖಾಸಗಿಯವರಿಗೆ ಕೊಡುತ್ತೇವೆ ಎಂದು ಸರ್ಕಾರ ಹೇಳಿದೆ. ಈ ಖಾಸಗಿಯವರು ಅಂತರಾಷ್ಟ್ರೀಯ ದರ್ಜೆಯಲ್ಲಿ ಬಂದರುಗಳನ್ನು ನಿರ್ವಹಿಸುತ್ತಾರಂತೆ.

ವಿಮಾನ ನಿಲ್ದಾಣ, ಬಂದರುಗಳು ವ್ಯಾಪಾರದ ದೃಷ್ಟಿಯಿಂದ ಅತ್ಯಂತ ಮುಖ್ಯ ಸ್ಥಳಗಳು. ದೇಶದ ವ್ಯಾಪಾರವನ್ನು ನಿಯಂತ್ರಣದಲ್ಲಿಡಲು, ಸುರಕ್ಷಿತತೆ ಕಾಪಾಡುವಲ್ಲೂ ಇವುಗಳ ಮಹತ್ವ ಹೆಚ್ಚಿನದು. ಇತ್ತೀಚೆಗೆ ಬಾಂಬೆಯಲ್ಲಾದ ಬಾಂಬ್ ಸ್ಫೋಟಗಳೂ ಖಾಸಗೀಯಲ್ಲಿ ಈ ಬಂದರುಗಳನ್ನು ವಹಿಸುವ ಅಪಾಯವನ್ನು ಎತ್ತಿ ತೋರಿಸಿವೆ. ಆದರೆ ಈಗ ಖಾಸಗೀಕರಣದ ಗಾಳಿಯಲ್ಲಿ ಇವುಗಳಿಗೆಲ್ಲ ಬೆಲೆಯಿಲ್ಲ. ಆಮದಿನ ಮೇಲೆ ನಿರ್ಬಂದವಿಲ್ಲ. ಯಾವುದೇ ವ್ಯಾಪಾರದ ಮೇಲೆ ನಿರ್ಬಂಧವಿಲ್ಲ. ಬಡತನವನ್ನು ಹೊರೆ ಹೊರೆಯಾಗಿ ಆಮದು ಮಾಡಬಹುದು. ಇಲ್ಲ ನಮ್ಮ ಶ್ರೀಮಂತಿಕೆಯನ್ನು ಹೊರೆ ಹೊರೆಯಾಗಿ ರಫ್ತು ಮಾಡಬಹುದು. ಕೇಳುವವರಿಲ್ಲ.

ದೇಶವೆಂಬ ಹಡಗನ್ನೇ ಖಾಸಗಿಯವರಿಗೆ ಮುಳುಗಿಸಲು ಬಿಟ್ಟುಕೊಡುತ್ತಿದೆ ಕೇಂದ್ರ ಸರ್ಕಾರ!!



ಬ್ಯಾಂಕುಗಳ ಖಾಸಗೀಕರಣ

ಬ್ಯಾಂಕುಗಳ ಖಾಸಗೀಕರಣದ ಕ್ರಮ ಆಗಲೇ ಬಂದಿದೆ. ರಾಷ್ಟ್ರೀಕೃತ ಬ್ಯಾಂಕುಗಳು ಶೇರು ಮಾರುಕಟ್ಟೆಯಿಂದ ಬಂಡವಾಳ ಸ್ವೀಕರಿಸಬಹುದೆಂದು ಕೇಂದ್ರ ಮಂತ್ರಿ ಮಂಡಳ ನಿರ್ಧರಿಸಿದೆ.

ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳ ಒತ್ತಡದ ಪಾತ್ರ ಎದ್ದು ಕಾಣುತ್ತಿರುವ ಈ ಕ್ರಮ ನರಸಿಂಹಮ್ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನದ ಕ್ರಮ. ಈ ಕ್ರಮಗಳನ್ನು ಕೈಗೊಳ್ಳದೇ ಇದ್ದಲ್ಲಿ ಸಾಲ ನೀಡುವುದಿಲ್ಲವೆಂದು ಬ್ಯಾಂಕ್, ಫಂಡ್‌ಗಳು ಬೆದರಿಕೆ ಹಾಕಿದ್ದವು. ಸರ್ಕಾರ ಈ ಒತ್ತಡಕ್ಕೆ ಮಣಿದಿರುವುದು ಸ್ಪಷ್ಟ.

ಈ ಕ್ರಮದ ಒಂದೆಯೇ ನ್ಯೂ ಬ್ಯಾಂಕ್ ಆಫ್ ಇಂಡಿಯಾವನ್ನು ಪಂಜಾಬ್ ನ್ಯಾಶನಲ್ ಬ್ಯಾಂಕ್‌ನೊಡನೆ ವಿಲೀನಗೊಳಿಸುವ ಕ್ರಮ ಬಂದಿದೆ. ಕೇಂದ್ರ ಸರ್ಕಾರದ ಸ್ವಾಮ್ಯದಲ್ಲೇ ಇದ್ದ ಈ ಬ್ಯಾಂಕ್ ಕಳೆದ ಕೆಲವು ವರ್ಷಗಳಿಂದ ನಷ್ಟ ಮಾಡುತ್ತ ಬಂದಿದ್ದು ಯಾಕೆ? ಅದಕ್ಕೆಯಾರು ಜವಾಬ್ದಾರಿ? ಈ ಪ್ರಶ್ನೆಗಳನ್ನು ಈಗ ಕೇಳುವುದರಲ್ಲಿ ಅರ್ಥವಿಲ್ಲ. ಆದರೆ ಇನ್ನೂ ಹಲವು ಬ್ಯಾಂಕುಗಳು ನ್ಯೂ ಬ್ಯಾಂಕ್ ಆಫ್ ಇಂಡಿಯಾದ ದಾರಿ ಹಿಡಿಯಲಿವೆ. ಸರ್ಕಾರಕ್ಕೆ ನೆಪಗಳಷ್ಟೇ ಸಾಕು. ತನ್ನ ವೈಫಲ್ಯವನ್ನು ಬೇರೆಯವರ ಮೇಲೆ ಆರೋಪಿಸಿ ಬ್ಯಾಂಕ್ -ಫಂಡ್ ಧಣಿಗಳ ಷರತ್ತುಗಳನ್ನು ಶಿರಸಾವಹಿಸಿ ನಡೆದುಕೊಳ್ಳುವುದೇ ಸರ್ಕಾರದ ಉದ್ದೇಶ.

ಹಣಕಾಸು ಖೋತಾ: ಸರ್ಕಾರದ ಲಾಗ

ಸರ್ಕಾರ ತಿಪ್ಪರಲಾಗ ಹಾಕಿದರೂ ಹಣಕಾಸು ಖೋತಾ ಹೆಚ್ಚಾಗುತ್ತಲೇ ನಡೆದಿದೆ. ಸಹಾಯಧನಗಳ ಕಡಿತ, ಯೋಜನೇತರ ವೆಚ್ಚಗಳ ಕಡಿತ ಇತ್ಯಾದಿಗಳನ್ನೆಲ್ಲಾ ಜಾರಿಗೆ ತಂದರೂ ಇದು ಹಿಡಿತಕ್ಕೆ ಬಂದಿಲ್ಲ.

ಈಗ ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರ ಸರ್ಕಾರಕ್ಕೆ ತಾನು ನೀಡುವ ಸಾಲದ ಮೇಲೆ ಮಿತಿ ಹೇರುವ ಪ್ರಸ್ತಾಪ ಮಾಡಿದೆ.

ಈ ಪ್ರಸ್ತಾಪ ಕಾರ್ಯರೂಪಕ್ಕೆ ಬಂದರೆ ಸರ್ಕಾರ ಈ ತನ್ನ ವೆಚ್ಚಗಳ ನಿರ್ವಹಣೆಗೆ ಏನು ಮಾಡುವುದು? ಈ ಬಿಕ್ಕಟ್ಟು ಪರಿಹರಿಸಲು ಐ.ಎಂ.ಎಫ್. ವಿಶ್ವಬ್ಯಾಂಕುಗಳು ಮುಂದಾದಾವೆ?

ಕಾದು ನೋಡಬೇಕು.

ಸುಧಾರಣೆ: ಜರ್ಮನ್ನರಿಗೆ ಮೃಷ್ಟಾನ್ನದ ವಿಶ್ವಾಸ

'ಭಾರತದಲ್ಲಿ ಈಗ ನಡೆಯುತ್ತಿರುವ ಸುಧಾರಣೆಗಳು ಹಿಂದೋಡುವವಲ್ಲ, ಅವು ಇನ್ನು ನಿರಂತರವಾಗಿ ಮುಂದುವರಿಯುತ್ತವೆ. ಈ ವಿಶ್ವಾಸ ಜರ್ಮನ್ ಬಂಡವಾಳಿಗರದು. ಭಾರತದಲ್ಲಿ ಜರ್ಮನಿಯ ರಾಯಭಾರಿಯಾಗಿರುವ ಫ್ರಾಂಕ್ ಎಲ್ಬ್ ಈ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅಂದರೆ ಇನ್ನು ಭಾರತವನ್ನು ಕೊಳ್ಳೆ ಹೊಡೆಯಲು ಅಡೆತಡೆಗಳಿಲ್ಲ, ನಾವು ನಿರಂತರವಾಗಿ ಆ ಕೆಲಸ ಮಾಡಲು ಈಗ ಭೂಮಿಕೆ ಸಿದ್ಧವಾಗಿದೆ ಎಂಬುದೇ ಇದರ ಅರ್ಥ'.

ಒಂದು ಸಮೀಕ್ಷೆಯ ಪ್ರಕಾರ ಅಮೇರಿಕಾದವರಿಗಿಂತ ಹೆಚ್ಚು ಜರ್ಮನ್ನರು ಭಾರತದಲ್ಲಿ ಹಣ ಹೂಡಲು ಮುಂದಾಗುತ್ತಿದ್ದಾರಂತೆ.

ಅಂದರೆ ಆರ್ಥಿಕ ಸುಧಾರಣೆಯ ಹೆಚ್ಚಿನ ಲಾಭ ತಮಗೆ ಎಂಬುದೇ ಜರ್ಮನ್ನರ ನಿಲುವು ಅಲ್ಲವೇ?

ಬದಲಾದ ಪರಿಸ್ಥಿತಿಯಲ್ಲಿ ಕಿಸಾನ್ ಚಳುವಳಿಯ ಕಣ್ನೋಟ



ಇ.ಎಂ.ಎಸ್.

ಕೇರಳ ಕರ್ಷಕ ಸಂಘಂ ರೈತ ಕಾರ್ಯಕರ್ತರಿಗೆ ನಡೆಸಿದ ಕ್ಯಾಂಪ್‌ನಲ್ಲಿ ಇ.ಎಂ.ಎಸ್. ರವರ ಉದ್ಘಟನಾ ಭಾಷಣವನ್ನು ಆಧರಿಸಿದ ಲೇಖನ-

ಸ್ವಾತಂತ್ರ್ಯ ಚಳುವಳಿ ಯಶ್ವಿಯಾಗುವಂತೆ ಪ್ರಾರಂಭಿಕ ವರ್ಷಗಳಲ್ಲಿ ಕಿಸಾನ್ ಸಭಾ ದುಡಿಯಿತು. ಗ್ರಾಮೀಣ ಬಡವರನ್ನು ರಾಜಕೀಯ ಮತ್ತು ವರ್ಗಪ್ರಜ್ಞೆ ಉಳ್ಳವರನ್ನಾಗಿ ಮಾಡಲು ಅದು ಶ್ರಮಿಸಿತು. ಕಿಸಾನ್ ಸಭಾ ಮತ್ತು ಕೇರಳದ ಕರ್ಷಕ ಸಂಘಂ ಪಾಳೇಗಾರಿ ವಿರೋಧಿ ಸಾಮ್ರಾಜ್ಯಶಾಹಿ ವಿರೋಧಿ, ಹೋರಾಟಗಳನ್ನು ಕೈಗೆತ್ತಿಕೊಂಡು "ಉಳುವವನಿಗೆ ಹೊಲ" ಎಂಬ ಘೋಷಣೆ ಕೂಗಿದವು ಇವು ಸ್ವಾತಂತ್ರ್ಯ ಹೋರಾಟದ ಭಾಗವಾದವು.

ಈಗ ಪರಿಸ್ಥಿತಿ ಬದಲಾಗಿದೆ. ಜಾತಿವಾದಿ, ಪಾಳೇಗಾರಿಗಳು ಈಗ ಶಕ್ತರಲ್ಲ. ಬ್ರಿಟಿಷರ ಆಡಳಿತವಿಲ್ಲ ಇಂದು. ಆದರೆ ಬ್ರಿಟನ್ ಹೋದರೂ ಜಾಗತಿಕ ಸಾಮ್ರಾಜ್ಯಶಾಹಿ ಬ್ರಿಟನ್ನಿನ ಸಹಿತ ಮತ್ತೆ ಬಂದಿದೆ. ಈ ಸಾಮ್ರಾಜ್ಯಶಾಹಿ ದೇಶಗಳಿಗೆ ಅಮೇರಿಕಾ ನಾಯಕ. ದೇಶವನ್ನು ನಮ್ಮ ಸರ್ಕಾರ ಯಾ ಸಂಸತ್ತು ಆಳುತ್ತಿಲ್ಲ. ಬದಲಿಗೆ ಐ.ಎಂ.ಎಫ್. -ವಿಶ್ವಬ್ಯಾಂಕ್ ಮತ್ತು ಗ್ಯಾಟ್‌ಗಳು ಆಳುತ್ತಿವೆ. ಅದರ ನಿರ್ದೇಶನದಂತೆ ನಮ್ಮ ಆರ್ಥಿಕ ನೀತಿಗಳು ರೂಪಿತವಾಗುತ್ತಿವೆ. ಇದರ ಪರಿಣಾಮವಾಗಿ ದೇಶ ತನ್ನ ಸಾರ್ವಭೌಮತ್ವವನ್ನೇ ಕಳೆದುಕೊಳ್ಳುತ್ತಲಿದೆ. ಇಂದು ಕಿಸಾನ್ ಸಭಾಕ್ಕೆ ಪ್ರಾರಂಭದಲ್ಲಿ ಇದ್ದ ಕಣ್ಣೋಟದ ಅವಶ್ಯಕತೆಯಿದೆ. ಅಂದು ಬ್ರಿಟನ್ ಒಂದೇ ನಮ್ಮ ಶತ್ರುವಾಗಿತ್ತು. ಇಂದು ಜಾಗತಿಕ ಸಾಮ್ರಾಜ್ಯಶಾಹಿ ಪರೋಕ್ಷ ಕಾರ್ಯಾಚರಣೆ ನಡೆಸುತ್ತಿದೆ.

ಇಡೀ ಕರ್ಷಕ ವಲಯವೇ ಬಂಡವಾಳಶಾಹಿಯ ಹಿಡಿತದಲ್ಲಿದೆ. ಹಳೇ ಪಾಳೇಗಾರಿ ಪದ್ಧತಿ ಬದಲಿಗೆ ಹೊಸ ಪಾಳೇಗಾರಿ ಪದ್ಧತಿಯಿದೆ. ಕೃಷಿ ಆರ್ಥಿಕ ಬಂಡವಾಳದ ಹಿಡಿತದಲ್ಲಿದೆ. ಕೃಷಿ ಉತ್ಪನ್ನಗಳ ಬೆಲೆ ಕಡಿಮೆಯಾಗಿದೆ. ಅದೇ ಸಮಯದಲ್ಲಿ ಕೃಷಿ ಲಾಗುವಾಡಿನ ಬೆಲೆ ಏರುತ್ತಲೇ ಇದೆ. ಜೊತೆಗೆ ಅವಶ್ಯಕ ಸಾಮಗ್ರಿಗಳ ಬೆಲೆಯೂ ಸಹ. ಇವೆಲ್ಲವೂ ಬಂಡವಾಳಶಾಹಿಯ ಸೃಷ್ಟಿ.

ಬಂಡವಾಳಶಾಹಿಯಡಿ ಜಮೀನುದಾರನಿರುವುದಿಲ್ಲ ಎಂಬುದು ತಪ್ಪು. ಭೂಮಾಲಿಕನಿಗೆ ಈಗ ಭೂಮಿಯ ಬದಲು ಬಂಡವಾಳವಿದೆ. ಕೃಷಿ ಬಂಡವಾಳಗನಿಗೆ ಹಳೆಯ ಜಮೀನುನಿನಗೇಣಿಯೂ ಒಳಗೊಂಡ ಲಾಭ ದೊರೆಯುತ್ತದೆ. ಕೃಷಿ ಲಾಭದಾಯಕ ಉದ್ಯೋಗವಲ್ಲ. ಇದಕ್ಕೆ ಕಾರಣ ಬಂಡವಾಳಶಾಹಿ ಕೃಷಿ ಕ್ಷೇತ್ರದ ಬಿಕ್ಕಟ್ಟು ಉಳಿದ ಜನ ವರ್ಗಗಳ ಮೇಲೂ ಪ್ರಭಾವ ಬೀರುತ್ತದೆ. ಆದ್ದರಿಂದ ಕಿಸಾನ್ ಸಭಾ ಪ್ರತ್ಯೇಕವಾಗಿ ಕೆಲಸ ನಿರ್ವಹಿಸಲು ಸಾಧ್ಯವಿಲ್ಲ. ಕೃಷಿ ಕೂಲಿಕಾರರು, ಕಾರ್ಮಿಕರು, ನೌಕರರು ಇವರೆಲ್ಲರೊಡನೆ ಒಡಗೂಡಿ ಹೋರಾಟ ನಡೆಸಬೇಕಾಗುತ್ತದೆ. ತಮ್ಮೆಲ್ಲಾ ಹೋರಾಟಗಳನ್ನು ಇತರೆ ಜನವರ್ಗಗಳೊಡಗೂಡಿ ಕಿಸಾನ್ ಸಭಾ ನಡೆಸಬೇಕಾಗುತ್ತದೆ.

ಇಂದಿನ ಪರಿಸ್ಥಿತಿಯಲ್ಲಿ ಸಮಾಜದ ಕೆಳಸ್ತರದಲ್ಲಿ ಇರುವ ಹರಿಜನ ಗಿರಿಜನರು ಚಿಂತಾಜನಕ ಸ್ಥಿತಿಗೆ ತಳಲ್ಪಟ್ಟಿದ್ದಾರೆ. ಅವರ ಮೇಲಿನ ದಾಳಿ ದೌರ್ಜನ್ಯ ಜಮೀನುದಾರಿ ಪದ್ಧತಿಯ ಪಳಿಯುಳಿಕೆ ಇವುಗಳನ್ನು ಪಾಳೇಗಾರಿ ವಿರೋಧಿ ಹೋರಾಟಗಳಿಂದ ಕಿತ್ತುಹಾಕಬೇಕು. ಈ ಹೋರಾಟಗಳೂ ಪ್ರತ್ಯೇಕವಾಗಿ ನಡೆಸುವಂತಹದ್ದಲ್ಲ. ಎಲ್ಲ ಶೋಷಿತ ಜನವರ್ಗಗಳ ಜೊತೆಗೂಡಿ ವಿಶಾಲ ರಂಗವನ್ನು ಸ್ಥಾಪಿಸಿ ಹೋರಾಡುವ ಅವಶ್ಯಕತೆ ಇದೆ.

ಕೃಪೆ : ಐ.ಎನ್.ಎನ್

ಸಂಘಕೂಟದೆದುರು ಹಲ್ಲುಗಿಂಜುವ ಕೇಂದ್ರ ಸರಕಾರ

ಯುರೋಪಿನಲ್ಲಿ ವೈಜ್ಞಾನಿಕ ನಿಲುವು ಧಾರ್ಮಿಕ ನಿಲುವಿಗೆ ವಿರುದ್ಧವಾದುದಕ್ಕೆ ಗೆಲಿಲಿಯೋವನ್ನು ಶಿಕ್ಷಿಸಿದ ಕ್ಯಾಥೋಲಿಕ್ ಧರ್ಮ ಗುರು ಪೋಪ್ ಅದೇ ಗೆಲಿಲಿಯೋಗೆ ಈಗ ಗೌರವಸ್ಥಾನ ಕೊಡಬೇಕಾಗಿ ಬಂದಿರುವ ಇಂದಿನ ದಿನಗಳಲ್ಲಿ ಇಲ್ಲಿ ಭಾರತದಲ್ಲಿ ನಮ್ಮ ವೈವಿಧ್ಯಮಯ ಸಂಸ್ಕೃತಿಯ ಬಗ್ಗೆ ಹೆಮ್ಮೆ ಪಡುವ ನಾವು ಆ ಕಾಲದ ಪೋಪ್‌ಗಳಂತೆ ಧಾರ್ಮಿಕದಂಡನೆ ನೀಡುವ ಕೆಲಸ ಮಾಡುತ್ತಿದ್ದೇವೆ ಎಂದು 'ಸಹಮತ್' ಪ್ರದರ್ಶನದ ಬಗ್ಗೆ ಖೇದ ವ್ಯಕ್ತಪಡಿಸುತ್ತ ದೇಶದ 87 ಮಂದಿ ಪ್ರಖ್ಯಾತ ಬುದ್ಧಿಜೀವಿಗಳು 'ಸಹಮತ್' ಪ್ರದರ್ಶನದ ದಶರಥ ಜಾತಕ ಕುರಿತಾದ ಫಲಕವನ್ನು ಮುಟ್ಟುಗೋಲು ಹಾಕಿಕೊಂಡಿರುವ ದಿಲ್ಲಿ ಆಡಳಿತದ ಕ್ರಮ ಸ್ವೇಚ್ಛಾಚಾರದ ಕ್ರಮ ಎಂದು ಹೇಳಿದ್ದಾರೆ. ಕಾನೂನಿನ ಪ್ರಕಾರ ಅಗತ್ಯವಾದ ಕಾರಣಗಳನ್ನು, ನೋಟಿಫಿಕೇಶನ್ ನೀಡದೆ ಕೈಗೊಂಡಿರುವ ಈ ಕ್ರಮವನ್ನು ತಕ್ಷಣ ವಾಪಸು ಪಡೆಯಬೇಕೆಂದು ಅವರು ಆಗ್ರಹ ಪಡಿಸಿದ್ದಾರೆ.

ಪಿ.ಎಸ್. ಠಕ್ಕರ್, ಎನ್. ರಾಮ್, ಅರುಣ್ ಘೋಷ್, ಅಶೋಕ್ ಮಿತ್ರಾ, ಕರ್ನಾಟಕದವರಾದ ಗಿರೀಶ್ ಕಾರ್ನಾಡ್, ಯು.ಆರ್. ಅನಂತಮೂರ್ತಿ, ಕೆ. ಮರುಳಸಿದ್ದಪ್ಪ, ಸಿದ್ದಲಿಂಗಯ್ಯ, ರಾಮಚಂದ್ರ ಶರ್ಮ, ಜಿ.ಕೆ. ಗೋವಿಂದರಾವ್, ಕೀರ್ತಿನಾಥ ಕುರ್ತಕೋಟಿ, ಮುಂತಾದ ಸಾಹಿತಿಗಳು ಕಲಾವಿದರು, ಪತ್ರಕರ್ತರು, ಶಿಕ್ಷಣ ತಜ್ಞರು, ಇತಿಹಾಸಕಾರರು, ಆರ್ಥಿಕ ತಜ್ಞರು, ಪ್ರಾಧ್ಯಾಪಕರು ಇತ್ಯಾದಿ ದೇಶದ 87 ಬುದ್ಧಿಜೀವಿಗಳು ಈ ಮನವಿಗೆ ಸಹಿ ಹಾಕಿದ್ದಾರೆ.

ಪ. ಬಂಗಾಳದಲ್ಲಿ ಅತ್ಯಾಚಾರಿ ಪೋಲೀಸರಿಗೆ ಶಿಕ್ಷೆ

ಕಳೆದ ವರ್ಷ ಪಶ್ಚಿಮಬಂಗಾಳದಲ್ಲಿ ಅಲ್ಲೋಲಕಲ್ಲೋಲ ಎಬ್ಬಿಸಿ ಇಡೀ ದೇಶದ ಗಮನ ಸೆಳೆದ ಅತ್ಯಾಚಾರ ಪ್ರಕರಣವೊಂದರ ಆರೋಪಿಗಳಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿದೆ. ಕಾನೂನು ರಕ್ಷಕರಾದ ಪೋಲೀಸರೇ ಶಿಕ್ಷೆ ಎದುರಿಸಲಿರುವ ಆರೋಪಿಗಳು.

1992 ಸೆಪ್ಟೆಂಬರ್ 23 ರಂದು ಕಲ್ಕತ್ತದ ಫುಲ್‌ಬಗಾನ್ ಪೋಲೀಸ್ ಠಾಣೆಯಲ್ಲಿ ಇಡೀ ನಾಗರಿಕ ಸಮಾಜ ನಾಚಿ ತಲೆ ತಗ್ಗಿಸಬೇಕಾದ ಕುಕೃತ್ಯವೊಂದು ನಡೆಯಿತು. ಆಕಾಶವನ್ನೇ ಸೂರನ್ನಾಗಿ ಮಾಡಿಕೊಂಡ ಮಹಿಳೆಯೊಬ್ಬಳನ್ನು ಕೆಲವು ಪೋಲೀಸರು ಬಲಾತ್ಕಾರವಾಗಿ ಎಳೆದುಕೊಂಡು ಬಂದ ಮೇಲೆ ಒಬ್ಬ ಆಕೆಯ ಮೇಲೆ ಅತ್ಯಾಚಾರ ನಡೆಸಿದ್ದ.

ಅಪಹರಣ ಹಾಗೂ ಅತ್ಯಾಚಾರ ಪ್ರಕರಣದಲ್ಲಿ ಒಟ್ಟು ಆರು ಮಂದಿ ಪೋಲೀಸರು ಒಳಗೊಂಡಿದ್ದರು ಹಾಗೂ ಶಾಮೀಲಾಗಿದ್ದರು. ಆದರೆ ಅಪರಾಧದಲ್ಲಿ ನೇರವಾಗಿ ಪಾಲ್ಗೊಂಡ ಮೂವರಿಗೆ ಮಾತ್ರ ಶಿಕ್ಷೆ ವಿಧಿಸಿರುವ ನ್ಯಾಯಾಧೀಶರು ಇತರರನ್ನು ಮುಕ್ತಗೊಳಿಸಿದ್ದಾರೆ. ಶಿಕ್ಷೆಗೆ ಒಳಗಾಗಿರುವ ಪೋಲೀಸರ ಹೆಸರುಗಳು ಓೕಗಿವೆ. ನೀಲ ಕಮಲ ಘೋಷ್, ಭೋಲಾನಾಥ ಓಝಾ ಮತ್ತು ಸನಾತನ್ ಮುರ್ಮು

ಈ ಪ್ರಕರಣದ ಬಗ್ಗೆ ಆಗ 'ಐಕ್ಯರಂಗ'ವೂ ವಿವರವಾದ ವರದಿಯನ್ನು ಪ್ರಕಟಿಸಿತ್ತು.

ಅತ್ಯಾಚಾರಕ್ಕೆ ಒಳಗಾದ ಮಹಿಳೆ, ಆಕೆಯ ತಂಗಿ ಆಯೇಷಾ ಮತ್ತು ಸಂಬಂಧಿ ಶೇಖ್ ಕಾಸಿ ಸೇರಿದಂತೆ 42 ಸಾಕ್ಷಿಗಳನ್ನು ನ್ಯಾಯಾಲಯ ಪರಿಶೀಲಿಸಿತ್ತು.

ನೆಹರ್ ಬಾನೋಳನ್ನು ಅಪಹರಿಸಿ ಅತ್ಯಾಚಾರ ಮಾಡಿದ ಪ್ರಮುಖ ಆರೋಪಿ ವಿಶೇಷ ಕಾನ್ಸ್‌ಟೇಬಲ್ ನೀಲ ಕಮಲ್ ಘೋಷ್‌ಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಇದಲ್ಲದೆ ಆರು ವರ್ಷಗಳ ಕಠಿಣ ಶಿಕ್ಷೆ ಹಾಗೂ 1000 ರೂ.ಗಳ ದಂಡವನ್ನು ವಿಧಿಸಲಾಗಿದೆ. ಈ ಎರಡೂ ಶಿಕ್ಷೆಯನ್ನು ಏಕಕಾಲದಲ್ಲಿ ಅನುಭವಿಸಬೇಕಾಗಿದೆ.

ನೆಹರ್ ಬಾನೋಳನ್ನು ಅಪಹರಿಸಿದ್ದಾಗಿ ಕಾನ್ಸ್‌ಟೇಬಲ್‌ಗಳಾದ ಓಝಾ ಮತ್ತು ಮುರ್ಮುಗೆ ತಲಾ ಆರು ವರ್ಷಗಳ ಕಠಿಣ ಶಿಕ್ಷೆ ಹಾಗೂ 1000 ರೂ. ದಂಡ ವಿಧಿಸಲಾಗಿದೆ.

ಭದ್ರತೆ ಹಾಗೂ ಸುರಕ್ಷತೆಯ ಸ್ಥಳ ಎಂದು ಪರಿಗಣಿಸಲಾಗಿರುವ ಪೋಲೀಸ್ ಠಾಣೆಯ ಒಳಗಡೆ ಕಾನ್ಸ್‌ಟೇಬಲ್‌ಗಳು ದುಷ್ಕೃತ್ಯ ಎಸಗಿದ್ದಾರೆ ಎಂದು ಐತಿಹಾಸಿಕವಾದ 54 ಪುಟಗಳ ತಮ್ಮ ತೀರ್ಪಿನಲ್ಲಿ ನ್ಯಾ ಸೇನ್‌ಗುಪ್ತಾ ಹೇಳಿದ್ದಾರೆ.

ಅತ್ಯಾಚಾರ ಆರೋಪಿಗಳಿಗೆ ಶಿಕ್ಷೆ ವಿಧಿಸುವ ನಿರ್ಧಾರವನ್ನು ಐದನೇ ಅಡಿಷನಲ್ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಮಾನಸ ಕುಮಾರ್ ಸೇನ್‌ಗುಪ್ತಾ ಸೆ. 3 ರಂದು ಪ್ರಕಟಿಸಿದರು. ಘಟನೆ ನಡೆದ ಕೇವಲ ಒಂದು ವರ್ಷದೊಳಗೆ ಅತ್ಯಾಚಾರ ಆರೋಪಿಗಳಿಗೆ ಶಿಕ್ಷೆ ವಿಧಿಸಿದ್ದು ಒಂದು ಮಟ್ಟಿಗೆ ದಾಖಲೆಯಾಗಿದೆ. ಶಿಕ್ಷೆಯ ವಿವರವನ್ನು 4 ರಂದು ಘೋಷಿಸಲಾಯಿತು.

ಸಾಮಾನ್ಯವಾಗಿ ಅತ್ಯಾಚಾರ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವುದು ಅಪರೂಪ, ಅಥವಾ ತುಂಬಾ ವಿಳಂಬ. ಅಂಥದ್ದರಲ್ಲಿ ಅಪರಾಧಿ ಸ್ಥಾನದಲ್ಲಿ ಪೋಲೀಸರು ನಿಂತಿದ್ದ ಈ ಪ್ರಕರಣದಲ್ಲಿ ಶೀಘ್ರ ನ್ಯಾಯ ದೊರಕಿರುವುದು ಒಂದು ಸಮಾಧಾನದ ಅಂಶವಾಗಿದೆ.

ಚುನಾವಣೆಯೂ ಪ್ರಧಾನಿಯ ಕೇರಳ ಪ್ರೇಮವೂ........

ಇತ್ತೀಚೆಗೆ ಪ್ರಧಾನಿ ಪಿ.ವಿ. ನರಸಿಂಹರಾವ್‌ಗೆ ಇದ್ದಕ್ಕಿದ್ದಂತೆ ಕೇರಳದ ಮೇಲೆ ಪ್ರೀತಿ ಉಕ್ಕಿ ಹರಿಯಿತು. ರಾಜ್ಯ ಕಾಂಗ್ರೆಸ್ ಸಂಸತ್ ಸದಸ್ಯರನ್ನು ಕರೆಸಿಕೊಂಡು ಸಮಾಲೋಚನೆ ನಡೆಸಿದರು. ರಾಜ್ಯದ ಉಷ್ಣ ವಿದ್ಯುತ್ ಸ್ಥಾವರ ಮತ್ತು ರೈಲ್ವೇ ಯೋಜನೆಗಳ ಬಗ್ಗೆ ಭರವಸೆಗಳ ಮಳೆಯನ್ನು ಸುರಿಸಿದರು!

ಪ್ರಧಾನಿ ಇವೆಲ್ಲ ಮಾಡಿದ್ದು ಒಟ್ಟಪಾಲಂ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಎಂದು ಸಿಪಿಐ(ಎಂ) ಕೇರಳ ರಾಜ್ಯ ಸಮಿತಿ ಕಾರ್ಯದರ್ಶಿ ಇ.ಕೆ. ನಯನಾರ್ ಹೇಳಿದ್ದಾರೆ.

ಮುಖ್ಯಮಂತ್ರಿ ಕೆ. ಕರುಣಾಕರನ್ ಕಳೆದ ಎರಡು ತಿಂಗಳ ಅವಧಿಯಲ್ಲಿ ದೆಹಲಿಗೆ ಎಂಟು ಬಾರಿ ಭೇಟಿ ನೀಡಿದ್ದರೂ ರಾಜ್ಯದ ಹಿತಾಸಕ್ತಿಗಳ ಬಗ್ಗೆ ಕೇಂದ್ರ ಸರಕಾರ ಕಾಳಜಿ ವಹಿಸುವಂತೆ ಮಾಡಲು ವಿಫಲರಾದರು ಎಂದೂ ನಯನಾರ್ ಟೀಕಿಸಿದ್ದಾರೆ.

ಗೇರು ಕಾರ್ಮಿಕರ ಹೋರಾಟಕ್ಕೆ ಜಯ

ತಮ್ಮ ಹಲವು ಹೇಳಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕೇರಳದ ಸರಕಾರೀ ನಿಗಮಗಳ ಗೇರು ಕಾರ್ಖಾನೆಗಳ ಕಾರ್ಮಿಕರು ಹಾಗೂ ಸಿಬ್ಬಂದಿಗಳು ದೀರ್ಘ ಸಮಯದಿಂದ ನಡೆಸುತ್ತಿದ್ದ ಹೋರಾಟಕ್ಕೆ ಜಯ ಸಿಕ್ಕಿದೆ. ಎಡಪ್ರಜಾಸತ್ತಾತ್ಮಕ ರಂಗದ (ಎಲ್.ಡಿ.ಎಫ್.) ಶಾಸಕರು ಮತ್ತು ಇತರ ನಾಯಕರು ಕೊಲ್ಲಮ್‌ನಲ್ಲಿ ನಡೆಸುತ್ತಿದ್ದ ಅನಿರ್ದಿಷ್ಟಾವಧಿಯ ಉಪವಾಸ ಮುಷ್ಕರವನ್ನು ಇತ್ತೀಚೆಗೆ ವಾಪಸು ಪಡೆಯಲಾಯಿತು

ನಿಗಮದ ವ್ಯಾಪ್ತಿಗೆ ಬರುವ ಗೇರು ಕಾರ್ಖಾನೆಗಳ ಕಾರ್ಮಿಕರು ಹಾಗೂ ಸಿಬ್ಬಂದಿಗಳಿಗೆ ಬೋನಸ್ ಹಾಗೂ ಮುಂಗಡವನ್ನು ನೀಡಲು ಸರಕಾರ ಒಪ್ಪಿಕೊಂಡಿದೆ. ಸೆಪ್ಟೆಂಬರ್ ಏಳರಿಂದ ಫ್ಯಾಕ್ಟರಿಗಳನ್ನು ಪುನರಾರಂಭಿಸಲು ಒಪ್ಪಿದೆ. ಈ ಮಹತ್ವದ ಒಪ್ಪಂದದ ಹಿನ್ನೆಲೆಯಲ್ಲಿ ಹೋರಾಟವನ್ನು ರದ್ದುಪಡಿಸಲಾಗಿದೆ.

ಕಾಂಗ್ರೆ ಗೂಂಡಾಗಳ ದಾಳಿ

ಸಿಪಿಐ(ಎಂ) ಕಣ್ಣೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಅವರ ಮೇಲೆ ಕಾಂಗ್ರೆ ಗೂಂಡಾಗಳು ಆಗಸ್ಟ್ 26 ರಂದು ಆಕ್ರಮಣ ನಡೆಸಲು ಯತ್ನಿಸಿದರು. ಬಾಲಕೃಷ್ಣನ್ ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಗೂಂಡಾಗಳು ಧಾಳಿ ಮಾಡಿದರೂ ಅವರು ಗಾಯಗೊಳ್ಳದೆ ಪಾರಾದರು. ಆದರೆ ಕಾರು ಜಖಂಗೊಂಡಿದೆ.

ಕಣ್ಣೂರು ಜಿಲ್ಲೆಯಲ್ಲಿ ತಾಂಡವವಾಡುತ್ತಿದ್ದ ಗೂಂಡಾಗಿರಿಗೆ ಸ್ವಲ್ಪ ಸಮಯ ವಿಶ್ರಾಂತಿ ಸಿಕ್ಕಿ ಶಾಂತಿ ನೆಲೆಸಿತ್ತು ಮತ್ತೆ ಅದನ್ನು ಕದಡಲು ಕಾಂಗ್ರೆ ಪ್ರಯತ್ನಿಸುತ್ತಿರುವಂತೆ ಕಾಣುತ್ತಿದೆ.

ನಾಗಾ-ಕುಕಿ ದೌರ್ಜನ್ಯಗಳಿಗೆ ಕಳವಳ

ಸಿಪಿಐ(ಎಂ) ಮಣಿಪುರ ರಾಜ್ಯ ಸಮಿತಿ ನಿಯೋಗವೊಂದು ಇತ್ತೀಚೆಗೆ ರಾಜ್ಯಪಾಲರನ್ನು ಭೇಟಿ ಮಾಡಿ ಒಂದು ಮನವಿ ಪತ್ರವನ್ನು ಅರ್ಪಿಸಿತು. ರಾಜ್ಯದಲ್ಲಿನ ಪ್ರಸಕ್ತ ವಿದ್ಯಮಾನಗಳನ್ನು ಮನವಿಯಲ್ಲಿ ಪ್ರಸ್ತಾಪಿಸಲಾಗಿದೆ.

ಮೇ ತಿಂಗಳಲ್ಲಿ ಇಂಫಾಲ್ ಕಣಿವೆಯಲ್ಲಿ ನಡೆದ ಕೋಮುಗಲಭೆ, ರಾಜ್ಯದ ಗುಡ್ಡಗಾಡು ಜಿಲ್ಲೆಗಳಲ್ಲಿ ನಾಗಾ ಮತ್ತು ಕುಕಿಗಳು ನಡೆಸುತ್ತಿರುವ ಘೋರ ಜನಾಂಗೀಯ ಹಿಂಸಾಚಾರಗಳು ಮತ್ತು ರಾಜ್ಯದಲ್ಲಿನ ಬಂಡುಕೋರ ಸಮಸ್ಯೆಯನ್ನು ನಿರ್ವಹಿಸುತ್ತಿರುವ ರಾಜ್ಯ ಸರ್ಕಾರ ಧೋರಣೆ ಬಗ್ಗೆ ನಿಯೋಗ ಕಳವಳ ವ್ಯಕ್ತಪಡಿಸಿತು. ಕಾಂಗ್ರೆಸ್ಸಿನ ಮೊರೇಂದ್ರಸಿಂಗ್ ನೇತೃತ್ವದ ಸಮ್ಮಿಶ್ರ ಸರಕಾರ ಮಣಿಪುರದಲ್ಲಿ ಅಧಿಕಾರ ನಡೆಸುತ್ತಿದೆ.

ಕೋಮು ಗಲಭೆ ಹಾಗೂ ಈಗ ಮುಂದುವರೆದಿರುವ ಜನಾಂಗೀಯ ಬಿಕ್ಕಟ್ಟಿನಿಂದಾಗಿ ಸಾವಿರಾರು ಜನರು ಮನೆ ಮಾರುಗಳನ್ನು ಕಳೆದುಕೊಂಡಿದ್ದಾರೆ. ಸಂತ್ರಸ್ತರಿಗಾಗಿ ಪರಿಹಾರ ಶಿಬಿರಗಳನ್ನು ವ್ಯವಸ್ಥೆಗೊಳಿಸಲು ಸರಕಾರ ಯಾವುದೇ ಕ್ರಮ ಕೈಗೊಳ್ಳದಿರುವುದು ಆಘಾತಕಾರಿಯಾಗಿದೆ ಎಂದು ರಾಜ್ಯಪಾಲರಿಗೆ ಅರ್ಪಿಸಲಾಗಿರುವ ಮನವಿ ಪತ್ರ ಹೇಳಿದೆ.

ಗುಡ್ಡಗಾಡು ಪ್ರದೇಶಗಳಲ್ಲಿ ಮಾತ್ರವಲ್ಲದೆ ಬಯಲು ಪ್ರದೇಶಗಳಲ್ಲಿ ಕೂಡಾ ಜನರ ಜೀವ-ಆಸ್ತಿಪಾಸ್ತಿ ರಕ್ಷಣೆಗೆ ಸರಕಾರ ವಿಫಲವಾಗಿದೆ. ಉಗ್ರಗಾಮಿ ಗುಂಪುಗಳು ಪ್ರತಿದಿನ ಎಂಬಂತೆ ಮುಗ್ಧಜನರನ್ನು ಕೊಲ್ಲುತ್ತಿವೆ. ಇನ್ನೊಂದೆಡೆ ಉಗ್ರಗಾಮಿಗಳ ವಿರುದ್ಧದ ಕಾರ್ಯಾಚರಣೆ ಹೆಸರಿನಲ್ಲಿ ಭದ್ರತಾ ಪಡೆಗಳು ಮುಗ್ಧ ಯುವಕರನ್ನು ಕೊಲ್ಲುತ್ತಿವೆ ಎಂದು ಸಿಪಿಐ(ಎಂ) ಆತಂಕ ವ್ಯಕ್ತಪಡಿಸಿದೆ.

ರಾಜ್ಯದ್ದು ಕೇವಲ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಯಾಗಿರದೆ ರಾಜಕೀಯ ಸಮಸ್ಯೆಯೂ ಆಗಿದೆ ಎಂದು ಪಕ್ಷ ವಿಶ್ಲೇಷಿಸಿದೆ. ಕೇಂದ್ರ ಸರಕಾರವೇ ಮಧ್ಯ ಪ್ರವೇಶ ಮಾಡಬೇಕಾದಂತಹ ಗಂಭೀರ ಪರಿಸ್ಥಿತಿ ತಲೆದೋರಿದೆ ಎಂದಿರುವ ಸಿಪಿಐ(ಎಂ) ರಾಜ್ಯದಲ್ಲಿ ಸಹಜ ಆಡಳಿತ ನೆಲೆ[...] ಕ್ರಮ ಕೈಗೊಳ್ಳಲು ಕೇಂದ್ರವನ್ನು ಆ[...] ಬಂಡುಕೋರರ ಸಮಸ್ಯೆಗೆ ರಾಜಕೀ[...] ಹಾರ ರೂಪಿಸುವಂತೆ ಸಲಹೆ ಮಾಡಿ[...]

ನಿಯೋಗದ ಅಭಿಪ್ರಾಯ[...] ಕೇಂದ್ರಕ್ಕೆ ತಿಳಿಸುವುದಾಗಿ ರಾಜ್ಯಪಾ[...] ರಘುನಾಥ ರೆಡ್ಡಿ ಭರವಸೆ ನೀಡಿದರ[...]

-- ವಿಶ್ವ

ತ್ರಿಪುರಾದಲ್ಲಿ ವಿಫಲವಾ[...] ಬಿಜೆಪಿ ಬಂದ್

ತ್ರಿಪುರಾದಲ್ಲಿ ಹೆಚ್ಚಿರುವ ಉ[...] ಚಟುವಟಿಕೆಗಳನ್ನು ನಿಯಂತ್ರಿಸಲು[...] ಸರಕಾರ ವಿಫಲವಾಗಿದೆ ಎಂದು[...] ಪಿಸಿ, ಅದಕ್ಕೆ 'ಪ್ರತಿಭಟನೆ' ವ್ಯಕ್ತ[...] ಭಾರತೀಯ ಜನತಾ ಪಕ್ಷ ಸೆ. [...] 'ತ್ರಿಪುರಾ ಬಂದ್' ನಡೆಸಲು ಕರೆ[...] 12 ಗಂಟೆಗಳ ಈ ಬಂದ್‌ಗೆ ಯ[...] ರೀತಿಯ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ[...] ಅಗರ್ತಲಾದಿಂದ ಬಂದಿ[...] ತಿಳಿಸಿವೆ.

ರಾಜ್ಯಾದ್ಯಂತ ಜನಜೀವನಕ್ಕೆ ಯಾ[...] ತರದ ಧಕ್ಕೆ ಉಂಟಾಗಲಿಲ್ಲ. ಸಂಕೀರ್ಣ, ಅಂಗಡಿಗಳು, ಸರಕಾರಿ[...] ಗಳು, ಶಾಲಾ ಕಾಲೇಜುಗಳು ವ[...] ಕಾರ್ಯ ನಿರ್ವಹಿಸಿದವು ಎಂದು ಮ[...] ಹೇಳಿವೆ.

ಉಗ್ರಗಾಮಿಗಳ ಶರಣಾ[...]

ಈ ಮಧ್ಯೆ ಅಖಿಲ ತ್ರಿಪುರ[...] ಕಟ್ಟುಪಡೆಯ (ಎ.ಟಿ.ಟಿ.ಎಫ್) [...] ಮಂದಿ ಬಂಡುಕೋರರು ಸೆ. 6 ರ[...] ರಿಬಾರಿ ಎಂಬಲ್ಲಿ ಮುಖ್ಯಮಂತ್ರಿ [...] ದೇವ್ ಅವರಿಗೆ ಶರಣಾದರು. ಅಪಾರ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿದರ[...]

ಡಿ.ವೈ.ಎಫ್.ಐ. ನೇತೃತ್ವದಲ್ಲಿ ದೇಶ ರಕ್ಷಾ ರ‍್ಯಾಲಿ

ಉಪ್ಪಳ ಆಗಸ್ಟ್ 15: ಕೋಮುವಾದಕ್ಕೆ ಮರಾಗಿಯೂ, ನವಮಸಾಹತೀಕರಣಕ್ಕೂ ವಿರುದ್ಧವಾಗಿ ಸ್ವಾತಂತ್ರ್ಯದಿನದಂದು, ಕೋಮುಶಕ್ತಿಗಳ ಕೋಟೆ ಎನಿಸಿದ್ದ ಉಪ್ಪಳದಲ್ಲಿ ಹಲವು ಸಾವಿರ ಮಂದಿ ಹೋರಾಟ ನಡೆಸುವ ಪ್ರತಿಜ್ಞೆಗೈದರು. ನಯಾಬಜಾರ್‌ನಿಂದ ಪ್ರಾರಂಭವಾದ ರ‍್ಯಾಲಿ ಉಪ್ಪಳ ಟೌನ್‌ನಲ್ಲಿ ಪ್ರತ್ಯೇಕವಾಗಿ ಸಜ್ಜುಗೊಳಿಸಲ್ಪಟ್ಟಿದ್ದ ಭಗತ್‌ಸಿಂಗ್ ನಗರದಲ್ಲಿ ಕೊನೆಗೊಂಡಾಗ ಜನಸಾಗರವೇ ನೆರೆದಂತೆ ಕಾಣುತ್ತಿತ್ತು. ಡಿ.ವೈ.ಎಫ್.ಐ. ಸಂಸ್ಥಾನ ಸಹ ಕಾರ್ಯದರ್ಶಿ ಕೆ.ಪಿ. ಸತೀಶ್ ಚಂದ್ರನ್ ನೆರೆದಿದ್ದ ಜನಸ್ತೋಮಕ್ಕೆ ಪ್ರತಿಜ್ಞಾ ವಾಚಕವನ್ನು ಹೇಳಿಕೊಟ್ಟರು.

ಅನಂತರ ನಡೆದ ಬಹಿರಂಗ ಸಭೆಯನ್ನು ಸಿಪಿಐ(ಎಂ) ಜಿಲ್ಲಾ ಸೆಕ್ರೆಟರಿ ಎ.ಕೆ. ನಾರಾಯಣ್ ಉದ್ಘಾಟನೆ ಮಾಡಿದರು. ಡಿ.ವೈ.ಎಫ್.ಐ ಮುಂದಾಳುಗಳಾದ ಕೆ.ಪಿ. ಸತೀಶ್ ಚಂದ್ರನ್, ಎಂ. ರಾಜಗೋಪಾಲ್, ಶಂಕರ, ಕೆ. ಜಯಾನಂದ ಮೊದಲಾದವರೂ ಸಿಪಿಐ(ಎಂ) ನೇತಾರರಾದ ವಿ.ಎಂ. ರಾಮಯ್ಯಶೆಟ್ಟಿ, ಕೆ. ಕಣ್ಣನ್ ನಾಯರ್, ಎ. ಅಬೂಬಕರ್ ಮೊದಲಾದವರು ಭಾಷಣ ಮಾಡಿದರು.



ಸಿ.ಪಿ.ಐ. - ಸಿ.ಪಿ.ಐ(ಎಂ) ಜಂಟಿ ಸಭೆ ಉತ್ತರ ಭಾರತದ ಚುನಾವಣೆಗಳ ಬಗ್ಗೆ ಚರ್ಚೆ

ಸಿಪಿಐ(ಎಂ) ಹಾಗೂ ಸಿಪಿಐ ಮುಖಂಡರು ಆಗಸ್ಟ್ 25 ರಂದು ನವದೆಹಲಿಯಲ್ಲಿ ಸಭೆ ಸೇರಿ ನಾಲ್ಕು ರಾಜ್ಯಗಳಲ್ಲಿ ಮುಂಬರುವ ಚುನಾವಣೆಗಳಲ್ಲಿ ಎರಡು ಪಕ್ಷಗಳು ಅನುಸರಿಸಬೇಕಾದ ನಿಲುವಿನ ಬಗ್ಗೆ ಚರ್ಚಿಸಿದರು. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ (ಐ)ನ ದುಷ್ಟ ನೀತಿಗಳ ಲಾಭ ಪಡೆಯಬಯಸುವ ಬಿಜೆಪಿಯನ್ನು ಸೋಲಿಸುವುದೇ ಮುಖ್ಯ ಉದ್ದೇಶವಾಗಬೇಕು ಎಂದು ಎರಡೂ ಪಕ್ಷಗಳು ತೀರ್ಮಾನಿಸಿವೆ. ಎಲ್ಲಾ ಜಾತ್ಯಾತೀತ ವಿರೋಧ ಪಕ್ಷಗಳು ಒಂದು ಚುನಾವಣಾ ಒಮ್ಮತಕ್ಕೆ ಬಂದರೆ

ಇದು ಸಾಧ್ಯ. ಇಂತಹ ವ್ಯಾಪಕ ಐಕ್ಯತೆಯ ಆಧಾರ ಸಮಾಜವಾದಿ ಪಾರ್ಟಿ, ಜನತಾದಳ(ಬಿ) ಹಾಗೂ ಜನತಾದಳ (ಎ) ನಡುವೆ ಸೀಟು ಹೊಂದಾಣಿಕೆಯ ಬಗ್ಗೆ ಒಮ್ಮತ. ಈ ದಿಕ್ಕಿನಲ್ಲಿ ಪ್ರಗತಿ ಕಾಣದಿರುವ ಬಗ್ಗೆ ಎರಡೂ [...] ಮುಖಂಡರು ಖೇದ ವ್ಯಕ್ತಪಡಿಸಿ[...]

ಎರಡು ಪಕ್ಷಗಳ ಪ್ರಧಾನ[...] ಶಿಗಳಾದ ಹರ್ಕಿಷನ್ ಸಿಂಗ್[...] ಹಾಗೂ ಇಂದ್ರಜಿತ್ ಗುಪ್ತ ಜಂಟಿ[...] ಮಹತ್ವದ ರಾಜ್ಯದಲ್ಲಿ ಕೋಮು[...] ಳನ್ನು ಸೋಲಿಸಬಹುದಾದ ಒಂ[...]

ಒಮ್ಮತ ಏರ್ಪಡುವಂತೆ ಮುತು[...] ಸಬೇಕೆಂದು ಈ ಸಭೆಯಲ್ಲಿ ನಿ[...] ಯಿತು.

ಸಿಪಿಐ ಪರವಾಗಿ ಇಂದ್ರಜಿ[...] ಚತುರಾನನ್ ಮಿಶ್ರಾ, ಹಾಗ[...] ಬರ್ಧನ್, ಸಿಪಿಐ(ಎಂ) ಪರವಾ[...] ಪ್ರಕಾಶ್ ಕಾರಟ್, ಸೀತಾರಾಂ ಹಾಗೂ ಎಸ್. ರಾಮಚಂದ್ರಪಿ[...] ಯಲ್ಲಿ ಭಾಗವಹಿಸಿದ್ದರು.

ಕರ್ನಾಟಕದ ಜನತೆಯ ಪ್ರತಿರೋಧವನ್ನು ಸಾರಿದ ಬಂದ್

...ದ ಇತರೆಡೆಯಂತೆ ಕರ್ನಾಟಕ ...ಲ್ಲೂ ಕಾರ್ಮಿಕ ವರ್ಗ ಹಾಗೂ ಇತರ ...ಡಿಯುವ ಜನಗಳಿಂದ ಭಾರತ್ ...ದ್ ಹಾಗೂ ಕೈಗಾರಿಕಾ ಮುಷ್ಕ...ರ ಕರೆಗೆ ಭಾರೀ ಸ್ಪಂದನ ದೊರೆ...ೆ. ಪತ್ರಿಕೆ ಮುದ್ರಣಕ್ಕೆ ಹೋಗುತ್ತಿರುವ ...ಳಿಗೆ ಸಿಕ್ಕಿದ ವರದಿಗಳು ಇಲ್ಲಿವೆ:

ಗುಲಬರ್ಗಾ ಸಂಪೂರ್ಣ ಬಂದ್

ಗುಲಬರ್ಗಾ ನಗರವನ್ನೊಳಗೊಂಡು ಜಿಲ್ಲೆ...ದ್ಯಂತ ಹೆಚ್ಚು ಕಮ್ಮಿ ಎಲ್ಲಾ ತಾಲೂಕುಗಳಲ್ಲಿ ...ದ್ ಯಶಸ್ವಿಯಾಗಿ ನಡೆಯಿತು.

...ಲಬರ್ಗಾ ನಗರ: ಗುಲಬರ್ಗಾ ನಗರದಲ್ಲಿ ...ದ ಬಂದ್ ಕಾಲದಲ್ಲಿ ಬಸ್ಸು, ಆಟೋರಿಕ್ಷಾ, ...ಮಾ, ಪೆಟ್ರೋಲ್ ಬಂಕ್, ಶಾಲಾ ಕಾಲೇಜು, ...ಜ್ಯೋದ್ಯಮ, ಅಂಗಡಿಗಳು ಸಂಪೂರ್ಣ...ಗಿ ಬಂದ್ ಆಗಿದ್ದವು. ಬ್ಯಾಂಕ್ ನೌಕರರು, ...ಐಸಿ ನೌಕರರು, ಮಂಡಲ ಪಂಚಾಯಿತಿ ...ಕರರು, ಅಂಗನವಾಡಿ ನೌಕರರು, ಹೊಲಿಗೆ ...ದ್ರದ ಮಹಿಳೆಯರು, ಕರ್ನಾಟಕ ಪ್ರಾಂತ ರೈತ ...ಘ, ಡಿವೈಎಫ್ಐ, ಎಸ್ಎಫ್ಐ ಸಂಗಾತಿಗ...ಳು ಭಾಗವಹಿಸಿದ್ದರು.

ಬಂದ್ ಸಮರ್ಥವಾಗಿ ಜಾರಿ ಮಾಡ... ಮುಂಜಾನೆ 6-30ರಿಂದಲೇ ಸುಮಾರು ...ಸ್ಕೂಟರ್-ಸೈಕಲ್ ಮೋಟಾರ್‌ಗಳ ತಂಡ ...ಎಸ್.ಕೆ. ಮಿಲ್ಲಿಗೆ ಹೋಗಿ ಕಾಂ. ಮಿಲ್ಲನ್ನು ...ದ್ ಮಾಡಲಾಯಿತು. ನಂತರ ಸಾಯಂಕಾ...ವರೆಗೆ ಸತತವಾಗಿ ನಗರದಾದ್ಯಂತ ರೌಂಡ್ ...ಡೆದು ಬಂದ್ ಸಂಜೆಯವರೆಗೆ ನಿರಂತರ...ಗಿ ನಡೆಸಲಾಯಿತು. ಮುಂಜಾನೆ 11 ಗಂಟೆಗೆ ...ಪ್ರಾಪ್ರನೋಷಕದಿಂದ ಸುಮಾರು 2000 ...ರ ಮೆರವಣಿಗೆಯನ್ನು ಮುಖ್ಯ ಬೀದಿಗಳಲ್ಲಿ ...ಮ ಸೂಪರ್ ಮಾರ್ಕೆಟ್‌ನಲ್ಲಿ ಮುಕ್ತಾಯ...ಡಲಾಯಿತು. ಮೆರವಣಿಗೆಯ ನೇತೃತ್ವ... ಸಿಪಿಐ(ಎಂ) ಮುಖಂಡರಾದ ಕಲ್ಲಪ್ಪ ...ಗಿ, ಮಾರುತಿ ಮಾನ್ಪಡೆ, ಯುನೈಟೆಡ್ ...ಡ್ ಯೂನಿಯನ್ ಫ್ರಂಟ್‌ನ ಮುಖಂಡ ರಾವ ರಶೀದ್ ಜಾವೇದ್ ಹಾಗೂ ಎನ್.ಎಸ್. ಪೇಶಕಾರ್, ಎಸ್ಎಫ್ಐನ ಮುಖಂಡ ಈಶ್ವರ ಚಂದ್ರ ವಹಿಸಿದ್ದರು.

ನಂತರ ಅಂಗನವಾಡಿ ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆಯು ಮತ್ತು ಆಟೋ ಚಾಲಕರ ಸಂಘದವರು ಕೇಂದ್ರ ಸರಕಾರವು ಇತ್ತೀಚಿಗೆ ಆಟೋಗಳ ಮೇಲೆ ರೂ. 1400 ತೆರಿಗೆ ವಿಧಿಸಿರುವುದನ್ನು ವಿರೋಧಿಸಿ ಜಿಲ್ಲಾಧಿಕಾರಿಗಳ ಕಚೇರಿ ಎದುರಿಗೆ ಧರಣಿ ನಡೆಸಿ ಮನವಿ ಪತ್ರ ಸಲ್ಲಿಸಿದರು.

ಧರಣಿಯ ನೇತೃತ್ವವನ್ನು ಕಾಂ.ಮಾರುತಿ ಮಾನ್ಪಡೆ ವಹಿಸಿದ್ದರು.

ಒಂದೆಂದೂ ನಡೆಯದ ರೀತಿಯಲ್ಲಿ ಬಂದ್ ಅತಿ ಯಶಸ್ವಿಯಾಗಿ ಆಚರಿಸಲಾಯಿತೆಂದು ನಮ್ಮ ಗುಲ್ಬರ್ಗಾ ಐಕ್ಯರಂಗದ ವರದಿಗಾರರು ತಿಳಿಸಿದ್ದಾರೆ.

ಚಿಂಚೋಳಿ : ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರ ಮತಕ್ಷೇತ್ರವಾದ ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನಲ್ಲಿ ಯಶಸ್ವಿಯಾಗಿ ಬಂದ್ ಆಚರಿಸಲಾಯಿತು. ಮುಂಜಾನೆ 10 ಗಂಟೆಗೆ 500 ಜನರ ಮೆರವಣಿಗೆ ಬಸ್ ಸ್ಟಾಂಡ್‌ನಿಂದ ಹೊರಟು ಅಂಬೇಡ್ಕರ್ ಪ್ರತಿಮೆಯವರೆಗೂ ನಡೆಸಲಾಯಿತು. ಚಿಂಚೋಳಿಯಲ್ಲಿ ಎಲ್ಲಾ ಅಂಗಡಿ, ಶಾಲಾ ಕಾಲೇಜು ಬಸ್ಸುಗಳು ನಡೆಯಲಿಲ್ಲ. ಬಂದ್‌ನ ಪ್ರಯುಕ್ತ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಚಿಂಚೋಳಿ ತಾಲೂಕು ಮುಖಂಡರಾದ ಭೀಮಶೆಟ್ಟಿ ಯಂಪಳ್ಳಿ ಮತ್ತು ರಾಜಶೇಖರ ಮುಕರಂಬಿ ಮಾತನಾಡಿ ಬಂದ್ ಯಶಸ್ವಿಗೊಳಿಸಿದ್ದಕ್ಕೆ ತಾಲೂಕಿನ ಜನತೆಗೆ ಅಭಿನಂದಿಸಿದರು.

ಆಳಂದ : ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನಲ್ಲಿ ಸಿಪಿಐ(ಎಂ), ಸಿಪಿಐ ಮತ್ತು ಜನತಾದಳದ ಜಂಟಿ ನೇತೃತ್ವದಲ್ಲಿ ಬಂದ್ ಆಚರಿಸಲಾಯಿತು.

ಜೇವರ್ಗಿ : ಜೇವರ್ಗಿಯಲ್ಲಿಯೂ ಕೂಡಾ ಸಿಪಿಐ(ಎಂ), ಸಿಪಿಐ ಮತ್ತು ಜನತಾದಳದವರು ಜಂಟಿಯಾಗಿ ಯಶಸ್ವಿಯಾಗಿ ಬಂದ್‌ನ್ನು ಆಚರಿಸಿದರು.

ಶಹಾಪುರ : ಕರ್ನಾಟಕ ಪ್ರಾಂತ ರೈತ ಸಂಘ, ರಸ್ತೆ ಸಾರಿಗೆ ಸಂಸ್ಥೆ, ಅಂಗನವಾಡಿ ಕಾರ್ಯಕರ್ತೆಯರ ಸಂಘ, ಎಸ್ಎಫ್ಐ, ಡಿವೈಎಫ್ಐನ ಸುಮಾರು 600 ಜನ ಕಾರ್ಯಕರ್ತರು ಶಹಾಪುರದಲ್ಲಿ ಯಶಸ್ವಿ ಬಂದ್ ಆಚರಿಸಿದರು. ಎಲ್ಲಾ ಹೋಟೆಲ್, ಅಂಗಡಿ, ಬಸ್ ಮತ್ತಿನ್ನಿತರ ವಾಣಿಜ್ಯೋದ್ಯಮಗಳು ಮುಚ್ಚಿದ್ದವು. ಬಂದ್ ಕಾರ್ಯಕರ್ತರನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾ ಮುಖಂಡ ಶ್ರೀ ಚೆನ್ನಪ್ಪ ಆನೇಗುಂದಿಯವರು ಮಾತನಾಡಿದರು.

ಕಮಲಾಪುರ, ಮಹಾಗಾಂವ : ಕಲುಬುರ್ಗಿ ತಾಲೂಕಿನ ಪ್ರಮುಖ ಗ್ರಾಮಗಳಾದ ಕಮಲಾಪುರ, ಮಹಾಗಾಂವನಲ್ಲಿ ಡಿವೈಎಫ್ಐ ಮತ್ತು ಪ್ರಾಂತ ರೈತ ಸಂಘದ ಕಾರ್ಯಕರ್ತರು ಬಂದ್‌ನ ಅಂಗವಾಗಿ ಎಲ್ಲಾ ಅಂಗಡಿ- ಶಾಲೆಗಳನ್ನು ಮುಚ್ಚಿಸಿ ಮೆರವಣಿಗೆಯನ್ನು ತೆಗೆದು ರಸ್ತಾ ರೋಕೋ ನಡೆಸಿದರು. ಮಹಾಗಾಂವ್‌ನಲ್ಲಿ ರಸ್ತಾ ರೋಕೋ ನಡೆಸಿದ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದರು. ಬಂದ್‌ನ ನೇತೃತ್ವವನ್ನು ನಾಗೇಂದ್ರಪ್ಪ ಹಾಗೂ ಭೀಮಶಾರಬರು ವಹಿಸಿದ್ದರು.

ಸಲಗರ : ಆಳಂದ ತಾಲೂಕಿನ ಪ್ರಮುಖ ಗ್ರಾಮಗಳಲ್ಲೊಂದಾದ ಸಲಗರನಲ್ಲಿ ಎಲ್ಲಾ ಅಂಗಡಿಗಳನ್ನು ಮುಚ್ಚಿ ಶಾಲೆಗಳನ್ನು ಮುಚ್ಚಿ ಪ್ರಾಂತ ರೈತ ಸಂಘದವರು ರಸ್ತಾರೋಕೋ ನಡೆಸಿದರು. ಸಲರಗದ ಬಂದ್‌ನ ನೇತೃತ್ವವನ್ನು ಮೇಘಣ್ಣ, ಬಾಬು ಮುಗಳಿ, ದೆತ್ತಣ್ಣ ಭಂಕೂರ ವಹಿಸಿದ್ದರು.

ರಾಯಚೂರು

ರಾಯಚೂರು ನಗರ ಸೇರಿದಂತೆ ಜಿಲ್ಲೆಯ ಒಂಬತ್ತು ತಾಲೂಕಿನಲ್ಲಿ ಬಂದ್ ಯಶಸ್ವಿಯಾಗಿದೆ.

ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಬರುವ ಪ್ರಮುಖ ಗ್ರಾಮಗಳನ್ನು ಬಂದ್ ಮಾಡಲಾಗಿದೆ.

ಕಲ್ಮಲಾ, ಮಸರಕಲ್ಲ, ಜಾಲಹಳ್ಳಿ, ಸುಲ್ತಾನಪುರ ಗ್ರಾಮಗಳ ಮುಂದೆ ರೈತರು ರಸ್ತೆ ತಡೆ ಚಳುವಳಿಯನ್ನು ಮಾಡಲಾಗಿದೆ.

ರಾಯಚೂರು ನಗರ : ಮುಂಜಾನೆ 7 ಗಂಟೆಯಿಂದ 75ಕ್ಕೂ ಹೆಚ್ಚು ಮೋಟಾರ್ ಬೈಕ್, ಮೋಪೆಡ್ ಹಾಗೂ ಕೆಲವು ಬೈಸಿಕಲ್‌ಗಳು ಸೇರಿದಂತೆ ಬಜಾರ್ ತೆಗೆಯದಂತೆ ಸಿನೆಮಾ ನಡೆಯದಂತೆ, ಕೈಗಾರಿಕೆಗಳು ನಡೆಯದಂತೆ ಶಾಲೆ ತೆಗೆಯದಂತೆ ಮಾಡಲು ಪ್ರಚಾರ ಮೆರವಣಿಗೆ ನಡೆಸಲಾಯಿತು. ನಗರದ ಪ್ರಮುಖ ಕೇಂದ್ರವಾದ ತೀನ್ ಕಂದಿಲದಲ್ಲಿ 8ನೇ ತಾರೀಕಿನಿಂದಲೇ ಒಂದು ಶಾಮಿಯಾನ ಹಾಕಿ ಅಲ್ಲಿಂದಲೇ ಕೇಂದ್ರವಾಗಿಟ್ಟುಕೊಂಡು, ಉಸ್ತುವಾರಿ ಮಾಡಲಾಯಿತು. ಮಧ್ಯಾಹ್ನ ಮೂರು ಗಂಟೆಯವರೆಗೆ ಇಡೀ ನಗರವನ್ನು ನಾಲ್ಕಾರು ಬಾರಿ ಸುತ್ತು ಹಾಕುವ ಮುಖಾಂತರ, ಬ್ಯಾಂಕ್, ವಿಮೆ, ಬಜಾರು, ಕೈಗಾರಿಕೆ, ಸಿನೇಮಾ ಸೇರಿದಂತೆ ಇಡೀ ನಗರವನ್ನು ಅಭೂತಪೂರ್ವಕವಾಗಿ ಬಂದ್ ಮಾಡಲಾಯಿತು.

ಸಿಐಟಿಯು ನೇತೃತ್ವದ ಸ್ಪಿನ್ನಿಂಗ್ ಮಿಲ್ಲಿನ ಕಾರ್ಮಿಕರು ಹಾಗೂ ಸೈಕಲ್ ರಿಕ್ಷಾ ಚಾಲಕರು, ಆಟೋ ಚಾಲಕರು ಸೇರಿದಂತೆ 500ಕ್ಕೂ ಮಿಕ್ಕಿ ನಗರದಲ್ಲಿ ಪ್ರದರ್ಶನ ನಡೆಸಿದರು.

ಐಎಫ್‌ಟಿಯು 200 ಕಾರ್ಮಿಕರು ಗುಂಪಾಗಿ ಹೋಗಿ ಜಿನ್ನಿಂಗ್ ಹಾಗೂ ಇತರ ಕಾರ್ಖಾನೆಗಳನ್ನು ಸ್ಥಗಿತಗೊಳಿಸಿದರು.

ಕೆಎಸ್‌ಆರ್‌ಟಿಸಿ ಕಾರ್ಮಿಕರ ಸಂಘಟನೆ ಸಂಪೂರ್ಣ ಮುಷ್ಕರ ಹೂಡಿ, ಡಿಪೋದ ಮುಂದೆ ಸಭೆಯನ್ನು ನಡೆಸಿ, ಮೆರವಣಿಗೆ ನಡೆಸಿ ಡಿವಿಜನಲ್ ಕಂಟ್ರೋಲರ್ ಕಚೇರಿಗೆ ಹೋಗಿ ಮನವಿ ಸಲ್ಲಿಸಿದರು.

ಭಾರತ್ ಬಂದ್‌ನಲ್ಲಿ ಸಿಐಟಿಯು, ಎಸ್ಎಫ್ಐ, ಡಿವೈಎಫ್ಐ, ಕರ್ನಾಟಕ ಪ್ರಾಂತ ರೈತ ಸಂಘ, ಯುವ ಜನತಾದಳ, ಎಐಡಿಎಸ್‌ಓ, ಐಎಫ್‌ಟಿಯು, ದಲಿತ ಸಂಘರ್ಷ ಸಮಿತಿ, ಜನತಾದಳ ಕಾರ್ಮಿಕರ ಸೆಲ್, ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘ, ಪಿವಿಕೆ. ಎಐಇಎ, ಸಂಘಟನೆಗಳು ಬಾ... ...ಬಿದ್ದವು.

ಬಂದ್‌... ...ಉಸ್ತುವಾರಿಯನ್ನು ಚಂದ್ರಶೇಖರ ಬಾಳೆ, ರಾಘವೇಂದ್ರ ಕುಷ್ಟಗಿ, ಯಲ್ಲಪ್ಪ, ಜಾಲಹಳ್ಳಿ, ಬಸವರಾಜ ರೆಡ್ಡಿ, ರಿಜವಾನಾ, ದಿಜಯಕುಮಾರ್, ಸೋಮಶೇಖರ್, ಸತೀಶ್ ಕುಮಾರ್, ಮಾರುತಿ, ವೆಂಕಟೇಶ್, ಶಂಕರ ಗೌಡ, ವಿ. ಹೆಚ್.ಮಾಸ್ಟರ್, ರಸೂಲ ಅಹ್ಮದ್, ವಿರೂಪಾಕ್ಷ ಮುಂತಾದ ಮುಖಂಡರು ವಹಿಸಿದ್ದರು.

ಸಾಯಂಕಾಲ ತೀನ ಕುಂದಿಲ ಹತ್ತಿರ ಮುಕ್ತಾಯದ ಅಂಗವಾಗಿ ಸಭೆ ನಡೆಸಲಾಯಿತು. ರಾಘವೇಂದ್ರ ಕುಷ್ಟಗಿ, ವಿ.ಹೆಚ್ ಮಾಸ್ತರ ಹಾಗೂ ಬಸವರಾಜರೆಡ್ಡಿ ಮಾತನಾಡಿದರು.

ಬಂದ್‌ಗೆ ಜಿಲ್ಲೆಯಲ್ಲಿ ಈ ಬಾರಿ ವ್ಯಾಪಕ ತಯಾರಿ ನಡೆಯಿತು. ರಾಯಚೂರಲ್ಲಿ 60 ಕ್ಕೂ ಹೆಚ್ಚು ಜನರ 6-9-93ರಂದು ಪಂಜಿನ ಮೆರವಣಿಗೆ, 7-9-93ರಂದು ಸೈಕಲ್ ಮೆರವಣಿಗೆ, ಮೂರು ದಿನ ಆಟೋರಿಕ್ಷಾ ಪ್ರಚಾರ ಮಾಡಲಾಗಿದ್ದು 10,000 ಕರಪತ್ರ ಹಾಕಲಾಗಿದೆ. ಎಲ್ಲಾ ಸಂಘ, ಸಂಸ್ಥೆಗಳಿಗೆ ಬಂದ್ ಮಾಡಲು ಮನವಿಯನ್ನು ಕೊಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ರಘುನಾಥನಹಳ್ಳಿಯಲ್ಲಿ 30 ಜನ ಕಾರ್ಯಕರ್ತರಿಗೆ ಒಂದು ತರಬೇತಿ ಶಿಬಿರ ನಡೆದಿದೆ.

ಗಂಗಾವತಿ : ಭಾರತ್ ಬಂದ್ ಕಾರ್ಯಕ್ರಮ ಇಲ್ಲಿ ಸಂಪೂರ್ಣ ಯಶಸ್ವಿಯಾಗಿ ನಡೆಯಿತು. 2000 ಕೃಷಿ ಕೂಲಿಕಾರ, ಕಾರ್ಮಿಕ, ವಿದ್ಯಾರ್ಥಿ ಯುವಜನರ ರ್‍ಯಾಲಿ ನಡೆಸಲಾಗಿದೆ.

ಸಿಂಧನೂರು : 200 ಜನರ ಪಂಜಿನ ಮೆರವಣಿಗೆಯನ್ನು 7-9-93ರಂದು ಬಂದ್‌ಗೆ ಪೂರ್ವಭಾವಿಯಾಗಿ ನಡೆಸಲಾಯಿತು. ಅಂದು ಭಾರತ್ ಬಂದ್ ಪೂರ್ಣವಾಗಿ ಯಶಸ್ವಿಯಾದ ವರದಿಗಳು ಬಂದಿವೆ.

ಜಾಲಹಳ್ಳಿ : 40ಜನರ ಗ್ರಾಮೀಣ ಕಾರ್ಯಕರ್ತರಿಗೆ, 50 ಜನ ಯುವ ಕಾರ್ಯಕರ್ತರಿಗೆ ತರಬೇತಿ ನಡೆದಿದೆ ಮೂರು ದಿನ ತಮಟೆಯೊಂದಿಗೆ ಪ್ರಚಾರ ಸಭೆಗಳನ್ನು ನಡೆಸಲಾಗಿದೆ. ಬಂದ್ ಪೂರ್ವದಲ್ಲಿ ಗ್ರಾಮೀ ಕಾರ್ಯಕರ್ತರಿಗೆ ತರಬೇತಿ ನಡೆಸಲಾಗಿದೆ. ಯಲಬುರ್ಗಾದ 50 ಜನ ಕುಷ್ಟಗಿಯ 36 ಜನ ದೇವದುರ್ಗ ತಾಲೂಕಿನ 80 ಜನರು ತರಬೇತಿ ನೀಡಲಾಯಿತು.

ಆಗಸ್ಟ್ 19ರ ಜೈಲ್ ಭರೋ ಚಳುವಳಿ

ಪಿ.ವಿ. ನರಸಿಂಹರಾವ್ ನೇತೃತ್ವದ ...ಗ್ರೆಸ್ (ಐ) ಸರ್ಕಾರವು ಅನುಸರಿಸುತ್ತಿರುವ ...ದ್ರೋಹಿ, ಜನವಿರೋಧಿ ಹೊಸ ಆರ್ಥಿಕ ... ಮತ್ತು ಕೋಮುವಾದದ ವಿರುದ್ಧ ಹೋರಾ...ರುವ ಸಾಮೂಹಿಕ ಸಂಘಟನೆಗಳ ವಿಶಾಲ ...ಕೆಯ ಕರೆಗೆ ಓಗೊಟ್ಟು 22 ಸಾವಿರಕ್ಕಿಂ...ತ ಹೆಚ್ಚು ಜನರು ಆಗಸ್ಟ್ 19 ರಂದು ಜೈಲ್ ...ರೋ ಚಳುವಳಿಯಲ್ಲಿ ಭಾಗವಹಿಸಿ ಬಂಧಿತ...ರು. ... ಸಿಐಟಿಯು ಕರ್ನಾಟಕ ರಾಜ್ಯ ...ತಿಯು ಜೈಲ್ ಭರೋ ಚಳುವಳಿಯಲ್ಲಿ ...ವಹಿಸಿದವರೆಲ್ಲರನ್ನು ಅಭಿನಂದಿಸಿದೆ.

ಉಡುಪಿ : ದೇಶದ ಸಾಮೂಹಿಕ ...ಟನೆಗಳ ವೇದಿಕೆಯು ಕೇಂದ್ರ ಸರಕಾ...ರ ಮುಂದೆ ಮಂಡಿಸಲಾದ 20 ಅಂಶದ ...ರ್ಣಯ ಬೇಡಿಕೆಗಳನ್ನು ಜಾರಿಗೊಳಿಸು...ವಂತೆ ಒತ್ತಾಯಿಸಿ ಆಗಸ್ಟ್ 19 ರಂದು ನಡೆ...ದ "ಜೈಲ್ ಭರೋ" ಚಳುವಳಿಯಲ್ಲಿ ಉಡುಪಿ ...ಲೂಕಿನಲ್ಲಿ ಸುಮಾರು 854 ಮಂದಿ (ಮಹಿಳೆ...ಯರು 254) ಬಂಧನಕ್ಕೊಳಗಾದರು. ಈ ಬಾರಿ ...ಯಿಂದ ಯುವಕರು ಬೀಡಿ, ಹಂಚು, ...ಡಂಬ, ಮುದ್ರಣ, ಸಾಮಿಲ್‌ಗಳಿಗೆ ಸೇರಿದ ...ಮಿಕರು ಮತ್ತು ರೈತರು, ಕೃಷಿಕಾರ್ಮಿಕರು, ...ತ್ಸಾಹದಿಂದ ಭಾಗವಹಿಸಿ ದೇಶದ ಜನ...ಪರವಾಗಿ ಮಂಡಿಸಲಾದ 20 ಬೇಡಿಕೆಗ...ಳ ಬೆಂಬಲ ಪ್ರದರ್ಶಿಸಿದರು. ಕೇಂದ್ರ ಸರಕಾರದ ...ವಿನಾಶಕಾರಿ ಆರ್ಥಿಕ ನೀತಿಗೆದುರಾಗಿ ತಮ್ಮ ...ಕೋಪವನ್ನು ಪ್ರಕಟಪಡಿಸಿದರು. ಕೋಮುವಾ...ದ ಅಪಾಯದ ವಿರುದ್ಧವೂ ಈ ಚಳುವಳಿ ...ನಡೆಯಿತು. "ಜೈಲ್ ಭರೋ" ಚಳುವ...ಳಿ ತಂಡಗಳ ನಾಯಕತ್ವವನ್ನು ಪಿ. ವಿಶ್ವನಾಥ, ...ಶ ಮೆಂಡನ್, ಗುರುವ ಪೂಜಾರಿ, ರಾಮ...ಸುಂದರ್, ಶಂಕರ ಸೆಟ್ಟಿಗಾರ, ಶಿವನಾಯ್ಕ ...ನಾಯ್ಕ, ರಾಜುಪೂಜಾರಿ, ಸಂಜೀವ ಸೇರಿ... ಸೋಮಪ್ಪ ಪೂಜಾರಿ, ಬಿ. ಮೋನಪ್ಪ ...ಯಾನ್, ಪ್ರಭಾಕರ ನಾಯಕ್ ಕೆ. ಲಕ್ಷ್ಮಣ, ...ಜ ಶೆಟ್ಟಿ ಎನ್. ಸೌಧು ಅಮೀನ್, ...ಗು ಸುವರ್ಣ, ರಮೇಶ್ ಜತ್ತನ್, ಗುರು... ಸೆಟ್ಟಿಗಾರ, ಸಂಜೀವನಾಯ್ಕ, ಮುದ್ದು... ...ರಿ, ಶೇಖರ ಪೂಜಾರಿ, ಎ. ಸದಾಶಿವ, ...ವಾಲ ಪೂಜಾರಿ, ದೇವಿದ್ ಎ. ಕರ್ಕಡ ...ಶ್ರೀಮತಿಯರಾದ ಗೋಪಿ, ಪದ್ಮಗಿರಿಜಾ, ...ಚು, ಬೇಬಿ, ಎನ್. ಬೇಬಿ, ಎನ್. ಗಿರಿಜ ...ವಹಿಸಿದ್ದರು.

ಬಂಧಿತರನ್ನು ಬಿಡುಗಡೆ ಮಾಡಲಾದ ನಂತರ ಅತೀ ದೊಡ್ಡ ಮೆರವಣಿಗೆ ನಡೆಸಿ ಕೆನರಾ ಬ್ಯಾಂಕಿನ ವಲಯ ಕಛೇರಿಯ ಮುಂದೆ ಬಹಿರಂಗ ಸಭೆಯನ್ನು ಜರಗಿಸಲಾಯಿತು. ಸಭೆಯಲ್ಲಿ ಬಿ. ಮೋನಪ್ಪ ಸಾಲಿಯಾನ್, ಡೇವಿಡ್ ಕರ್ಕಡ, ರಮೇಶ್ ಮೆಂಡನ್, ಶಂಕರ ಎನ್. ಸೆಟ್ಟಿಗಾರ್, ಕೆ. ಬಾಬು ಬಂಗೇರ, ಪ್ರಭಾಕರ ನಾಯಕ್ ಮೊದಲಾವರು ಮಾತನಾಡಿ 20 ಅಂಶದ ಕೇಳಿಕೆಗಳನ್ನು ಬೆಂಬಲಿಸಿದರು. ಮುಂದಿನ ಸೆಪ್ಟೆಂಬರ್ 9ರ "ಭಾರತ ಬಂದ್" ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸುವಂತೆ ಕರೆ ನೀಡಿದರು. ಕೊನೆಯಲ್ಲಿ ಪ್ರಬಾಕರ ನಾಯಕ್ ಧನ್ಯವಾದ ಸಲ್ಲಿಸಿದರು.

ಬ್ರಹ್ಮಾವರ: ಉಪವಿಭಾಗದಲ್ಲಿ ಇಲ್ಲಿನ ಬಂಧನಕ್ಕೊಳಗಾದವರು ನಂತರ ಸಭೆ ಜರಗಿಸಿದರು. ಹೆಚ್. ವಿಠಲ, ಶಂಕರ ಸೆಟ್ಟಿಗಾರ, ಸಿಲ್ವೆಸ್ಟರ್ ಡಿ ಸೋಜ್, ಹೆಚ್. ಸದಾಶಿವ, ಬಿ. ಸದಾಶಿವ ಶೆಟ್ಟಿ, ಹೆಚ್. ರಾಧಕೃಷ್ಣ ಮೊದಲಾದವರು ತಂಡದ ನಾಯಕತ್ವ ವಹಿಸಿದ ನಂತರ ಸಭೆಯಲ್ಲಿ ಮಾತನಾಡಿದರು.

ವಿಜಾಪುರ : ಕೇಂದ್ರ ಸರ್ಕಾರದ ಆರ್ಥಿಕ ನೀತಿಯ ವಿರುದ್ಧ ಮತ್ತು ಕೋಮುವಾದದ ವಿರುದ್ಧ ದೇಶದ 54 ಕೇಂದ್ರೀಯ ಸಾಮೂಹಿಕ ಸಂಘಟನೆಗಳು ಆಗಸ್ಟ್ 19 ರಂದು ದೇಶಾದ್ಯಂತ ಜೈಲ್ ಭರೋ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಬಿಜಾಪೂರ ಜಿಲ್ಲೆಯಲ್ಲಿ ಆ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಸಲುವಾಗಿ ಆಗಸ್ಟ್ 12 ರಂದು ಕೆ.ಎಸ್.ಆರ್.ಟಿ.ಸಿ., ಎಲ್.ಐ.ಸಿ. ಬ್ಯಾಂಕ್, ಮುನಿಸಿಪಾಲಿಟಿ, ಬೀಡಿ, ಲಾರಿ ಹಮಾಲಿ, ರೈತ ಸಂಘ, ವಿದ್ಯಾರ್ಥಿ ಯುವಜನ ಸಂಘಟನೆಗಳ ಸಂಯುಕ್ತ ಸಭೆ ರೈತ ಸಂಘದ ಕಚೇರಿಯಲ್ಲಿ ನಡೆಯಿತು. ಸಿಐಟಿಯು ಉಪಾಧ್ಯಕ್ಷ ಎನ್.ಕೆ. ಉಪಾಧ್ಯಾಯರು ಜೈಲ್ ಭರೋ ಕಾರ್ಯಕ್ರಮದ ಮಹತ್ವ ತಿಳಿಸಿ ಹೇಳಿ, ಜನಾಂದೋಲನದ ಮೂಲಕವೇ ನರಸಿಂಹರಾವ್ ಸರಕಾರದ ಜನವಿರೋಧಿ ನೀತಿಯನ್ನು ಹಿಮ್ಮೆಟ್ಟಿಸಲು ಸಾಧ್ಯವೆಂದು ಹೇಳಿದರು.

ಸಮನ್ವಯ ಸಮಿತಿಯ ಕಾರ್ಯದರ್ಶಿ ಮುಲ್ಲಾ ಅವರು ಆಗಸ್ಟ್ 19ರ ಕಾರ್ಯಕ್ರಮ ವಿವರಿಸಿದರು. ಎ.ಐ.ಟಿ.ಯು.ಸಿ.ಯ ಪ್ರಕಾಶ್ ಹಿಟ್ನಳ್ಳಿ, ಡಿ. ವೈ.ಎಫ್.ಐ ಮುನ್ನುಸಾಬ. ಕಲಾದಗಿ, ರೈತ ಸಂಘದ ಭೀಮಶಿ ಕಲಾದಗಿ, ಮುನಿಸಿಪಲ್ ಕಾಮಗಾರ ಯೂನಿಯನಿನ ವಿ.ಎಂ. ಸೊನ್ನದ ಮೊದಲಾದವರು ಮಾತಾಡಿದರು. ಸಾಮೂಹಿಕ ವೇದಿಕೆಯ ಅಧ್ಯಕ್ಷರಾದ ಭೀಮಶಿ ಕಲಾದಗಿ ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

ಬೆಳ್ತಂಗಡಿ: ಕೇಂದ್ರ ಸರ್ಕಾರದ ಆರ್ಥಿಕ, ಕೈಗಾರಿಕಾ ಮೊದಲಾದ ನೀತಿಗಳ ವಿರುದ್ಧ ಮತ್ತು ಕೋಮುವಾದಿ ಶಕ್ತಿಗಳ ಬೆಳವಣಿಗೆ ವಿರುದ್ಧ ಪ್ರತಿಭಟಿಸಲು ಎಡ ಪಂಥೀಯ ಸಾಮೂಹಿಕ ಸಂಘಟನೆಗಳ ನೀಡಿದ ಕರೆಯಂತೆ ಆಗಸ್ಟ್ 19 ರಂದು ಬೆಳ್ತಂಗಡಿಯಲ್ಲಿ ರೈತ ಸಂಘ (ಎ.ಐ.ಕೆ.ಎಸ್.) ಸಿಐಟಿಯು, ಡಿ.ವೈ.ಎಫ್.ಐ, ಎಸ್.ಎಫ್.ಐ ಸಂಘಟನೆಗಳು ತಾಲೂಕು ಕಛೇರಿ ಮುಂದೆ ಪಿಕೆಟಿಂಗ್ ನಡೆಸಿದರು. ನಂತರ ಚಳುವಳಿಗಾರರು ಬಂಧನಕ್ಕೊಳಗಾದರು.

ಬೆಳಿಗ್ಗೆ 10.30 ಕ್ಕೆ ಸರಿಯಾಗಿ ಸಭೆ ಸೇರಿದ ಚಳುವಳಿಗಾರರು ಸಭೆ ಮುಗಿಸಿ ಮೆರವಣಿಗೆ ನಡೆಸಿದರು. ಬೆಳ್ತಂಗಡಿ ಆರಕ್ಷಕ ಠಾಣೆ ಎದುರುಗಡೆ ನಡೆದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ತಾಲೂಕು ರೈತ ಸಂಘ ಅಧ್ಯಕ್ಷರಾದ ಕೆ. ವಿ. ರಾವ್ ವಹಿಸಿದ್ದರು. ಬೆಳ್ತಂಗಡಿ ತಾಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಹರಿದಾಸ್ ಮಾತನಾಡಿದರು.

ಡಿ.ವೈ.ಎಫ್.ಐ ಕಾರ್ಯದರ್ಶಿ ಹಾಗೂ ನ್ಯಾಯವಾದಿ ಬಿ.ಎಂ. ಭಟ್ ಅವರು ಸ್ವಾಗತಿಸಿದರು. ನ್ಯಾಯವಾದಿ ಶಿವಕುಮಾರ್ ವಂದಿಸಿದರು. ಡಿ. ಮಂಜುನಾಥ ಕಾರ್ಯಕ್ರಮ ನಿರೂಪಿಸಿದರು. ಶ್ಯಾಮರಾಜ ಮತ್ತು ಮನೋಹರ ಕ್ರಾಂತಿಗೀತೆಗಳನ್ನು ಹಾಡಿದರು. ಎಸ್ಎಫ್ಐ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಚಳುವಳಿಯಲ್ಲಿ ಭಾಗವಹಿಸಿದ್ದರು.

ಕಾಕೋಡಿ ಎಸ್ಟೇಟ್ (ಸಕಲೇಶ್ವರ) : ಪೂರ್ವ ಮೇರೆಗೆ ಇಲ್ಲಿ ಜೈಲ್ ಭರೋ ಕಾರ್ಯಕ್ರಮವನ್ನು ಸಿಪಿಐ(ಎಂ)ನ ಕಾಕೋಡಿ ಶಾಖೆಯ ಕಾರ್ಯದರ್ಶಿ ಎಸ್. ರಾಜೇಂದ್ರರವರ ನೇತೃತ್ವದಲ್ಲಿ ನಡೆಸಲಾಯಿತು. ಸಕಲೇಶ್ವರಪುರ ತಾಲೂಕಿಗೆ ಸೇರಿದ ಯಸಳೂರು ಹೋಬಳಿಗೆ ಕಾಕೋಡಿಯಿಂದ ಬೆಳಿಗ್ಗೆ ಒಂಬತ್ತುಗಂಟೆಗೆ ಹೋಗಿ ಅಂಚೆ ಕಚೇರಿಯ ಮುಂಭಾಗದಲ್ಲಿ ಪಿಕೆಟಿಂಗ್ ನಡೆಸಲಾಯಿತು. ನಂತರ ಯಸಳೂರು ಆರಕ್ಷಕ ಠಾಣೆಯಲ್ಲಿ ಬಂಧನಕ್ಕೊಳಗಾದರು. ಇದರಲ್ಲಿ ಸುಮಾರು 90 ಜನರು ಭಾಗವಹಿಸಿದ್ದರು. ನಂತರ ರಾಜೇಂದ್ರ, ಮುತ್ತಣ್ಣ ಇವರುಗಳು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸೆಪ್ಟೆಂಬರ್ 9 ರ ಭಾರತ್ ಬಂದ್‌ಗೆ ಎಲ್ಲರನ್ನು ತಯಾರಾಗುವಂತೆ ಕೇಳಿಕೊಂಡರು.

ಮೂಡಬಿದ್ರೆ : ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯನ್ವಯ ಮೂಡಬಿದ್ರೆಯಲ್ಲಿ ಅಂಚೆ ಕಚೇರಿ ಎದುರು ಪಿಕೆಟಿಂಗ್ ನಡೆಸಿ ಕಾರ್ಯಕರ್ತರು ಬಂಧನಕ್ಕೊಳಗಾದರು. ಅದರ ಮೊದಲು ಸ್ವರಾಜ್ಯ ಮೈದಾನದಿಂದ ಪೋಸ್ಟ್ ಆಫೀಸಿನವರೆಗೆ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯ ನೇತೃತ್ವವನ್ನು ಗುರುಪುರ ಪ್ರದೇಶ ಸಿಪಿಐ(ಎಂ) ಕಾರ್ಯದರ್ಶಿ ಯು.ಬಿ. ಲೋಕಯ್ಯ, ವಾಸುದೇವ ಆಚಾರಿ ಹಾಗೂ ಮೂಡಬಿದ್ರೆ ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕು. ರಮಣಿ ವಹಿಸಿದ್ದರು. ಕಾರ್ಯಕ್ರಮದ ಕೊನೆಯದಾಗಿ ಸಭೆ ನಡೆಸಲಾಯಿತು. ವಾಸುದೇವ ಆಚಾರಿ ಸ್ವಾಗತಿಸಿದರು. ಯು. ಬಿ. ಲೋಕಯ್ಯ ಮಾತನಾಡಿದರು.

ಹುಬ್ಬಳ್ಳಿ : ಸಾಮೂಹಿಕ ಸಂಘ ಸಂಸ್ಥೆಗಳ ಸಮಿತಿ ಕರೆಯ ಮೇರೆಗೆ ಹುಬ್ಬಳ್ಳಿಯಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲಾಯಿತು. ಕಾರ್ಮಿಕ ರೈತ, ವಿದ್ಯಾರ್ಥಿ ಯುವಜನ ಮತ್ತು ಅಸಂಖ್ಯಾತ ಮಹಿಳೆಯರನ್ನು ಒಳಗೊಂಡ ಮೆರವಣಿಗೆಯು ಕೇಂದ್ರ ಸರಕಾರದ ಆರ್ಥಿಕ, ಕಾರ್ಮಿಕ, ಹಾಗೂ ಜನವಿರೋಧಿ ನೀತಿಗಳನ್ನು ಬಯಲಿಗೆಳೆಯುವ ಘೋಷಣೆಗಳನ್ನು ಕೂಗುತ್ತಾ ನಗರದ ಕಿತ್ತೂರ ಚೆನ್ನಮ್ಮ ವೃತ್ತದಲ್ಲಿ ಜಮಾಯಿಸಿತು. ಈ ಸಾವಿರಾರು ಕಾರ್ಮಿಕರು 'ರಸ್ತೆ ತಡೆ' ಚಳುವಳಿ ನಡೆಸಿದರು. ಸುಮಾರು ಅರ್ಧಗಂಟೆ ರಸ್ತೆ ತಡೆಗಟ್ಟಿದ್ದ ಈ ಚಳುವಳಿಗಾರರನ್ನು ಪೋಲೀಸರು ದಸ್ತಗಿರಿ ಮಾಡಿ ಜೈಲಿಗೆ ಕರೆದೊಯ್ದರು. ನಂತರ ಬಿಡುಗಡೆ ಮಾಡಿದರು.

ಚಳುವಳಿಯ ನೇತೃತ್ವವನ್ನು ಎಮ್. ಎಚ್.ಮುಲ್ಲಾ, ಡಿ.ಜೆ.ಗೋಂದಕರ (ಸಿಐಟಿಯು), ಎಮ್. ರಾಮರಾವ್, ಎಂ.ಡಿ. ದೊಡ್ಡಗೌಡರ, (ಎ.ಐ.ಟಿ.ಯು.ಸಿ.) ಸಿ.ಆರ್. ಭಟ್ (ಧಾರವಾಡ ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ) ಹಾಗೂ ಬಸವರಾಜ ಬಜಂತ್ರಿ (ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟ) ನಾರಾಯಣ ಬಾಬು ನಿಂಬಳಿಗೆ (ಭಾರತ ವಿದ್ಯಾರ್ಥಿಗಳ ಒಕ್ಕೂಟ) ಅಲ್ಲದೆ ಕೆ.ಎಸ್.ಆರ್.ಟಿ.ಸಿ. ಸ್ಟಾಫ್ ಮತ್ತು ಕಾರ್ಮಿಕರ ಒಕ್ಕೂಟ ಎನ್.ಸಿ. ಬಣಕಾರ ವಹಿಸಿದ್ದರು.

ಸಿಂಧನೂರು : ದೇಶದ 42 ಸಾಮೂಹಿಕ ಸಂಘಟನೆಗಳ ಅಡಿಯಲ್ಲಿ ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿ, ಮತ್ತು ಹೊಸ ಶಿಕ್ಷಣ, ಹೊಸ ಕೈಗಾರಿಕಾ ನೀತಿ, ದವಸಧಾನ್ಯಗಳ ಬೆಲೆ ಏರಿಕೆ, ನಿರುದ್ಯೋಗದ ಸಮಸ್ಯೆ ಇವುಗಳನ್ನು ವಿರೋಧಿಸಿ ಆಗಸ್ಟ್ 19 ರ ಕೇಂದ್ರಾದ್ಯಂತ ಪಿಕೆಟಿಂಗ್ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅದರ ಅಂಗವಾಗಿ ಸಿಂಧನೂರು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ತಾಲೂಕು ಸಮಿತಿ ನೇತೃತ್ವದಲ್ಲಿ ಆಗಸ್ಟ್ 19, ರಂದು ವಿದ್ಯಾರ್ಥಿಗಳು ಶಾಲಾ ಕಾಲೇಜುಗಳ ತರಗತಿಗಳನ್ನು ಬಹಿಷ್ಕರಿಸಿ ಮೆರವಣಿಗೆ ನಡೆಸಿದರು. ಸ್ಥಳೀಯ ಕೇಂದ್ರ ಸರಕಾರೀ ಕಚೇರಿಗಳ ಪಿಕೇಟಿಂಗ್ ನಡೆಸಲಾಯಿತು.

ದಾಂಡೇಲಿ : ಆಗಸ್ಟ್ 19, 1993 ರಂದು ದಾಂಡೇಲಿಯಲ್ಲಿ ಜೈಲ್ ಭರೋ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು.

ಅಂದು ಬೆಳಿಗ್ಗೆ 9 ಗಂಟೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೂ ಜನತಾದಳದ ಕಾರ್ಯಕರ್ತರು ಕಿತ್ತೂರು ಚೆನ್ನಮ್ಮ ಸರ್ಕಲ್ ಸುತ್ತಲೂ ಸಭೆ ಸೇರಿದರು ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ವತಿಯಿಂದ ಭೀಮರಾವ್, ಜನತಾದಳದ ವತಿಯಿಂದ ಆರ್.ಎಸ್. ನಾಯ್ಕ ಮಾತನಾಡಿದರು. ನಂತರ ಎರಡು ಪಕ್ಷಗಳ 500 ಕಾರ್ಯಕರ್ತರು ದಾಂಡೇಲಿಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ತೆಗೆದು ತಂತಿ ಕಚೇರಿಯ ಅಧಿಕಾರಿಯವರಿಗೆ ಮನವಿ ಅರ್ಪಿಸಿದರು. ನಂತರ ಪೋಸ್ಟ್ ಆಫೀಸಿಗೆ ಮುತ್ತಿಗೆ ಹಾಕಲಾಯಿತು. ಆಗ ಎಲ್ಲಾ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ಬಿಡುಗಡೆ ಮಾಡಿದರು. ಸುಮಾರು 50 ರಷ್ಟು ಮಹಿಳೆಯರು ಭಾಗವಹಿಸಿದ್ದರು.

ಹಾಸನ: ಹಾಸನ ಜಿಲ್ಲೆಯಲ್ಲಿ ಸಿಐಟಿಯು ಸದಸ್ಯರಿರುವ ತೋಟಗಳಲ್ಲಿ ಆಗಸ್ಟ್ 19ರ ಜೈಲ್ ಭರೋ ಕಾರ್ಯಕ್ರಮದಲ್ಲಿ ಭಾಗವಹಿಸಲು ಕಾರ್ಮಿಕರು ಯಶಸ್ವಿ ಮುಷ್ಕರ ನಡೆಸಿ ಸಕಲೇಶ್ವರ ಪುರ, ಬೇಲೂರು ಮತ್ತು ಯಸಳೂರುಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಿ ಕಚೇರಿಗಳನ್ನು ಮುತ್ತಿಗೆ ಹಾಕಿ ಬಂಧನಕ್ಕೊಳಗಾದರು.

ಸಕಲೇಶ್ವರಪುರದಲ್ಲಿ ಸುಮಾರು 800 ಕ್ಕೂ ಹೆಚ್ಚು ತೋಟ ಕಾರ್ಮಿಕರು ಮತ್ತು ಪ್ಲೈವುಡ್ ಕಾರ್ಖಾನೆಯ ಕಾರ್ಮಿಕ ನಾಯಕರಾದ ಕಾಂ. ವಿ. ಸುಕುಮಾರ್, ಕಾಂ. ದೂಜ ಮತ್ತು ಕಾಂ. ಕೆ. ಕೃಷ್ಣರವರ ನೇತೃತ್ವದಲ್ಲಿ ನರಸಿಂಹರಾವ್ ಸರಕಾರದ ಅಪಾಯಕಾರಿ ಹೊಸ ಆರ್ಥಿಕ ಹಾಗೂ ಕೈಗಾರಿಕಾ ನೀತಿಗಳ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಸಿ, ತಹಸಿಲ್ದಾರರವ ಕಚೇರಿಯನ್ನು ಮುತ್ತಿಗೆ ಹಾಕಿ ಬಂಧನಕ್ಕೊಳಗಾದರು.

ಪ್ರಜಾಶಕ್ತಿ

KRNM/BGS-405 MAG(2) PRB DECR 319-78/79

ಕೋಮುವಾದದ ವಿರುದ್ಧ ಹೋರಾಟ ಒಂದು ಜೀವನ್ಮರಣ ಹೋರಾಟ

ದೆಹಲಿಯಲ್ಲಿ ವಿಚಾರ ಸಂಕಿರಣ

ರಾಜಕೀಯವನ್ನು ಧರ್ಮದಿಂದ ಬೇರ್ಪಡಿಸುವ ಮಸೂದೆ ಅತ್ಯಂತ ಅಗತ್ಯ ಆದರೆ ನಿಜವಾದ ಹೋರಾಟ ರಾಜಕೀಯ ಹೋರಾಟವೇ--ಜನಗಳ ಮನಗೆದ್ದು ದೇಶವನ್ನು ಛಿದ್ರಗೊಳಿಸಹೊರಟಿರುವ ಕೋಮುವಾದಿ ವಿಚಿದ್ರಕಾರಿ ಶಕ್ತಿಗಳ ನಿಜರೂಪದ ಬಗ್ಗೆ ಜನಜಾಗೃತಿಗೊಳಿಸಬೇಕಾದ ರಾಜಕೀಯ ಹೋರಾಟ. ಈ ಹೋರಾಟವಿಲ್ಲದೆ ಭಾರತವೆಂಬ ಒಂದು ಜಾತ್ಯತೀತ ಪ್ರಜಾಪ್ರಭುತ್ವ ದೇಶಕ್ಕೆ ಭವಿಷ್ಯವೇ ಇಲ್ಲ. ಹೀಗೆಂದು ಎಚ್ಚರಿಸಿದವರು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್, ಸ್ವಾತಂತ್ರ್ಯ ದಿನದ ಮುನ್ನಾದಿನ ಆಗಸ್ಟ್ 14 ರಂದು ನವದೆಹಲಿಯಲ್ಲಿ ನಡೆದ ವಿಚಾರಸಂಕಿರಣವೊಂದರಲ್ಲಿ ಮಾತನಾಡುತ್ತಾ ಆಗಸ್ಟ್ 9 ರಿಂದ 15 ರವರೆಗೆ ರಾಷ್ಟ್ರೀಯ ಐಕ್ಯತಾ ವಾರಾಚಾರಣೆಗೆ ಕರೆ ನೀಡಿದ ರಾಷ್ಟ್ರೀಯ ಏಕತಾ ಆಂದೋಲನದ ಕಾರ್ಯಕ್ರಮದ ಭಾಗವಾಗಿ ಈ ವಿಚಾರಸಂಕಿರಣ ನಡೆಯಿತು. ಮಾಜಿ ಲೋಕಸಭಾ ಅಧ್ಯಕ್ಷ ರಬಿರಾಯ್ ಅಧ್ಯಕ್ಷತೆ ವಹಿಸಿದ್ದರು. ಸಿಪಿಐನ ಎ.ಬಿ. ಬರ್ಧನ್ ಕಾರ್ಯಕ್ರಮವನ್ನು ನಿರ್ವಹಿಸಿದರು.

ನಮ್ಮ ರಾಷ್ಟ್ರೀಯ ವಿಮೋಚನಾ ಹೋರಾಟ ಈ ಪ್ರಶ್ನೆಯನ್ನು ಪ್ರಾಮಾಣಿಕವಾಗಿ ಎತ್ತಿಕೊಳ್ಳಲಿಲ್ಲ ಎಂದು ಇತಿಹಾಸವನ್ನು ಅವಲೋಕಿಸುತ್ತಾ ಸುರ್ಜಿತ್ ತಮ್ಮ ಭಾಷಣದಲ್ಲಿ ವಿವರಿಸಿದರು. 1939 ರಲ್ಲಿ ಕಾಂಗ್ರೆಸ್‌ನ ತ್ರಿಪುರೀ ಅಧಿವೇಶನದಲ್ಲಿ ತಾನು ಮೌಲಾನಾ ಆಝಾದ್‌ರೊಂದಿಗೆ ನಡೆಸಿದ ಒಂದು ಸಂವಾದವನ್ನು ಅವರು ನೆನಪಿಸಿಕೊಂಡರು. ಆ ಕಾಂಗ್ರೆಸ್ ಅಧಿವೇಶನ ಪಂಡಿತರ ಶ್ಲೋಕ ಪಠನದೊಂದಿಗೆ ಆರಂಭವಾದುದನ್ನು ಕಂಡ ಆಝಾದ್ ಈ ತರದ ವರ್ತನೆಯಿದೆ ಎಂದು ತಿಳಿದರೆ ಯಾವ ಬುದ್ಧಿಯಿರುವ ಮುಸ್ಲಿಮ ತಾನೇ ಕಾಂಗ್ರೆಸ್ ಸೇರಬಲ್ಲ ಎಂದು ಉದ್ಗರಿಸಿದರಂತೆ. ದೇಶವನ್ನು ಗುಲಾಮಿಕೆಯಲ್ಲೇ ಇಡುವ ಬ್ರಿಟಿಷರ ಕುತಂತ್ರವನ್ನೇನೋ ಸೋಲಿಸಿದೆವು ಆದರೆ ದೇಶವನ್ನು ಇಬ್ಭಾಗಮಾಡಿಕೊಂಡೆವು. ನಮ್ಮ ಸಂವಿಧಾನದ ಕರ್ತೃಗಳು ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಆರಿಸಿಕೊಂಡರು. ಆದರೆ ಕೋಮುವಾದದ ಲಕ್ಷಣಗಳು ಮುಂದುವರಿದವು. ಅವೀಗ ಭೂತಾಕಾರತಾಳಿ ಇಡೀ ನಮ್ಮ ರಾಜಕೀಯ ವ್ಯವಸ್ಥೆಯನ್ನೇ ನುಂಗಹೊರಟಿವೆ ಎಂದರು ಸುರ್ಜಿತ್. ಕಾಂಗ್ರೆಸ್ಸಿನ, ನರಸಿಂಹರಾಯರ ಜಾತ್ಯಾತೀತತೆಯಲ್ಲಿನ ಗೋಸುಂಬೆತನವನ್ನು ಬಯಲಿಗೆಳೆಯುತ್ತಾ ಚಂದ್ರಸ್ವಾಮಿ, ಶಂಕರಾಚಾರ್ಯರು, ಸೋಮಯಜ್ಞಗಳು ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವ, ಕೋಮುವಾದದ ವಿರುದ್ಧ ಹೋರಾಡುವ ರೀತಿಯಲ್ಲ ಎಂದು ಎಚ್ಚರಿಸಿದರು.

ಗಾಂಧೀಜಿಯ 'ಸರ್ವ ಧರ್ಮ ಸಮಭಾವ' ದ ವಿಚಾರವನ್ನು ಬಿಜೆಪಿ ದುರುದ್ದೇಶಪೂರ್ವಕವಾಗಿ ವಿಕೃತಗೊಳಿಸಿದೆ ಎಂದು ಯೋಜನಾ ಆಯೋಗದ ಮಾಜಿ ಸದಸ್ಯ ರಜನೀ ಕೊಠಾರಿ ದೂಷಿಸಿದರೆ ಆರ್.ಎಸ್.ಪಿ. ಮುಖಂಡ ಸುಶೀಲ್ ಭಟ್ಟಾಚಾರ್ಯ 1989 ರ ಫ್ರೆಂಚ್ ಕ್ರಾಂತಿಯಿಂದ ಜಾತ್ಯಾತೀತ ವಿಚಾರ ಬೆಳೆದು ಬಂದ್ದನ್ನು ಗುರುತಿಸಿದರು. ಜೀವನಾವಶ್ಯಕ ವಸ್ತುಗಳ ಅಭಾವ ಒಂದು ಧರ್ಮದ ಜನಗಳನ್ನು ಇನ್ನೊಂದು ಧರ್ಮದ ಜನಗಳ ವಿರುದ್ಧ ಎತ್ತಿಕಟ್ಟಲು ನೆರವಾಗುತ್ತಿದೆ ಎಂದರು. ಮತ-ಧರ್ಮ ಮತ್ತು ನೈತಿಕತೆ ಒಂದೇ ಎಂಬ ಅರ್ಥದಲ್ಲಿ ಬಳಸುವುದನ್ನು ಟೀಕಿಸಿದ ಜನತಾದಳದ ಮುಖಂಡ ಎಸ್.ಆರ್. ಬೊಮ್ಮಾಯಿ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವುದೆಂದರೆ ರಾಜಕೀಯದಲ್ಲಿ ನೈತಿಕತೆ ಇಲ್ಲದಂತೆ ಮಾಡುವುದು ಎಂಬ ಕೋಮುವಾದಿಗಳ ಅಪಪ್ರಚಾರವನ್ನು ನಿರಾಕರಿಸಿದರು. ಧರ್ಮ ನಮ್ಮ ರಾಜಕೀಯ ಜೀವನದ ಆಧಾರವಾಗಲು ಸಾಧ್ಯವಿಲ್ಲ. ನಾವು ಹಿಂದು ವಿದೇಶಾಂಗ ನೀತಿ, ಮುಸ್ಲಿಂ ವಿದೇಶಾಂಗ ನೀತಿ, ಹಿಂದೂ ಆರ್ಥಿಕ ನೀತಿ, ಮುಸ್ಲಿಂ ಆರ್ಥಿಕ ನೀತಿ, ಹಿಂದೂ ಕೈಗಾರಿಕಾ ನೀತಿ, ಮುಸ್ಲಿಂ ಕೈಗಾರಿಕಾ ನೀತಿ ಎಂದೆಲ್ಲಾ ಹೇಳಲು ಸಾಧ್ಯವೇ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದವರು ಫಾರ್ವರ್ಡ್ ಬ್ಲಾಕ್ ಮುಖಂಡ ಚಿತ್ತಬಸು.

ಪ್ರಜಾಪ್ರಭುತ್ವಕ್ಕೆ ಅಪಾಯ ಬಂದಿರುವುದು ನಿಜ, ಆದರೆ ಅದು ಬಿಜೆಪಿ ಹೇಳುವ ರೀತಿಯಲ್ಲ ಎಂದ ಸಿಪಿಐ ಮುಖಂಡ ಇಂದ್ರಜಿತ್ ಗುಪ್ತ ಈಗ ಸಂಸತ್ತಿನ ಮುಂದಿರುವ ಮಸೂದೆಗಳಲ್ಲಿನ ಅಪಾಯಕಾರೀ ಅಂಶಗಳನ್ನೆಲ್ಲಾ ತೆಗೆದುಹಾಕಿದರೆ ಅದು ಧರ್ಮ ರಾಜಕೀಯದೊಳಗೆ ಮೂಗು ತೂರಿಸುವುದನ್ನು ತಡೆಯಬಲ್ಲ ಒಂದು ಪರಿಣಾಮಕಾರಿ ಸಾಧನವಾಗಬಲ್ಲದು ಎಂದರು. ಕೋಮುವಾದದ ವಿರುದ್ಧ ಜನಗಳ ಪ್ರಜ್ಞೆಯನ್ನು ಎಚ್ಚರಿಸುತ್ತಿರುವ 'ಸಹಮತ್' ಪ್ರಯತ್ನಗಳನ್ನು ಅವರು ಅಭಿನಂದಿಸಿದರು.

ಎಸ್.ಜೆ.ಪಿ.ಯ ಯಶವಂತ ಸಿನ್ಹಾ ಆತ್ಮಪರೀಕ್ಷೆಯ, ಸಂಕುಚಿತ ಚುನಾವಣಾ ಪ್ರಯೋಜನದಿಂದ ಮೇಲೆದ್ದು ಯೋಚಿಸುವ ಅಗತ್ಯವಿದೆ ಎಂದರು. ಐ.ಪಿ.ಎಫ್.ನ ನಾಗಭೂಷಣ ಪಟ್ನಾಯಕ್ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವ ಬಗ್ಗೆ ಬಹಳ ತಡವಾಗಿ ನಾವು ಎಚ್ಚೆತ್ತಿದ್ದೇವೆ ಎನ್ನುತ್ತಾ 'ಸರ್ವಧರ್ಮ ಸಮಭಾವ' ದ ಹೆಸರಲ್ಲಿ ಎಲ್ಲಾ ಧರ್ಮಗಳನ್ನು ಖುಷಿಗೊಳಿಸುವ ಪ್ರವೃತ್ತಿಯ ವಿರುದ್ಧ ಎಚ್ಚರಿಕೆ ನೀಡಿದರು. ಎಸ್.ಯು.ಸಿ.ಐ.ನ ಅಶುತೋಷ್ ಬ್ಯಾನರ್ಜಿ ಧಾರ್ಮಿಕ ಮೌಲ್ಯ-ವ್ಯವಸ್ಥೆ ಯಾವುದೇ ನಮ್ಮ ಇಂದಿನ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲಾರದು ಎಂದರು.

ಸಂಸತ್ತಿನ ಮುಂದೆ ತಂದಿರುವ ಮಸೂದೆಗಳ ಲೋಪದೋಷಗಳ ಬಗ್ಗೆ ಎಲ್ಲಾ ಭಾಷಣಕಾರರು ಮಾತನಾಡಿದರು. ಕೋಮುವಾದದ ವಿರುದ್ಧ ಹೋರಾಟವನ್ನು ದೇಶದ ಮೂಲೆ-ಮೂಲೆಗೆ ಒಯ್ಯಬೇಕಾದ ಅಗತ್ಯವನ್ನು ಎಲ್ಲರೂ ಒತ್ತಿ ಹೇಳಿದರು.

ಸಮಾರೋಪ ಭಾಷಣ ಮಾಡಿದ ರಬಿರಾಯ್ ಆರ್.ಎಸ್.ಎಸ್. ಕೂಟದ ದುಷ್ಟ ಚಟುವಟಿಕೆಗಳು 90 ಕೋಟಿ ಭಾರತೀಯರಿಗೊಂದು ಸವಾಲು ಎನ್ನುತ್ತಾ ರಾಷ್ಟ್ರೀಯ ಏಕತಾ ಆಂದೋಲನ ನಡೆಸುತ್ತಿರುವ ಪ್ರಚಾರ-ಪ್ರಕ್ಷೋಭೆ ದೇಶದೊಳಗೆ ಹಾಗೂ ವಿದೇಶಗಳಲ್ಲೂ ಪರಿಣಾಮ ಬೀರಿದೆ ಎಂದರು. ಉದಾಹರಣೆಯಾಗಿ ಅಮೇರಿಕಾದಲ್ಲಿ ವಿ.ಹೆಚ್.ಪಿ.ಯ 'ವಿಶ್ವದರ್ಶನ2000'ವನ್ನು ವಿರೋಧಿಸಲು 2000 ಯುವಜನರು ಮುಂದೆ ಬಂದಿರುವುದನ್ನು ಪ್ರಸ್ತಾಪಿಸಿದರು. ಕಾಂಗ್ರೆಸ್(ಐ) ಕಳೆದ ಹತ್ತು ವರ್ಷಗಳಲ್ಲಿ ಬಿತ್ತಿದ ಬೀಜದ ಫಲಗಳನ್ನು ಈಗ ಬಿಜೆಪಿ ಅನುಭವಿಸುತ್ತಿದೆ ಎಂದು ಅಯೋಧ್ಯೆಯ ಘಟನೆಗಳ ಸಂದರ್ಭದಲ್ಲಿ ಹೇಳಿದ ಅವರು ಉತ್ತರ ಪ್ರದೇಶದಲ್ಲಿ ಈ ಎರಡೂ ಪಕ್ಷಗಳನ್ನು ಜಾತ್ಯಾತೀತ ಶಕ್ತಿಗಳು ಸೋಲಿಸುತ್ತವೆ ಎಂಬ ಭರವಸೆ ವ್ಯಕ್ತಪಡಿಸಿದರು.

ಈ ವರ್ಷದ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ನಡೆದ ಎರಡು ಪ್ರಮುಖ ಘಟನೆಗಳ ವರದಿಗಳು ಇಲ್ಲಿವೆ. ಮೊದಲನೆಯದು ಆಗಸ್ಟ್ 14 ರಂದು ರಾಷ್ಟ್ರೀಯ ಏಕತಾ ಆಂದೋಲನದ ಆಶ್ರಯದಲ್ಲಿ ನಡೆದ ರಾಷ್ಟ್ರದ ರಾಜಧಾನಿಯಲ್ಲಿ ಧರ್ಮ ಮತ್ತು ರಾಜಕೀಯ ಕುರಿತಾದ ವಿಚಾರಸಂಕಿರಣ, ಇನ್ನೊಂದು ದೇಶದ ಏಕತೆಗೆ ಸವಾಲಿನ ಸಂಕೇತವಾಗಿಬಿಟ್ಟಿರುವ ಅಯೋಧ್ಯೆಯಲ್ಲಿ ದೇಶದ ಪ್ರಖ್ಯಾತ ಕಲಾವಿದರು ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿಹಿಡಿಯುತ್ತಾ ಕೋಮುಸೌಹಾರ್ದತೆಯನ್ನೂ ಎತ್ತಿಹಿಡಿದ ಕಾರ್ಯಕ್ರಮ - ಮುಕ್ತನಾದ. ಸ್ವಾತಂತ್ರ್ಯ ಹೋರಾಟದಲ್ಲಿ ರೂಪುಗೊಂಡ ಭಾರತೀಯರ ಜೀವನ ಮೌಲ್ಯಗಳನ್ನು ನೆನಪಿಸಿಕೊಟ್ಟ ಘಟನೆಗಳು.

ದೇಶದಲ್ಲೇ ಅಪೂರ್ವವಾದ "ಮುಕ್ತನಾದ" ಮೊಳಗಿದೆ

"ಅಯೋಧ್ಯೆಯಲ್ಲಿ ಸ್ವಾತಂತ್ರ್ಯ ದಿನದಂದು ಮಹಾಘೋಷಣೆ"

ಆಗಸ್ಟ್ 14-15 ರ ನಡುವಿನ ರಾತ್ರಿ ಸರಯೂ ನದಿತೀರದಲ್ಲಿ ಒಂದು ಅಭೂತಪೂರ್ವ ಮೇಳ ನಡೆಯಿತು. ಭಾರತೀಯ ಸಂಸ್ಕೃತಿ ಹಾಗೂ ನಾಗರಿಕತೆಯನ್ನು ವಿಕೃತಗೊಳಿಸುವ ಕೋಮುವಾದದ ವಿರುದ್ಧ ಕಲಾವಿದರ, ಬುದ್ಧಿಜೀವಿಗಳ, ಸಾಂಸ್ಕೃತಿಕ ಕಾರ್ಯಕರ್ತರ ಹೋರಾಟದ ಕಹಳೆ ಕೇಳಿಬಂತು. ಕೋಮುವಾದಿ ಶಕ್ತಿಗಳು ಸೆರೆ ಹಿಡಿದ ಭಾರತೀಯ ಜನಗಳ ಸೃಜನಶೀಲತೆಯ ಬಿಡುಗಡೆಯ 'ಮುಕ್ತನಾದ'ಮೊಳಗಿತು. ವಿಶೇಷತೆಯೆಂದರೆ ಒಂದೆಡೆ ವಿ.ಹೆಚ್.ಪಿ. - ಭಜರಂಗದಳದ ಬೆದರಿಕೆಗಳನ್ನು, ಇನ್ನೊಂದೆಡೆ ಆಡಳಿತದ ಕಿರುಕುಳವನ್ನು ಲೆಕ್ಕಿಸದೆ ಈ ನಾದ ಮೊಳಗಿತು. ಮುಕ್ತ ಅಭಿವ್ಯಕ್ತಿಗಾಗಿ ನಾವು ಎಲ್ಲಾ ಅಪಾಯಗಳನ್ನು ಎದುರಿಸಲು ಸಿದ್ಧರಾಗಬೇಕಾಗಿದೆ. ಅಡ್ಡಿ-ಆತಂಕಗಳ ಎಲ್ಲಾ ಕೋಟೆ ಕೊತ್ತಲಗಳನ್ನು ಧ್ವಂಸಮಾಡಬೇಕಾಗಿದೆ ಎಂದು ಮುಕ್ತಿಭೋದ್ ಎಂಬ ಹಿಂದಿ ಕವಿಯ ಮಾತಿಗೆ ಅಲ್ಲಿ ನೆರೆದಿದ್ದವರೆಲ್ಲಾ ದನಿಗೂಡಿಸಿದರು.

ಡಿಸೆಂಬರ್ 6ರ ನಂತರ ಅಯೋಧ್ಯೆ ಕೋಮುವಾದಿಗಳಿಗೆ ಒಂದು ದೊಡ್ಡ ಸಂಕೇತವಾಗಿ ಬಿಟ್ಟಿದೆ. ಆದ್ದರಿಂದ ಆ ಸಂಕೇತಕ್ಕೆ ಯಾವುದೇ ಸವಾಲು ಬರದಂತೆ ಎಚ್ಚರದಿಂದಿರುವ ಆ ಶಕ್ತಿಗಳು ಸಹಜವಾಗಿಯೇ ಈ 'ಮುಕ್ತನಾದ' ಮೊಳಗದಂತೆ ಮಾಡಲು ಕಾತುರರಾಗಿದ್ದರು. ಸ್ವತಃ ವಾಜಪೇಯಿಯವರು ಉತ್ತರಪ್ರದೇಶದ ರಾಜಧಾನಿ ಲಕ್ನೊದಲ್ಲಿ ಠಿಕಾಣಿ ಹೂಡಿ ವಿ.ಹೆಚ್.ಪಿ.- ಭಜರಂಗದಳದ ಭಾಷೆಯಲ್ಲಿ ಮಾತನಾಡಲಾರಂಭಿಸಿದರು. ಫೈಜಾಬಾದ್‌ನಲ್ಲಿ 'ಸಹಮತ್' ಏರ್ಪಡಿಸಿದ 'ಹಮ್ ಸಬ್ ಅಯುಧ್ಯಾ' ದ ಮೇಲೆ ಬಿಜೆಪಿ ಕಾರ್ಯಕರ್ತರ ಗೂಂಡಾಗಿರಿಯನ್ನು ಸಮರ್ಥಿಸಿಕೊಂಡರು. ಎಂದಿನಂತೆ ಅದು ಜನಗಳ ಭಾವನೆಗೆ ನೋವು ಉಂಟುಮಾಡಿದೆ ಎಂಬ ನೆಪವೊಡ್ಡಿ. ಮತ್ತೊಂದು ಕಡೆ ಫೈಜಾಬಾದ್ - ಅಯೋಧ್ಯೆಯಲ್ಲಿ ವಿ.ಹೆಚ್.ಪಿ.-ಭಜರಂಗದಳದ ವಿನಯ್ ಖತಿಯಾರ್, ಅಶೋಕ್ ಸಿಂಘಾಲ್, ಗಿರಿಲಾಲ್ ಕಿಶೋರ್ ಇತ್ಯಾದಿಗಳು ಪತ್ರಿಕೆಗಳನ್ನು, ಜನಗಳನ್ನು ಹೆದರಿಸಿದರು.

ಹೆದರಲು ಸಿದ್ಧವಿದ್ದ ಜಿಲ್ಲಾ ಆಡಳಿತ ಸಹಮತ್‌ನ ಈ ಕಾರ್ಯಕ್ರಮವನ್ನು ವಿಫಲಗೊಳಿಸುವಂತೆ ಚುಚ್ಚುತ್ತಿದ್ದರು. ಕೆಲವು ಮುಸ್ಲಿಂ ಯುವಕರು ಆ ದಿನ ಬಾಬ್ರಿ ಮಸೀದಿಯ ಅಡಿಗಲ್ಲು ಹಾಕುತ್ತಾರೆ ಎಂಬ ವದಂತಿ ಹಬ್ಬಿಸಿದರು. ಜಿಲ್ಲಾ ಆಡಳಿತ ಈ ವದಂತಿಯನ್ನು ಆಧರಿಸಿ ಈ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಿಸಲು ಪ್ರಯತ್ನಿಸಿತು. ಆದರೆ ವಿವಿಧೆಡೆಯಿಂದ ಬಂದ ಒತ್ತಡಗಳಿಂದ ಕೊನೆಗೂ ಅನುಮತಿ ನೀಡಬೇಕಾಗಿ ಬಂದರೂ, ಹಲವು ಎಂ.ಪಿಗಳು ಹಾಗೂ ಕೇಂದ್ರಮಂತ್ರಿ ಅರ್ಜುನ್ ಸಿಂಗ್ ಭಾಗವಹಿಸಿದ್ದರಿದ ಈ ಕಾರ್ಯಕ್ರಮಕ್ಕೆ ಭದ್ರತಾ ಕ್ರಮ ಏರ್ಪಡಿಸಬೇಕಾಗಿ ಬಂದರೂ ಹಲವು ಅಡೆತಡೆಗಳನ್ನು ಒಟ್ಟದೇ ಇರಲಿಲ್ಲ. ಕೆಲವಂತೂ ಹಾಸ್ಯಾಸ್ಪದವಾಗಿದ್ದವು. ಉದಾಹರಣೆಗೆ 46 ವರ್ಷಗಳ ಹಿಂದೆ ಮಾಡಿದ ನೆಹರೂರವರ ಭಾಷಣದ ಧ್ವನಿಮುದ್ರಿಕೆಯನ್ನು ಹಾಕಬಾರದು ಎಂದಿತು. ಸ್ಥಳೀಯ ಜನಗಳು ಇದರಲ್ಲಿ ಭಾಗವಹಿಸಬಾರದು ಎಂದಿತು. ರಾಷ್ಟ್ರಪತಿ ಆಳ್ವಿಕೆ ಇರುವ ಈ ರಾಜ್ಯದ ಜಿಲ್ಲಾ ಆಡಳಿತ! ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಕಲಾವಿದರು ಒಂದು ಮೈಲಿಯಷ್ಟು ನಡೆದೇ ಹೋಗುವಂತೆ ಮಾಡಿತು. ಆದರೂ ಕಲಾವಿದರ ಸ್ಪಂದನವನ್ನು ತಡೆಯುವುದು ಕೋಮುವಾದಿಗಳಿಗಾಗಲೀ, ಆಡಳಿತಕ್ಕಾಗಲೀ ಸಾಧ್ಯವಾಗಲಿಲ್ಲ.

ಆಗಸ್ಟ್ 14, ಆಗಸ್ಟ್ 15 ಕ್ಕೆ ಕಾಲಿಡುತ್ತಿದ್ದಂತೆ ನೆಹರೂ 46 ವರ್ಷಗಳ ಹಿಂದೆ ಅದೇ ಹೊತ್ತಿನಲ್ಲಿ ಸಂವಿಧಾನ ಸಭೆಯಲ್ಲಿ ಮಾಡಿದ ಭಾಷಣದ ಪ್ರಸಾರದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ರಾಷ್ಟ್ರೀಯ ಆಂದೋಲನದಲ್ಲಿ ಭಾರತದ ಜನತೆ ರೂಪಿಸಿಕೊಂಡ ಮೌಲ್ಯಗಳು ಈಗಲೂ ಸಮಂಜಸ ಎಂಬುದರ ಸಂಕೇತವಾಗಿತ್ತದು. ಈ ಭಾಷಣದ ಪ್ರಸಾರ ಮುಗಿಯುತ್ತಿದ್ದಂತೆ ಸರಯೂ ನದಿಯಲ್ಲಿ ಸಾವಿರಾರು ದೀಪಗಳನ್ನು ತೇಲಿಬಿಡಲಾಯಿತು.

ಮರುದಿನ ಬೆಳಿಗ್ಗೆ 10 ಗಂಟೆಯವರೆಗೂ ಸಂಗೀತ, ನೃತ್ಯ, ನಾಟಕಗಳ ಪ್ರದರ್ಶನ ನಿರಂತರವಾಗಿ ಸಾಗಿತು. ಉಮ್ಮಾಲಪುರಂ ಶಿವರಾಮನ್, ಪಾಗಲ್‌ದಾಸ್, ಕೇಳುಚರಣ್ ಮಹಾಪಾತ್ರ, ಮಾಧವಿ ಮುಗ್ದಲ್, ಸಿತಾರಾ ದೇವಿ, ಗಿರಿಜಾದೇವಿ, ಕಿಶನ್ ಮಹರಾಜ್, ರಾಜನ್‌ಮಿಶ್ರಾ, ಮತ್ತು ಸಾಜನ್ ಮಿಶ್ರಾ, ಮೆಂಡೋಲಿನ್ ಶ್ರೀನಿವಾಸ್, ವಾಲ್ಕಾಟ್ ಸ್ವಾಮಿ, ಬಿಹಾರ, ಬಂಗಾಳದ ನಾಟಕ ತಂಡಗಳು, ಪ್ರಖ್ಯಾತ ಹಿಂದೀ ರಂಗ ನಿರ್ದೇಶಕ ಹಬೀಬ್ ತನ್ವೀರ್ ನಾಟಕ, ಪ್ರಖ್ಯಾತ ಸರೋದ್ ಕಲಾವಿದ ಅಮ್ಜದ್ ಅಲಿಖಾನ್‌ರವರು ಈ ಸಂದರ್ಭಕ್ಕಾಗಿಯೇ ಸೃಜಿಸಿದ ಒಂದು ವಿಶೇಷ ರಚನೆ-ಕಾರ್ಯಕ್ರಮದಲ್ಲಿ ಭಾಗವಹಿಸಿದವರನ್ನೆಲ್ಲಾ ಮಂತ್ರಮುಗ್ದಗೊಳಿಸಿದವು. ಎಂ.ಕೆ. ರೈನಾ, ಗಿರೀಶ್ ಕಾರ್ನಾಡ್, ಶಾಹ ಎನ್ ಖರೀಂ. ಎಂ.ಎ. ಬೇಬಿ ಮತ್ತು ಎಂ.ಎಂ.ಬಾವಾ ಕಾರ್ಯಕ್ರಮವನ್ನು ನಿರ್ವಹಿಸಿದರು. ಪ್ರಖ್ಯಾತ ಆಟಗಾರರ ಸಂದೇಶಗಳಿದ್ದ ಒಂದು ಪೋಸ್ಟರನ್ನು ಬಿಡುಗಡೆಮಾಡಲಾಯಿತು. ಕಳೆದ ದಶಕದ ಪ್ರಖ್ಯಾತ ಹಾಕಿ ಆಟಗಾರ ಸುರ್ಜಿತ್ ಕುಮಾರ್ ಅದನ್ನು ಬಿಡುಗಡೆಮಾಡಿದರು.

ಶತಮಾನಗಳಿಂದ ವಿವಿಧ ಮತ-ನಂಬಿಕೆಗಳ, ಪ್ರದೇಶಗಳ ಜನಗಳ ಕೊಡುಗೆಗಳಿಂದ ವಿಕಾಸಗೊಂಡ ನಮ್ಮ ಸಂಸ್ಕೃತಿ ಆಚರಣೆಗಳನ್ನು ಎತ್ತಿಹಿಡಿದರೆ ಕೋಮುಸೌಹಾರ್ದವನ್ನು ಪೋಷಿಸುವುದು ಸಾಧ್ಯ ಎಂಬ ಬಗ್ಗೆ 'ಮುಕ್ತನಾದ' ಕಾರ್ಯಕ್ರಮದನಂತರ ಯಾರಲ್ಲೂ ಸಂಶಯವುಳಿದಿಲ್ಲ.

ಆಗಸ್ಟ್ 19, 1993ರ "ಜೈಲ್ ಭರೋ"

ಇನ್ನಷ್ಟು ವರದಿಗಳು

ಶಹಾಪುರ : ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿ, ಹೊಸ ಕೈಗಾರಿಕ ನೀತಿ, ಕೃಷಿ ನೀತಿಯನ್ನು ವಿರೋಧಿಸಿ ಶಹಾಪುರದಲ್ಲಿ ದಿನಾಂಕ ಆಗಸ್ಟ್ 19, 1993 ರಂದು ಕರ್ನಾಟಕ ಪ್ರಾಂತ ರೈತ ಸಂಘ, ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕೆ. ಎಸ್.ಆರ್.ಟಿ.ಸಿ. ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್ ನೇತೃತ್ವದಲ್ಲಿ ಶಹಾಪುರದಲ್ಲಿ ಭಾರಿ ಮೆರವಣಿಗೆ ನಡೆಯಿತು. ರೈತರ ಕಾರ್ಮಿಕರ ವಿದ್ಯಾರ್ಥಿಗಳ ಬೇಡಿಕೆಗಳ ಬಗ್ಗೆ ಕ್ರಾಂತಿಕಾರಿ ಘೋಷಣೆ ಕೂಗುತ್ತಾ ತಹಸೀಲ್ದಾರರ ಕಚೇರಿಗೆ ಮುತ್ತಿಗೆ ಹಾಕಲಾಯಿತು. ಬೇಡಿಕೆಗಳ ಮನವಿಯನ್ನು ರೈತ ಸಂಘದ ಮುಖಂಡರಾದ ಸಿ.ಎಸ್. ಆನೇಗುಂದಿ ಸಲ್ಲಿಸಿದರು.

ಮೆರವಣಿಗೆಯ ಮುಖಂಡತ್ವವನ್ನು ಎಸ್ ಎಫ್.ಐ ಅಧ್ಯಕ್ಷರಾದ ಬಸವರಾಜ ಕಂವಳ್ಳಿ, ಆಮಲಪ್ಪ ಬೇವಿನ ಕಟ್ಟಿ, ಸಹಕಾರ್ಯದರ್ಶಿಗಳಾದ ಚೈಲಾಲ್ ತೋಟದಮನಿ, ಕೆ. ಎಸ್. ಆರ್.ಟಿ.ಸಿ. ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್ ಅಧ್ಯಕ್ಷರಾದ ಸೀತಾರಾಮ, ಅಮರಯ್ಯ ಸ್ವಾಮಿ, ಸೋಮಶೇಖರ ಸಜ್ಜನ, ಸುಖಮನಿ ಹಾಗೂ ಎ.ಐ.ಕೆ.ಎಸ್.ನ ಭೀಮಣ್ಣ ಕಟ್ಟಿಮನಿ, ವೆಂಕಟೇಶ ಕಸಬೆಟ್ಟಿಯವರು ವಹಿಸಿದ್ದರು. ಪೋಲೀಸ್ ಅಧಿಕಾರಿಗಳು ನಿಮ್ಮೆಲ್ಲರನ್ನು ಸೋಲ್ಲಾಪುರ ಜೇಲಿಗೆ ಒಯ್ಯುತ್ತೇವೆಂದು ಹೇಳಿದರು, ರೈತರು, ಕಾರ್ಮಿಕರು ವಿದ್ಯಾರ್ಥಿಗಳು, . ನಮ್ಮ ದೆಹಲಿಗೆ ತೆಗೆದುಕೊಂಡು ಹೋದರು ಸರಿ ಎಂದು ಹೇಳುತ್ತಾ ಪೋಲೀಸ್ ವ್ಯಾನ್ ಹತ್ತಿ ಕ್ರಾಂತಿಕಾರಿ ಘೋಷಣೆ ಕೂಗುತ್ತಾ 95 ಜನರು ಬಂಧನಕ್ಕೊಳಗಾದರು.

ಕೋಲಾರ : ಹಿಂದಿ ಭಾಷೆಯನ್ನು ಪ್ರೌಢಶಿಕ್ಷಣದಲ್ಲಿ ಕಡ್ಡಾಯಗೊಳಿಸಿರುವುದನ್ನು ವಿರೋಧಿಸಿ, ನಿವೃತ್ತ ಶಿಕ್ಷಕರ ಮರು ನೇಮಕ ರದ್ದುಗೊಳಿಸಿ, ಎಲ್ಲಾ ಖಾಲಿ ಇರುವ ಶಿಕ್ಷಕರ ಭರ್ತಿಗಾಗಿ ಒತ್ತಾಯಿಸಿ, ಮಿತಿ ಮೀರಿ ಸುಲಿಗೆ ಮಾಡುತ್ತಿರುವ ಕ್ಯಾಪಿಟೇಷನ್ ಡೊನೇಷನ್ ವಿರುದ್ಧ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿಗಳ ವಿರುದ್ಧ ಇನ್ನು ಮುಂತಾದ ಬೇಡಿಕೆಗಳ ಆಧಾರದಲ್ಲಿ ದಿನಾಂಕ ಆಗಸ್ಟ್ 19, 1993 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ), ವಿದ್ಯಾರ್ಥಿ ಜನತಾದಳ (ವಿ.ಜೆ.ಡಿ) ಡಿ.ವೈ.ಎಫ್.ಐ., ಡಿ.ಎಸ್.ಎಫ್., ಕನ್ನಡ ಪಕ್ಷ, ಶ್ರೀ ಭುವನೇಶ್ವರ ಕನ್ನಡ ಸಂಘ, ಕೆ.ಎಸ್. ಆರ್.ಟಿ.ಸಿ. ಕನ್ನಡ ಸಂಘ, ಮುಂತಾದ ಜಂಟಿ ಸಂಘ ಸಂಸ್ಥೆಗಳ ಆಶ್ರಯದಲ್ಲಿ ಕೋಲಾರ ನಗರದಲ್ಲಿ ಸುಮಾರು 2,000 ವಿದ್ಯಾರ್ಥಿ-ಯುವಜನ ಪೋಷಕ ರ್‍ಯಾಲಿಯನ್ನು ಏರ್ಪಡಿಸಲಾಗಿತ್ತು. ಕೋಲಾರ ನಗರದ ಗಾಂಧಿಭವನದಿಂದ ಶ್ರೀಭುವನೇಶ್ವರ ಕನ್ನಡ ಸಂಘದ ಅಧ್ಯಕ್ಷರು ಹೊನ್ನುಡಿ ಸಂಪಾದಕರಾದ ಎಂ.ಜಿ. ಪ್ರಭಾಕರ್ ಮಾತನಾಡಿ ಮಲತಾಯಿ ಧೋರಣೆಯ ಕೇಂದ್ರ ರಾಜ್ಯ ಸರ್ಕಾರಗಳ ಗೊಂದಲ ಶಿಕ್ಷಣ ರೂಪವೇ ಹಿಂದಿ ಕಡ್ಡಾಯ ಎಂದರು. ಎಸ್.ಎಫ್.ಐ. ಜಿಲ್ಲಾಧ್ಯಕ್ಷರಾದ ಎಂ.ವಿ. ನಾರಾಯಣಸ್ವಾಮಿ ಮಾತನಾಡಿ ವೈಜ್ಞಾನಿಕ ಶಿಕ್ಷಣ ನೀತಿ ಇಲ್ಲದೆ ತ್ರಿಭಾಷೆಗಳನ್ನು ಪ್ರೌಢಶಿಕ್ಷಣದಲ್ಲಿ ಹೇರಿಕೆ ಮಾಡಹೊರಟಿರುವುದು ಖಂಡನೀಯ. ಇದನ್ನು ರದ್ದುಗೊಳಿಸಿ ಹಿಂದಿ ಕಡ್ಡಾಯ ರದ್ದುಗೊಳಿಸಬೇಕು. ರದ್ದುಗೊಳಿಸದಿದ್ದಲ್ಲಿ ಮಂತ್ರಿಗಳಿಗೆ "ಘೇರಾವ್" ಮಾಡಲಾಗುತ್ತದೆ. ಕೊನೆಗೆ ಪರೀಕ್ಷೆಗಳನ್ನು ಬಹಿಷ್ಕರಿಸಲಾಗುತ್ತದೆ ಎಂದರು ತಕ್ಷಣ ಖಾಲಿ ಇರುವ ಹುದ್ದೆಗಳ ಭರ್ತಿಗೆ ಒತ್ತಾಯಿಸಿದರು. ನಂತರ ಕೆ.ಎಸ್.ಆರ್.ಟಿ.ಸಿ. ನೌಕರರ ಯೂನಿಯನ್‌ನ ಜಿಲ್ಲಾಅಧ್ಯಕ್ಷರಾದ ಎಂ.ವಿ. ಶಂಕರಪ್ಪ ಮಾತನಾಡಿ ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿದರು. ವಿದ್ಯಾರ್ಥಿ ಜನತಾದಳದ ರಾಮಚಂದ್ರ ಮನವಿ ಪತ್ರ ಓದಿ ಜಿಲ್ಲಾಧಿಕಾರಿಗಳಿಗೆ ಅರ್ಪಿಸಿದರು. ಕೇಂದ್ರ ಸರ್ಕಾರದ ಆರ್ಥಿಕ ನೀತಿ ಮತ್ತು ಕೋಮುವಾದವನ್ನು ವಿರೋಧಿಸಿ ಸುಮಾರು 300ಜನ ವಿದ್ಯಾರ್ಥಿಗಳನ್ನು ಪೋಲೀಸರು ಬಂಧಿಸಿ ಬಿಡುಗಡೆಗೊಳಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ಕಾಸಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462. ಸಂಪಾದಕರು : ಪಿ.ರಾಮಚಂದ್ರರಾವ್